# ಕುವೆಂಪು ಕಾದಂಬರಿಗಳ ಸಮಾಜ
## ಒಂದು ಅರ್ಥಶಾಸ್ತ್ರೀಯ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ


ಸಂಶೋಧಕಿ

**ಚನ್ನಮ್ಮ ಕೆ.ಸಿ.**

ಮಾರ್ಗದರ್ಶಕರು

**ಡಾ. ಕರೀಗೌಡ ಬೀಚನಹಳ್ಳಿ**





...ಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ

೨೦೦೭

# ಕುವೆಂಪು ಕಾದಂಬರಿಗಳ ಸಮಾಜ
## ಒಂದು ಅರ್ಥಶಾಸ್ತ್ರೀಯ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕಿ
**ಚನ್ನಮ್ಮ ಕೆ.ಸಿ.**



ಮಾರ್ಗದರ್ಶಕರು
**ಡಾ. ಕರೀಗೌಡ ಬೀಚನಹಳ್ಳಿ**



**ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ

೨೦೦೭

## ದೃಢೀಕರಣ ಪತ್ರ

ಚನ್ನಮ್ಮ ಕೆ.ಸಿ. ಅವರು **ಕುವೆಂಪು ಕಾದಂಬರಿಗಳ ಸಮಾಜ: ಒಂದು ಅರ್ಥಶಾಸ್ತ್ರೀಯ ಅಧ್ಯಯನ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗ ದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ : 20.06.2007

ಸ್ಥಳ : ವಿದ್ಯಾರಣ್ಯ

**(ಡಾ. ಕರೀಗೌಡ ಬೀಚನಹಳ್ಳಿ)**

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಭಾಷೆ ಮತ್ತು ಸಾಹಿತ್ಯ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

# <u>ಪ್ರಮಾಣ ಪತ್ರ</u>

**ಕುವೆಂಪು ಕಾದಂಬರಿಗಳ ಸಮಾಜ : ಒಂದು ಅರ್ಥಶಾಸ್ತ್ರೀಯ ಅಧ್ಯಯನ** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು **ಎಂ.ಫಿಲ್.** ಪದವಿಗಾಗಿ **ಕನ್ನಡ ವಿಶ್ವವಿದ್ಯಾಲಯದ** ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಸಲ್ಲಿಸಲು **ಡಾ. ಕರೀಗೌಡ ಬೀಚನಹಳ್ಳಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿ ಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೦-೬-೨೦೦೭

**(ಚನ್ನಮ್ಮ ಕೆ.ಸಿ.)**
ಎಂ.ಫಿಲ್. ವಿದ್ಯಾರ್ಥಿನಿ
ನಂ. ೪೪, ಸಿರಿ ಸಂಪಿಗೆ,
೧ನೇ ಮುಖ್ಯರಸ್ತೆ, ೩ನೇ ಹಂತ,
೪ನೇ ಬ್ಲಾಕ್, ಬನಶಂಕರಿ
ಬೆಂಗಳೂರು - ೫೬೦ ೦೮೫

# ಕೃತಜ್ಞತೆಗಳು

- ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಅವರಿಗೆ,
- ಮಾರ್ಗದರ್ಶನ ಮಾಡಿದ ಗುರುಗಳಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ,
- ಎಂ.ಫಿಲ್ ಅಧ್ಯಯನದ ಸಂದರ್ಭದಲ್ಲಿ ಸಂಶೋಧನೆಯ ವಿವಿಧ ಮಜಲುಗಳನ್ನು ಬೋಧಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ವಿ.ಬಿ.ತಾರಕೇಶ್ವರ್, ಡಾ.ಎಫ್.ಟಿ.ಹಳ್ಳಿಕೇರಿ ಅವರಿಗೆ, ತೀರ್ಥಹಳ್ಳಿ ತುಂಗಾ ಮಹಾವಿದ್ಯಾಲಯದ ಡಾ.ಎಲ್.ಸಿ.ಸುಮಿತ್ರಾ, ಡಾ.ಜೆ.ಕೆ.ರಮೇಶ್ ಅವರಿಗೆ, ಕಾವ್ಯ ಮಂಡಲದ ಪ್ರೊ.ಕಿ.ರಂ.ನಾಗರಾಜ ಅವರಿಗೆ,
- ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡ ಶ್ರೀಮತಿ ಲಕ್ಷ್ಮೀದೇವಮ್ಮ ಶ್ರೀಶೇಷಪ್ಪಗೌಡರಿಗೆ, ಶ್ರೀಹಾಲಪ್ಪ ಅವರಿಗೆ, ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದ ಮತ್ತು ಇಪ್ಪತ್ತನೇ ಶತಮಾನದ ಆರಂಭದ ದಶಕಗಳ ದಾಖಲೆಗಳನ್ನು ಒದಗಿಸಿದ ಶ್ರೀಕಡಿದಾಳು ಪ್ರಕಾಶ್ ಅವರಿಗೆ, ಶ್ರೀಆಲೆಮನೆ ಸುರೇಶ್ ಅವರಿಗೆ, ಹಳೆಯ ಮೋಡಿ ಅಕ್ಷರಗಳನ್ನು ಓದಿ ಹೇಳಿದ ಶ್ರೀ ಅಲಿಗೆ ಗಣಪಯ್ಯನವರಿಗೆ, ಮಲೆನಾಡಿನ ಸಮಾಜದ ನಿಕಟ ಪರಿಚಯ ಮಾಡಿಸಿದ ಶ್ರೀಹೊಸಮನೆ ರಮೇಶ್ ಹಾಗು ಶ್ರೀಮತಿ ಸಬಿತಾ ರಮೇಶ್ ಅವರಿಗೆ,
- ಅಧ್ಯಯನದ ಸಮಯದಲ್ಲಿ ಸೂಕ್ತ ಸಲಹೆ ನೀಡಿದ ಕುಪ್ಪಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಪ್ರವಾಚಕರಾದ ಡಾ. ಕೆ.ಸಿ.ಶಿವಾರೆಡ್ಡಿ ಹಾಗೂ ಡಾ.ಸಿ.ಗೋವಿಂದರಾಜು, ಶ್ರೀ ಎಚ್.ಪಿ.ಶಶಿಧರಮೂರ್ತಿ ಅವರಿಗೆ,
- ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಡಾ. ಎಚ್.ಬಿ.ರವೀಂದ್ರ, ಡಾ.ಕೆ.ಪ್ರೇಂಕುಮಾರ್, ಶಶಿಕುಮಾರ್ ಮತ್ತು ಆರ್.ಶ್ರೀನಿವಾಸ ಅವರಿಗೆ,
- ಸಕಾಲದಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಮತಿ ಶಾರದ ಬಸವರಾಜ್ ಅವರಿಗೆ,
- ಹಾಗೂ ಪ್ರತ್ಯಕ್ಷ- ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ,

***ಹೃತ್ಪೂರ್ವಕ ಕೃತಜ್ಞತೆಗಳು***

ಚನ್ನಮ್ಮ ಕೆ.ಸಿ.

# ಪರಿವಿಡಿ

ಅಧ್ಯಾಯ : ೧

# ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ : ೧

# ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

''ಮಲೆನಾಡೆಂದರೆ ಕರ್ನಾಟಕದ ಕಾಶ್ಮೀರ; ಪ್ರಕೃತಿಯ ಪರ್ಣಶಾಲೆ; ಅರಣ್ಯ ರಮಣೀಯ ವಿಲಾಸಕ್ಷೇತ್ರ. ದಿಗಂತದ ಮಹಾಸ್ವಪ್ನಗಳಂತೆ ಧೀರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು; ಆ ಪರ್ವತ ಗಳನ್ನು ಸರ್ವದಾ ಆಲಿಂಗಿಸಿರುವ ಚಿರಶ್ಯಾಮಲ ಕಾನನರಾಜಿ; ನಿಬಿಡ ನಿರಂತರ ತರುಚ್ಛಾಯಾ ಮಯವಾದ ಗಿರಿ ಶಿಖರಗಳಲ್ಲಿ ಆವಿರ್ಭವಿಸಿ ಅರೆಬಂಡೆಗಳ ವಕ್ರಪಥದಲ್ಲಿ ಎಡೆಬಿಡದೆ ಪ್ರವಹಿಸುವ ಹೊಳೆತೊರೆಗಳು; ಗಿರಿಕಂದರಗಳಲ್ಲಿ ಕಂಗೊಳಿಸುವ ಅಡಕೆ ತೋಟಗಳು, ಬತ್ತದ ಗದ್ದೆಗಳು; ಗಿಳಿ, ಕಾಮಳ್ಳಿ, ಕಾಜಾಣ, ಪಿಕಳಾರ, ತೇನೆ, ಚೋರೆ, ಕೋಗಿಲೆ ಮೊದಲಾದ ಅಸಂಖ್ಯ ಜಾತಿಯ ಪಕ್ಷಿಗಳ ಕಲಗಾನ, ವಿಧವಿಧ ಜಾತಿಯ ಕಾಡಿನ ಮತ್ತು ನಾಡಿನ ಜಂತುಗಳು; ಪ್ರೇಮಲ ಸ್ವಭಾವದವರೂ ಶಾಂತಜೀವಿಗಳೂ ಉದಾರಿಗಳೂ ಆಗಿರುವ ಸರಳ ಹೃದಯದ ಒಕ್ಕಲು ಮಕ್ಕಳು; ಇವೆಲ್ಲದರ ಸಾನಿಧ್ಯದಿಂದ ಮಲೆನಾಡು ಅತ್ಯಂತ ರಮಣೀಯವೂ ಕಮನೀಯವೂ ಆಗಿದೆ.'' (ಕುವೆಂಪು:1998:13)

ಮಲೆನಾಡಿನ ವರ್ಣನೆಯನ್ನು ಕುವೆಂಪು ಅವರು ತಮ್ಮ ಸಾಹಿತ್ಯ ಪ್ರಕಾರಗಳಲ್ಲೆಲ್ಲ ವರ್ಣಿಸಿರುವರು. ಇಂಥಹ ಸುಂದರ ಹಾಗು ಸಮೃದ್ಧ ನೈಸರ್ಗಿಕ ಸಂಪನ್ಮೂಲವನ್ನು ಹೊಂದಿರುವ ಮಲೆನಾಡಿನ ಆರ್ಥಿಕತೆ ಯನ್ನು ಕುವೆಂಪು ಅವರ ಕಾದಂಬರಿಗಳ ಮೂಲಕವೇ ಅಧ್ಯಯನ ಮಾಡುವುದು ಈ ಸಂಶೋಧನೆಯ ಉದ್ದೇಶ. ಅಡಕೆ, ಏಲಕ್ಕಿ, ಮೆಣಸಿನಂತಹ ವಾಣಿಜ್ಯ ಬೆಳೆಗಳನ್ನು ರಫ್ತು ಮಾಡುತ್ತಿದ್ದ ಅಂದಿನ ಸಮಾಜದ ಆಗು ಹೋಗುಗಳನ್ನು ಪರಿಚಯಿಸಿಕೊಳ್ಳುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಒಂದು ಸಾಹಿತ್ಯ ಕೃತಿಯು ಆ ದೇಶದ ಸಂಸ್ಕೃತಿಯನ್ನು, ಪರಂಪರೆಯನ್ನು ತೋರಿಸುವ ಒಂದು ಕೈಗನ್ನಡಿ. ಲೇಖಕರು ಆ ಸಮಾಜದ, ಸಂಸ್ಕೃತಿಯ ಕೂಸಾಗಿರುತ್ತಾರೆ. ಅವರ ಸಾಹಿತ್ಯ ಕೃತಿಗಳಲ್ಲಿ ತಮ್ಮ ಮೇಲೆ ತಮ್ಮ ಸುತ್ತಲಿನ ಪರಿಸರ, ಘಟನೆಗಳು, ಆಚರಣೆಗಳು ಮಾಡಿದ ಪ್ರಭಾವವನ್ನು ಸಾಹಿತ್ಯ ಕೃತಿಯ ಮೂಲಕ ವ್ಯಕ್ತಪಡಿಸುತ್ತಾರೆ. ಓದುಗರಿಗೆ ಒಂದು ಹೊಸ ಜಗತ್ತನ್ನು ತೆರೆದಿಡುತ್ತಾರೆ.

ಕುವೆಂಪು ಅವರು ಕೇವಲ ಎರಡು ಕಾದಂಬರಿಗಳನ್ನು ಬರೆದರು. ಈ ಕಾದಂಬರಿಗಳ ನಿರೂಪಣೆ, ಪಾತ್ರ ಚಿತ್ರಣ, ಪ್ರಾದೇಶಿಕತೆ, ಎಲ್ಲವೂ ವಿಶಿಷ್ಟವಾಗಿ ಹೊರಹೊಮ್ಮಿವೆ. ಪಶ್ಚಿಮ ಘಟ್ಟಗಳ ಹೃದಯ ಭಾಗದಲ್ಲಿರುವ ಮಲೆನಾಡಿನ ಜನಜೀವನದ ಪರಿಚಯವನ್ನು ತಮ್ಮ ಕೃತಿಗಳ ಮೂಲಕ ಮಾಡಿಸಿದ್ದಾರೆ.

1936ರ ಸುಮಾರಿಗೆ ಪ್ರಕಟವಾದ 'ಕಾನೂರು ಹೆಗ್ಗಡಿತಿ' ಮತ್ತು 1967ರ ಸಮಯದಲ್ಲಿ ಪ್ರಕಟವಾದ 'ಮಲೆಗಳಲ್ಲಿ ಮದುಮಗಳು'-ಇವು ಕನ್ನಡ ಸಾಹಿತ್ಯದ classics ಎಂದು ಕರೆದರೂ ತಪ್ಪಾಗುವುದಿಲ್ಲ. ಈ ಕಾದಂಬರಿಯ ಕಾಲಘಟ್ಟ 1895ರಿಂದ 1940. ಸುಮಾರು ನಲ್ವತ್ತೈದು ವರ್ಷಗಳ ಕಾಲಾವಧಿಯಲ್ಲಿ ಆಗುತ್ತಿದ್ದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಆಗು ಹೋಗುಗಳನ್ನು ಈ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಆದರೆ ಕುವೆಂಪು ಅವರು ಹುಟ್ಟಿದ್ದು 1904ರಲ್ಲಿ. ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಥೆಯ ಸಮಯ 1895ರದ್ದು! ಕುವೆಂಪು ಅವರು ತಾವು ಹುಟ್ಟುವ ಮೊದಲೇ ಇದ್ದ ಸಮಾಜದ ಚಿತ್ರಣವನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಟ್ಟಿಕೊಟ್ಟರು. ಹಾಗಾಗಿ ಕಾದಂಬರಿಯ ವಾಸ್ತವತೆಯ ಬಗ್ಗೆ ಗಮನಹರಿಸಿ ವಸ್ತುನಿಷ್ಠವಾಗಿ ಅಧ್ಯಯನ ಮಾಡಬೇಕಾದ ಅವಶ್ಯವಿದೆ. ಕುವೆಂಪು ವಿದ್ಯಾರ್ಥಿದೆಸೆಯಿಂದ ಕುಪ್ಪಳಿಯ ಹೊರಗಿದ್ದು ವಿದ್ಯಾಭ್ಯಾಸ ಮಾಡಿದವರು. ರಜೆಯಲ್ಲಿ ಕುಪ್ಪಳಿಗೆ ಹೋಗುತ್ತಿದ್ದರು. ಆದ್ದರಿಂದ ಅವರು 'ಕಾನೂರು ಹೆಗ್ಗಡಿತಿ'ಯಲ್ಲಿ ಇದ್ದ ಆರ್ಥಿಕ ಸಂದರ್ಭಗಳು ಕಾಲ್ಪನಿಕವೇ? ಎಂದು ತಿಳಿದುಕೊಳ್ಳಬೇಕಾಗಿದೆ.

ಸೃಜನಶೀಲ ಸಾಹಿತ್ಯದ ಮೂಲಕ ವಸ್ತುನಿಷ್ಠ ಅಧ್ಯಯನ ಮಾಡಲು ಹೊರಟಾಗ ಕಾಲ್ಪನಿಕ ಸಂಗತಿಗಳು ಮುಖ್ಯವಾಗುವುದಿಲ್ಲ. ಆದ್ದರಿಂದ ಕಾಲ್ಪನಿಕ ಹಾಗು ವಸ್ತು ನಿಷ್ಠತೆಯ ಮಧ್ಯೆ ಸ್ಪಷ್ಟತೆಯನ್ನು ಉಂಟು ಮಾಡಿಕೊಳ್ಳುವುದು ಅಗತ್ಯವಾಗಿದೆ.

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು, ಅಲ್ಲಿಯ ಸಾಮಾಜಿಕ ಧಾರ್ಮಿಕ ಗುಣಗಳು ನಿಯಂತ್ರಿಸುತ್ತವೆ. ಆರ್ಥಿಕ ವಿಷಯಗಳು ಸಾಮಾಜಿಕ ಆಗುಹೋಗುಗಳನ್ನು ನಿರ್ಧರಿಸುತ್ತವೆ. ಆದ್ದರಿಂದ ಕಾದಂಬರಿಗಳಲ್ಲಿರುವ ಸಮಾಜೋ-ಆರ್ಥಿಕ ವಿಷಯಗಳು ಹೇಗೆ ಪರಸ್ಪರ ಪ್ರಭಾವ ಬೀರುತ್ತವೆ ಎಂದು ತಿಳಿಯುವುದು ಈ ಅಧ್ಯಯನದ ಉದ್ದೇಶ.

ಭಾರತ ಕೃಷಿಯಾಧಾರಿತ ಸಮಾಜವಾಗಿದೆ. ಸಾವಿರಾರು ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿದ್ದರೂ ಕೃಷಿ ಕೇವಲ ಜೀವನಾಧಾರ (subsistence level) ಮಟ್ಟದಲ್ಲಿದೆಯೇ ಹೊರತು ಪಾಶ್ಚಾತ್ಯರಂತೆ ಬಂಡವಾಳಶಾಹಿ ವ್ಯವಸಾಯ ಆಗಿಲ್ಲ. ವಸಾಹಿತುಶಾಹಿಯ ಆಳ್ವಿಕೆ ಪ್ರಾರಂಭವಾದ ನಂತರ ಭಾರತದ ಜನ ಸಮುದಾಯದ ಮೇಲೆ ಪಾಶ್ಚಾತ್ಯ ಚಿಂತನೆಗಳನ್ನು ಹೇರುವ ಕಸರತ್ತು ಪ್ರಾರಂಭವಾಯಿತು. ಅದರ ಮುಖ್ಯ ಧ್ಯೇಯೋದ್ದೇಶ ತಮ್ಮ ಸರ್ಕಾರದ ಕಂದಾಯವನ್ನು ಹೆಚ್ಚಿಸಿಕೊಳ್ಳುವುದೇ ಆಗಿತ್ತು. ಇದರ ಪರಿಣಾಮವಾಗಿ ಜಮೀನ್ದಾರರು ಒಕ್ಕಲುಗಳಿಂದ ಹೆಚ್ಚಿನ ಗೇಣಿಯನ್ನು ವಸೂಲು ಮಾಡುತ್ತಿದ್ದರು. ಇದರ ಸ್ವರೂಪವನ್ನು ಅರಿಯುವುದೇ ಈ ಅಧ್ಯಯನದ ಉದ್ದೇಶವಾಗಿದೆ.

ರಾಜ್ಯದ ಬೊಕ್ಕಸಕ್ಕೆ ಕೃಷಿಯು ಕಂದಾಯದ ಮೂಲವಾಗಿತ್ತು, ಸಾಂಪ್ರದಾಯಿಕ ರಾಜಾಡಳಿತ, ವಸಾಹತುಶಾಹಿ ಆಡಳಿತ ಬಂದಾಗಲೂ ಈ ಸ್ಥಿತಿ ಬದಲಾಗಲಿಲ್ಲ. ಬ್ರಿಟಿಷರು ಆಡಂ ಸ್ಮಿತ್, ಡೇವಿಡ್

ರಿಕಾರ್ಡೋ, ಜೇಮ್ಸ್ ಮಿಲ್‌ರಂಥಹ ಅರ್ಥಶಾಸ್ತ್ರಜ್ಞರ ವಿಚಾರಧಾರೆಯ ಪ್ರಭಾವಕ್ಕೆ ಒಳಗಾಗಿ ಲಾಭದಾಯಕವಾದ ಕೃಷಿ ಭೂಮಿ ನೀತಿಯನ್ನು ಭಾರತದಲ್ಲಿ ಪ್ರತಿಪಾದಿಸಿದರು. ಇದರ ಫಲವಾಗಿ 1793ರಲ್ಲಿ ಕಾರ್ನ್‌ವಾಲೀಸನು ಜಮೀನ್ದಾರಿ ಪದ್ಧತಿ (Permanent Land Settlement)ಯನ್ನು ಜಾರಿಗೆ ತಂದನು. ಅನಂತರ 1820ರಲ್ಲಿ ಮದರಾಸ್ ಮತ್ತು ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿ ರೈತವಾರಿ ಪದ್ಧತಿ ಜಾರಿಗೆ ಬಂದಿತು. 'ಭೂಮಿಯ ಒಟ್ಟು ಉತ್ಪತ್ತಿ (gross produce) ಯಲ್ಲಿ ಅತಿ ಹೆಚ್ಚಿನ ಭಾಗ ಸರ್ಕಾರಕ್ಕೆ ಸಲ್ಲುತ್ತಿದ್ದಂಥ ಕಂದಾಯ ಆಡಳಿತ ವ್ಯವಸ್ಥೆಗೆ ಬ್ರಿಟಿಷರು ಭಾರತದಲ್ಲಿ ಉತ್ತರಾಧಿ ಕಾರಿಗಳಾಗಿದ್ದರು.' (ಶಿವಣ್ಣ ಕೆ.ಎಸ್.: 1984:42)

ಮಲೆನಾಡಿನಲ್ಲಿ ಸಾಂಪ್ರದಾಯಿಕ ರೈತವಾರಿ ಪದ್ಧತಿ ಇತ್ತು. ನಿಯಮಿತವಾಗಿ ಸರ್ಕಾರಕ್ಕೆ ಕಂದಾಯ ಕಟ್ಟುವವರು ಖಾತೆದಾರರಾಗಿ ಭೂ ಸ್ವಾಮಿತ್ವ ಪಡೆಯುತ್ತಿದ್ದರು. ಇವರು ಒಕ್ಕಲುಗಳಿಂದ ವಸೂಲಿ ಮಾಡಬೇಕಾದ ಗೇಣಿಯನ್ನು ನಿಗದಿಪಡಿಸಿರಲಿಲ್ಲ. ಹಾಗಾಗಿ ಕಂದಾಯವೂ ನಿಗದಿಯಾಗಿರಲಿಲ್ಲ. ಕಂದಾಯ ಹಾಗು ಗೇಣಿಯ ದರದಲ್ಲಿ ಏರಿಳಿತಗಳಿದ್ದವು. ಈ ವ್ಯವಸ್ಥೆಯು ಮಲೆನಾಡಿನ ಸ್ವಾತಂತ್ರ್ಯ ಪೂರ್ವ ಸಮಾಜದ ಜನ ಜೀವನದ ಮೇಲೆ ಹೇಗೆ ಪರಿಣಾಮ ಬೀರಿತು ಎಂಬುದನ್ನು ಎರಡನೇ ಅಧ್ಯಾಯದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದೆ. ಅಲ್ಲದೆ ಶ್ರೇಣೀಕೃತ ಭಾರತೀಯ ಸಮಾಜದಲ್ಲಿ ಜಮೀನ್ದಾರರ ಮತ್ತು ಒಕ್ಕಲುಗಳ ಸಂಬಂಧ ಹೇಗಿತ್ತು ಎಂಬುದನ್ನು ಅರಿಯುವುದು ಈ ಅಧ್ಯಾಯದ ಉದ್ದೇಶ.

ಕೃಷಿಯಾಧಾರಿತ ಬಡ ಸಮಾಜವನ್ನು ಶ್ರೀಮಂತರು ಲೇವಾದೇವಿ ವ್ಯವಹಾರದಿಂದ ತಮ್ಮ ಕೈವಶಮಾಡಿ ಕೊಂಡಿದ್ದರು. ಬಡ್ಡಿ ಚಕ್ರಬಡ್ಡಿಗಳಿಂದ ಜನರು ಸಾಲ ಮರುಪಾವತಿಸಲಾಗದಂತೆ ಮಾಡಿ ಅವರ ಆಸ್ತಿ ಯನ್ನು ಮಟ್ಟುಗೋಲು ಹಾಕಿಕೊಳ್ಳುತ್ತಿದ್ದರು. ಇದರಿಂದ ಬಡವರ ಮತ್ತು ಶ್ರೀಮಂತರ ನಡುವೆ ಆಳವಾದ ಕಂದರವೇರ್ಪಟ್ಟಿತ್ತು. ಲೇವಾದೇವಿಯ ಪ್ರಕಾರಗಳು, ಅದರ ಕಾರಣಗಳನ್ನು ಮೂರನೆ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಮಲೆನಾಡಿನಲ್ಲಿ ಕರ್ನಾಟಕದಲ್ಲೆಲ್ಲಿಯೂ ಕಾಣದ ಜೀತ ವ್ಯವಸ್ಥೆ ಚಾಲ್ತಿಯಲ್ಲಿತ್ತು. ಆ ಒಬ್ಬ ವ್ಯಕ್ತಿ ಮಾತ್ರ ಒಡೆಯರ ಕೆಲಸ ಮಾಡಿ ಸಾಲ ತೀರಿಸುವವನಾಗಿರದೆ ಇಡೀ ಕುಟುಂಬವೇ ಜೀತ ವ್ಯವಸ್ಥೆಗೆ ತನ್ನನ್ನು ಒಡ್ಡಿಕೊಂಡಿದ್ದಂತಹ ವಿಲಕ್ಷಣ ಸ್ಥಿತಿ ಅಲ್ಲಿದ್ದುದನ್ನು ಕಾಣುತ್ತೇವೆ.

ಜಮೀನ್ದಾರರು, ಶ್ರೀಮಂತರು ಕೆಳ ಜಾತಿಯವರಿಗೆ ಸಾಲ ಕೊಟ್ಟು ಮದುವೆ ಮಾಡಿಸಿ, ಅವರ ಇಡೀ ಕುಟುಂಬವನ್ನೇ ಜೀತದಾಳುಗಳನ್ನಾಗಿ ಮಾಡಿಕೊಂಡು ಅವರನ್ನು ಶೋಷಿಸುತ್ತಿದ್ದರು. ಇದಕ್ಕೆ ಬಹುಮುಖ್ಯ ಕಾರಣ ಮಾಡಿಕೊಂಡು ಹೆಣ್ಣಿಗೆ ಕೊಡುವ 'ತೆರ'. 'ತೆರ'ದ ಪದ್ಧತಿಗೆ ಮಹಿಳೆಯರ ಜನಸಂಖ್ಯೆ ಕಡಿಮೆ ಇದ್ದುದೇ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಅಂದಿನ ಜನಸಂಖ್ಯೆ, ಆರೋಗ್ಯ ಮಹಿಳಾ ಮತ್ತು ಶಿಶು ಮರಣ ಪ್ರಮಾಣ ಮತ್ತು ಸಮಾಜದ ಮೌಢ್ಯವನ್ನು ವಿಶ್ಲೇಷಿಸುವ ಪ್ರಯತ್ನವನ್ನು ನಾಲ್ಕನೇ ಅಧ್ಯಾಯದಲ್ಲಿ ಮಾಡಲಾಗಿದೆ. ಅದರ ಜೊತೆಯಲ್ಲಿಯೇ ಜೀತದಾಳುಗಳ ದಯನೀಯ ಸ್ಥಿತಿಯ ಬಗ್ಗೆಯೂ ಗಮನ ಹರಿಸಲಾಗಿದೆ.

ಬತ್ತ ಮತ್ತು ವಾಣಿಜ್ಯ ಬೆಳೆಯಾದ ಅಡಕೆಯೇ ಮೂಲ ಬೆಳೆಯಾಗಿರುವ ಮಲೆನಾಡು ಏಲಕ್ಕಿ, ಮೆಣಸನ್ನೂ ರಫ್ತು ಮಾಡುತ್ತಿದ್ದಂತಹ ನಾಡು. ಈ ಪ್ರದೇಶದ ವ್ಯಾಪಾರದ ಬಗ್ಗೆ ಅಧ್ಯಯನ ನಡೆಸಲು ಐದನೇ ಅಧ್ಯಾಯದಲ್ಲಿ ಪ್ರಯತ್ನ ಮಾಡಲಾಗಿದೆ.

ಕುವೆಂಪು ಅವರ ಕಾದಂಬರಿಗಳಲ್ಲಿ ಅಲ್ಲಿನ ವ್ಯಾಪಾರಸ್ಥರು ಮುಸ್ಲಿಂ ಜನಾಂಗದ ದಕ್ಷಿಣ ಕನ್ನಡವರಾಗಿರುತ್ತಾರೆ. ಆಗ ದಕ್ಷಿಣ ಕನ್ನಡ ಮಲೆನಾಡಿನಂತೆ ಮೈಸೂರು ಪ್ರಾಂತ್ಯಕ್ಕೆ ಸೇರಿರಲಿಲ್ಲ. ಈ ಹಿನ್ನೆಲೆಯಲ್ಲಿ ಗಟ್ಟದ ಕೆಳಗಿನಿಂದ ಮಲೆನಾಡಿಗೆ ಬರುತ್ತಿದ್ದ ಜನರ ವಲಸೆ, ಪರಸ್ಥಳ ವ್ಯಾಪಾರಿಗಳ ವ್ಯಾಪಾರದ ರೀತಿ, ವಸ್ತು ವಿನಿಮಯ, ವ್ಯಾಪಾರದಲ್ಲಿ ಅನುಸರಿಸುತ್ತಿದ್ದ ಮೋಸ -ಈ ಅಂಶಗಳ ವಿಶ್ಲೇಷಣೆ ಐದನೆ ಅಧ್ಯಾಯದಲ್ಲಿದೆ.

ಇದರೊಂದಿಗೆ ಸ್ಥಳೀಯ ಸಮಾಜದವರಾದ ಶ್ರೀ ಹಾಲಪ್ಪ, ಶ್ರೀಮತಿ ಲಕ್ಷ್ಮೀಬಾಯಿ, ಶ್ರೀ ಶೇಷಪ್ಪ ಗೌಡರ ಅನುಭವ ಮತ್ತು ಆಲೆಮನೆ ಸುರೇಶ್ ಹಾಗು ಕಡಿದಾಳು ಪ್ರಕಾಶ್ ಅವರ ಮನೆಯಲ್ಲಿ ದೊರೆತ ದಾಖಲೆಗಳಿಂದ ಅಧ್ಯಾಯಗಳಿಗೆ ಆಕರಗಳನ್ನು ದೊರಕಿಸಿದ್ದೇನೆ. ದಿವಂಗತ ಕಡಿದಾಳು ಎಸ್. ರಾಮಪ್ಪಗೌಡರ ಎರಡು ಪುಸ್ತಕಗಳು ಸಹ ಸಾಕಷ್ಟು ಆಧಾರ ಒದಗಿಸಿವೆ.

ಮಲೆನಾಡ ಸಮಾಜದ ಮೇಲೆ ಆರ್ಥಿಕ ಅಂಶಗಳ ಬಲವಾದ ಪ್ರಭಾವವನ್ನು ಇಲ್ಲಿ ಕಾಣಬಹುದು ಮತ್ತು ಸಾಮಾಜಿಕ ವ್ಯವಸ್ಥೆಯೂ ಆರ್ಥಿಕ ಶೋಷಣೆಗೆ ಹೇಗೆ ಕಾರಣವಾಗಿದೆ ಎಂಬುದನ್ನೂ ಜೊತೆಯಲ್ಲಿಯೇ ಪರಿಶೀಲಿಸಲಾಗಿದೆ. ಕಾದಂಬರಿಗಳೊಡನೆ, ಅದಕ್ಕೆ ಪೂರಕವಾಗಿರುವ ಅಂದಿನ ದೈನಂದಿನ ಸ್ಥಿತಿ ಗಳನ್ನು ಅಭ್ಯಸಿಸುವುದರೊಂದಿಗೆ ಕಾದಂಬರಿಗಳಲ್ಲಿರುವ ವಿವರಗಳು ಕಾಲ್ಪನಿಕವೇ? ವಾಸ್ತವಿಕವೇ? ಎಂಬುದನ್ನು ಚರ್ಚಿಸುತ್ತ ಅವುಗಳ ಅರ್ಥಶಾಸ್ತ್ರಿಯ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ.

❐

ಅಧ್ಯಾಯ : ೨

# ಜಮೀನ್ದಾರಿ ಪದ್ಧತಿ

ಅಧ್ಯಾಯ : ೨

# ಜಮೀನ್ದಾರಿ ಪದ್ಧತಿ

## 2.1. ಪರಿಚಯ :

ಮೈಸೂರು ಸಂಸ್ಥಾನದ ಶಿವಮೊಗ್ಗ ಜಿಲ್ಲೆಯ ಮಲೆನಾಡು ತೀರ್ಥಹಳ್ಳಿ, ಹೊಸನಗರ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿಯನ್ನು ಒಳಗೊಳ್ಳುತ್ತದೆ. ಈ ಭಾಗ ದಟ್ಟ ಕಾಡು ಪ್ರದೇಶಗಳಿಂದ ಪಶ್ಚಿಮ ಘಟ್ಟಗಳ ಗುಡ್ಡ ಪರ್ವತಗಳಿಂದ ಕೂಡಿದ್ದು ವರ್ಷಕ್ಕೆ ಇನ್ನೂರರಿಂದ ಮುನ್ನೂರು ಇಂಚು ಮಳೆ ಸುರಿಯುತ್ತಿದ್ದಂತಹ ಪ್ರದೇಶವಾಗಿದೆ.

ಈ ಪ್ರದೇಶದಲ್ಲಿ ಗೌಡರು ಪ್ರಮುಖ ಜನಾಂಗದವರಾಗಿದ್ದರು. ಇವರನ್ನು ಒಕ್ಕಲಿಗರೆಂದೂ ಕರೆಯುವುದುಂಟು. ಒಕ್ಕಲು ಎಂದರೆ ಕೃಷಿಕ ಎಂದು ಅರ್ಥ. ಮಲೆನಾಡಿನ ಒಕ್ಕಲಿಗರು ನಾಮಧಾರಿ ಗೌಡ ಜನಾಂಗದವರು. ಇವರು ಮೊದಲು ಜೈನರಾಗಿದ್ದು ಶ್ರೀವೈಷ್ಣವ ಮತ ಸ್ಥಾಪಕರಾದ ಶ್ರೀರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಮತಾಂತರಗೊಂಡು ನಾಮಧಾರಿ ಗೌಡರಾಗಿರುತ್ತಾರೆ. (ಕಡಿದಾಳು ರಾಮಪ್ಪಗೌಡ: 1998:4)

'ಗೌಡ' ಎಂಬ ಶಬ್ದ 'ಗ್ರಾಮ ಮುಖಂಡ' ಎಂಬ ಅರ್ಥವನ್ನು ಕೊಡುತ್ತದೆ. ಒಕ್ಕಲಿಗ ಅಂದರೆ ಕೃಷಿಕ ಒಕ್ಕಲಿಗ, ಗೌಡ ಜಾತಿಯ ಸೂಚಕವಾಗಿದೆ. (ಅದೇ.) ಇವರ ಕುಲದೇವರು ತಿರುಪತಿ ವೆಂಕಟರಮಣ. ಇವರನ್ನು ಮಲೆನಾಡಿನಲ್ಲಿ ಗೌಡ, ನಾಯ್ಕ, ಹೆಗ್ಗಡೆ ಎಂದೂ ಕರೆಯುತ್ತಾರೆ. ಈ ಪದ್ಧತಿಗೆ ವಿಜಯನಗರ ಕಾಲದ ಐತಿಹಾಸಿಕ ಸಂಬಂಧವಿದೆ. ವಿಜಯನಗರದ ಅರಸರ ಕಾಲದಲ್ಲಿ ಅವರ ಆಸ್ಥಾನದಲ್ಲಿ ಆಡಳಿತವನ್ನು ನಿರ್ವಹಿಸುತ್ತಿದ್ದವನಿಗೆ ಗೌಡ ಎಂದೂ, ಸೈನ್ಯಾಧಿಕಾರಿಗೆ ನಾಯ್ಕ ಎಂದೂ, ನ್ಯಾಯಾಂಗವನ್ನು ನೋಡಿಕೊಳ್ಳುತ್ತಿದ್ದವನಿಗೆ ಹೆಗ್ಗಡೆ ಎಂದೂ ಹೆಸರು ಕೊಡುತ್ತಿದ್ದರು. ಯುದ್ಧ ಸಮಯದಲ್ಲಿ ಇವರು ಮಲೆನಾಡಿನ ಈ ಭಾಗಕ್ಕೆ ಬಂದು, ಇಲ್ಲಿಯ ಶ್ರೀವೈಷ್ಣವ ಸಂಪ್ರದಾಯದ ನಾಮಧಾರಿ ಗೌಡರೊಂದಿಗೆ ಸಂಬಂಧ ಬೆಳೆಸಿ, ಶ್ರೀವೈಷ್ಣವ ಸಂಪ್ರದಾಯಕ್ಕೆ ಒಳಗಾದರು. (ಅದೇ.)

ಒಕ್ಕಲಿಗರಿಗೆ ವ್ಯವಸಾಯವೇ ಪ್ರಮುಖ ವೃತ್ತಿಯಾಗಿತ್ತು, ಕೃಷಿ ಭೂಮಿ ವಿಸ್ತರಿಸುವುದು ಇವರ ಪ್ರಬಲವಾದ ಹವ್ಯಾಸ. ಇವರಿಗೆ ವ್ಯವಸಾಯ, ಪಶುಪಾಲನೆ ಮುಖ್ಯ ವೃತ್ತಿ, ಆದ್ದರಿಂದಲೇ ಇವರಿಗೆ ಒಕ್ಕಲಿಗ ಎಂಬ ಹೆಸರು ಬರಲು ಕಾರಣ. ಅಂತೆಯೇ ಗೇಣು ಭೂಮಿಗಾಗಿ ಸರ್ವಸ್ವವನ್ನು ಬಲಿಗೊಡುವ ಹಟಮಾರಿಗಳು. (ಕಡಿದಾಳು ರಾಮಪ್ಪಗೌಡ, ಎಸ್.:1998:6). ಇವರು ಅನೇಕ ಎಕರೆ ಜಮೀನಿನ

ಒಡೆಯರಾಗಿದ್ದು, ಕೆಲವು ಗದ್ದೆ ತೋಟಗಳನ್ನು ಗೇಣಿಯಾಧಾರದ ಮೇಲೆ ಒಕ್ಕಲುಗಳಿಗೆ ಕೊಟ್ಟಿದ್ದರು. ಒಕ್ಕಲಿಗರು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗು ರಾಜಕೀಯವಾಗಿ ಅನುಕೂಲಸ್ಥರಾಗಿದ್ದರು.

ಕುವೆಂಪು ಕಾದಂಬರಿಗಳಲ್ಲಿ ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಜಾತಿ ಶ್ರೇಣಿಯ ತುತ್ತ ತುದಿಯಲ್ಲಿರುವವರು. ಇವರ ನಂತರ ಒಕ್ಕಲಿಗರು, ನಂತರ ಅವರ ಆಳುಗಳು. ಬ್ರಾಹ್ಮಣರನ್ನು ಬಿಟ್ಟರೆ ಒಕ್ಕಲಿಗರೆ ಉತ್ತಮ ಜಾತಿಯವರಾಗಿದ್ದರು. (ಚಕ್ಕರೆ ಶಿವಶಂಕರ್:2004:199). ಇದೇ ಮುಂದುವರೆದು ಊಳಿಗಮಾನ್ಯ ಪದ್ಧತಿಯಲ್ಲಿ ಒಕ್ಕಲಿಗರು, ಜಮೀನ್ದಾರರು ತುತ್ತ ತುದಿಯಲ್ಲಿದ್ದರೆ, ಅವರ ನಂತರ ಒಕ್ಕಲುಗಳು ಮತ್ತು ಕೆಳಗಿನ ಶ್ರೇಣಿಯಲ್ಲಿ ಶ್ರಮಜೀವಿಗಳು- ಬಿಲ್ಲವರು, ಹಸಲೇರರು, ಕುಂಬಾರರು, ಹಳೆಪೈಕದವರು, ಸೆಟ್ಟರು, ಕರಾದಿಗಳು, ಬೇಲರು ಮತ್ತು ದಲಿತರು ಬರುತ್ತಾರೆ. ಇವರು ಹೊಲಗದ್ದೆಗಳಲ್ಲಿ ದುಡಿಯುವ ಶ್ರಮಜೀವಿಗಳು. ಬ್ರಾಹ್ಮಣರು ಬೌದ್ಧಿಕವಾಗಿ ಸಮಾಜದ ಎಲ್ಲ ವರ್ಗಗಳ ಮೇಲೂ ಹಿಡಿತವನ್ನಿಟ್ಟು ಕೊಂಡಿದ್ದರೆ, ಗೌಡರು ಆರ್ಥಿಕವಾಗಿ ಅದಕ್ಕಿಂತಲೂ ಬಿಗಿ ಹಿಡಿತವನ್ನು ಇಟ್ಟುಕೊಂಡಿದ್ದರು. (ಚಕ್ಕರೆ ಶಿವಶಂಕರ್:2004:199)

ಕರ್ನಾಟಕದಲ್ಲಿ ಮೊದಲಿನಿಂದಲೂ ಇದ್ದ ಜಮೀನ್ದಾರಿ ಪದ್ಧತಿಗೂ, ಬ್ರಿಟಿಷರು ತಂದ ಜಮೀನ್ದಾರಿ ಪದ್ಧತಿಗೂ ಏನೂ ಸಂಬಂಧ ವಿರಲಿಲ್ಲ. ಇಲ್ಲಿಯ ದೊಡ್ಡ ರೈತರನ್ನು ಜಮೀನ್ದಾರರೆಂದು ಕರೆಯುತ್ತಿದ್ದದ್ದು ವಾಡಿಕೆಯಲ್ಲಿತ್ತು.

## 2.2. ಮುಖ್ಯ ಆರ್ಥಿಕ ಚಟುವಟಿಕೆಗಳು :

ಒಕ್ಕಲಿಗರು ಮುಖ್ಯವಾಗಿ ಅಡಿಕೆ, ಬತ್ತ, ಕಬ್ಬನ್ನು ಬೆಳೆಯುತ್ತಿದ್ದರು. ಅಡಕೆ ತೋಟದಲ್ಲಿ ಉಪಬೆಳೆಯಾಗಿ ಮೆಣಸು, ಏಲಕ್ಕಿ, ಬಾಳೆಹಣ್ಣನ್ನು ಬೆಳೆಯುತ್ತಿದ್ದರು. ಅಡಕೆಯನ್ನು ಬೀರೂರು ಮೂಲಕ ಬಳ್ಳಾರಿ ವಲಜ್‌ಗೆ  ಕಳುಹಿಸಿ ವ್ಯಾಪಾರ ಮಾಡುತ್ತಿದ್ದರು. (Hayavadana Rao:1929C:1348)

ಪಶುಪಾಲನೆ ಮುಖ್ಯವಾಗಿದ್ದರೂ ದೊಡ್ಡ ಪ್ರಮಾಣದ ಹೈನುಗಾರಿಕೆ ಇರಲಿಲ್ಲವೆಂದು ಕಂಡು ಬರುತ್ತದೆ. ಮಲೆನಾಡಿನ ಆಕಳುಗಳು ಬಯಲುಸೀಮೆಯ ಆಕಳುಗಳಂತೆ ಹೆಚ್ಚಾಗಿ ಹಾಲು ಕೊಡುವುದಿಲ್ಲ. 'ಮಲೆನಾಡ ಗಿಡ್ಡ' ಎಂದು ಕರೆಯಲ್ಪಡುವ ಈ ಆಕಳುಗಳಿಂದ ಮನೆಗೆ ಸಾಕಾಗುವಷ್ಟು ಹಾಲು ದೊರಕುತ್ತಿರಬಹುದು. ಆಕಳಿನ ಗೊಬ್ಬರವನ್ನು ಗದ್ದೆ ತೋಟಗಳಿಗೆ ಬಳಸುತ್ತಿದ್ದರು. ಕಾದಂಬರಿಗಳಲ್ಲಿ ಎಲ್ಲಿಯೂ ಹೈನುಗಾರಿಕೆಯ ವಿಷಯವಿಲ್ಲ. ಆದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹಳೆಮನೆ ಸುಬ್ಬಣ್ಣ ಹೆಗ್ಗಡೆಯ ಮನೆಯಲ್ಲಿ ಕೋಳಿ ಒಡ್ಡಿ, ಹಂದಿ ಒಡ್ಡಿ ಇರುವ ವಿಷಯ ಬರುತ್ತದೆ. ಅದನ್ನು ಅವರು ಮಾರುತ್ತಿದ್ದರು. ಆದ್ದರಿಂದ ಪ್ರಾಣಿ ಸಾಕುವುದು ಆದಾಯದ ಮತ್ತೊಂದು ಮೂಲವಾಗಿತ್ತು.

ಮಲೆನಾಡ ಪ್ರದೇಶ ಗುಡ್ಡ ಪರ್ವತ, ದಟ್ಟ ಅರಣ್ಯಗಳಿಂದ ಆವೃತವಾಗಿದ್ದು ಅಲ್ಲಿ ಹುಲಿ, ಹಂದಿ, ಕಡವೆ, ಕರಡಿ, ಕಾಡುಕೋಣ, ಜಿಂಕೆ, ಬರ್ಕ, ಸಲಗ ಮುಂತಾದ ಕಾಡುಪ್ರಾಣಿಗಳು ಇದ್ದವು. ವ್ಯವಸಾಯಗಾರರ ಗದ್ದೆ, ತೋಟಕ್ಕೆ, ಕಬ್ಬಿನ ಬೆಳೆಗೆ ಇವುಗಳ ಕಾಟ ತಪ್ಪಿದ್ದಲ್ಲ. ಜಮೀನಿನ ರಕ್ಷಣೆ ಮತ್ತು

ಆತ್ಮರಕ್ಷಣೆಗೆ ಬೇಟೆ ಅನಿವಾರ್ಯವಾಗಿ ಮುಂದೆ ಒಕ್ಕಲಿಗರಲ್ಲಿ ಹಾಗೂ ಇತರ ಮಾಂಸಾಹಾರಿ ಮಲೆನಾಡಿಗರಲ್ಲಿ ಬೇಟೆ ಒಂದು ಮುಖ್ಯ ಹವ್ಯಾಸವಾಗಿ ಬೆಳೆಯಿತು.

ಜಮೀನುದಾರರು ಸಾವಿರಾರು ಎಕರೆಯ ಜಮೀನಿಗೆ ಒಡೆಯರಾಗಿರುತ್ತಿದ್ದರು. ಲಕ್ಕುಂದದ ಜಮೀನಿನಲ್ಲಿ ಮುಕ್ಕಾಲು ಪಾಲು ಸಿಂಬಾವಿ ಭರಮೈ ಹೆಗ್ಗಡೆಯವರಿಗೆ ಸೇರಿತ್ತು. (ಕುವೆಂಪು :2006ಬ:8) ದೇವಂಗಿಯ ಜಮೀನ್ದಾರರು ಸುಮಾರು 2000 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಎಂದು ದೇವಂಗಿ ಮನುದೇವ್ ಹೇಳುತ್ತಾರೆ. (ಮನುದೇವ್ ದೇವಂಗಿ, ಎಂ.:2005:2). ಇದರ ಬೇಸಾಯ ಮಾಡಲು ಒಕ್ಕಲುಗಳು ಕೃಷಿ ಕಾರ್ಮಿಕರು ಇರುತ್ತಿದ್ದರು. ಜಮೀನ್ದಾರಿಕೆ ವಂಶಪಾರಂಪರ್ಯವಾಗಿತ್ತು.

## 2.3. ಜಮೀನ್ದಾರರು ಮತ್ತು ಸರ್ಕಾರ :

ಶ್ರೀಮಂತ ಭೂಮಾಲಿಕರು ರೈತರಿಗೆ ಸಾಲ ಕೊಡುವಾಗ ಅವರ ಜಮೀನನ್ನು ಅಡ ಇಟ್ಟುಕೊಳ್ಳುತ್ತಿದ್ದರು. ಆ ಜಮೀನು ಎಷ್ಟೇ ದೂರವಿದ್ದರೂ ಸರಿ. ಆ ರೈತನಿಗೆ ಸಾಲ ತೀರಿಸಲು ಕಷ್ಟವಾದಾಗ ಅವರ ಜಮೀನು ಒಡೆಯರದ್ದೇ ಆಗುತ್ತಿತ್ತು. ಹೀಗೆ ಗಳಿಸಿದ ಜಮೀನಿನೊಂದಿಗೆ, ವಂಶಪಾರಂಪರ್ಯವಾಗಿ ಬಂದ ಹಾಗೂ ತಾವೇ ಕೊಂಡ ಜಮೀನಿನ ವಿಸ್ತಾರ ಹೆಚ್ಚಾಗಿ, ಒಕ್ಕಲುಗಳಿಗೆ ಜಮೀನನ್ನು ಇಂತಿಷ್ಟು ವರ್ಷಗಳಿಗೆ ಗೇಣಿ ನಿಗದಿಮಾಡಿ ಸಾಗುವಳಿಗೆ ಕೊಡುತ್ತಿದ್ದರು. ನಂತರ ಕೊಯಿಲು ಆದಾಗ ಗೇಣಿ ಗುತ್ತಿಗೆಯನ್ನು ಪಡೆದು ಸರ್ಕಾರಕ್ಕೆ ಕಂದಾಯ ಸಲ್ಲಿಸುತ್ತಿದ್ದರು. ಶ್ರೀ ಮನುದೇವ್ ಅವರು ದೇವಂಗಿ ಜಮೀನ್ದಾರರ ಬಗ್ಗೆ ಹೀಗೆ ಬರೆದಿದ್ದಾರೆ '...(ದೇವಂಗಿಯದು) ಸುಮಾರು 2000 ಎಕರೆ ಜಮೀನನ್ನು ಬೇಸಾಯ ಮಾಡಲು ಕೃಷಿ ಕಾರ್ಮಿಕರೂ, ಒಕ್ಕಲುಗಳೂ ಇರುತ್ತಿದ್ದ ಜಮೀನ್ದಾರಿ ಕುಟುಂಬ. ತಮ್ಮ ಜಮೀನ್ದಾರಿ ಪದ್ಧತಿಯಿಂದ ಮೈಸೂರು ಅರಸರಿಗೆ ಈ ಮನೆತನ ಅಪಾರ ಕಂದಾಯ ಪಾವತಿಸುತ್ತಿದ್ದರು'. (ಮನುದೇವ್ ದೇವಂಗಿ ಎಂ.:2005:2)

ಹೀಗೆ ನೂರಾರು ಎಕರೆ ಜಮೀನಿದ್ದ ಭೂಮಾಲಿಕರು ಸರ್ಕಾರಕ್ಕೆ ನಿಯಮಿತವಾಗಿ ಕಂದಾಯ ಕಟ್ಟುವುದರ ಮೂಲಕ ಖಾತೆದಾರರಾಗುತ್ತಿದ್ದರು. ಇವರಿಗೆ ಮತದಾನದ ಹಕ್ಕು ಸಿಗುತ್ತಿತ್ತು. ಹೆಚ್ಚಿನ ಜಮೀನನ್ನು ಹೊಂದಿ, ಹೆಚ್ಚಿನ ಕಂದಾಯವನ್ನು ಸಲ್ಲಿಸುತ್ತಿದ್ದ ಜಮೀನ್ದಾರರು ಮೈಸೂರಿನ ಆಸ್ಥಾನದಲ್ಲಿ ನಡೆಯುವ ವಿಶೇಷ ಸಂದರ್ಭಗಳಿಗೆ ಆಮಂತ್ರಿತರಾಗುತ್ತಿದ್ದರು. (ಮನುದೇವ್ ದೇವಂಗಿ ಎಂ.:2005:3)

ವಾಯಿದೆಗೆ ಸರಿಯಾಗಿ ಖಾತೆದಾರ ಕಂದಾಯ ಕಟ್ಟದೆ ಇದ್ದರೆ ಆ ಜಮೀನನ್ನು ಕಂದಾಯ ಬಾಕಿ ಹರಾಜಿಗೆ ತಂದು ಹರಾಜು ಮಾಡುತ್ತಿದ್ದರು. ಆಗ ಹಣವಂತರು ಬಿಡ್ಡಿನಲ್ಲಿ ಅದನ್ನು ಪಡೆಯುತ್ತಿದ್ದರು. (ಕಡಿದಾಳು ರಾಮಪ್ಪಗೌಡ ಕೆ.ಎಸ್.:1995:103). ಅಲ್ಲದೆ ಲೈಸನ್ಸ್ ಪಡೆದುಕೊಂಡೇ ಒಡೆಯರು ಬಗನಿ ಕಳ್ಳು ಇಳಿಸುವುದು ಮತ್ತು ನಾಟಾ ಕಡಿಸುವುದು ಮಾಡುತ್ತಿದ್ದರು. ಇಲ್ಲದಿದ್ದರೆ ಶಿಕ್ಷೆಗೆ ಗುರಿಯಾಗಬೇಕಿತ್ತು. ಅದಕ್ಕಾಗಿ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಬೇಲರ ಬೈರ ಮಾರ್ಕ್ ಬಂದಾಗ ತಲೆಮೋಳಿಸಿಕೊಂಡು ತನ್ನ ಗುರುತು ಸಿಗದಂತೆ ತಪ್ಪಿಸಿಕೊಂಡಿದ್ದನು. (ಕುವೆಂಪು:2006ಅ:219)

ಸರ್ಕಾರ ಮತ್ತು ಜಮೀನ್ದಾರರ ಮಧ್ಯೆ ನಿರಂತರ ಸಂಪರ್ಕವಿರುತ್ತಿತ್ತು. ಸರ್ಕಾರ ಏನೇನೋ ಹೊಸ 'ರೂಲೀಸು' ಮಾಡಿರುವ ಬಗ್ಗೆ ಹೊಸ ಅಮಲ್ದಾರರು 'ಲೋಟೀಸು' ಜಾರಿ ಮಾಡಿದ್ದರ ಬಗ್ಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪ್ರಸ್ತಾಪವಿದೆ. (ಕುವೆಂಪು:2006ಬ:116)

## 2.4. ಭೂ ಹಿಡುವಳಿ ಪದ್ಧತಿ :

''ಭೂ-ಹಿಡುವಳಿ ಪದ್ಧತಿ' ಎಂದರೆ ಒಬ್ಬ ವ್ಯಕ್ತಿಯು ಸಾಗುವಳಿಯ ಜಮೀನನ್ನು ಸರ್ಕಾರದಿಂದ ಇಲ್ಲವೆ ಜಮೀನುದಾರನಿಂದ ಯಾವ ಷರತ್ತುಗಳ ಮೇಲೆ ಪಡೆದಿದ್ದಾನೆ ಎಂಬುದನ್ನು ಸೂಚಿಸುವ ಪದ್ಧತಿಯಾಗಿದೆ.'' (ಬಸವಾ, ಕೆ.ಡಿ:1999:87) ಸಾಗುವಳಿಯ ಜಮೀನನ್ನು ಸರ್ಕಾರದಿಂದ ನೇರವಾಗಿ ಪಡೆದಿದ್ದರೆ ಅವನು ಅದರ ಸ್ವಾಮಿತ್ವದ ಹಕ್ಕನ್ನು ಪಡೆದಿರುತ್ತಾನೆ. ಇದಕ್ಕೆ 'ಸ್ವಾಮಿತ್ವದ ಹಕ್ಕು' ಅಥವಾ 'ಸ್ವಾಮಿತ್ವದ ಹಿಡುವಳಿ' (Proprietory Tenure) ಎಂದು ಕರೆಯುತ್ತಾರೆ. ಸಾಗುವಳಿಯ ಹಕ್ಕನ್ನು ಜಮೀನುದಾರನಿಂದ ಪಡೆದಿದ್ದರೆ ಆಗವನು ಕೇವಲ ಸಾಗುವಳಿಯ ಹಕ್ಕನ್ನು ಪಡೆದಿರುತ್ತಾನೆ. ಅದಕ್ಕೆ 'ಸಾಗುವಳಿಯ ಹಕ್ಕು' ಅಥವಾ 'ಸಾಗುವಳಿಯ ಹಿಡುವಳಿ' (Cultivation Tenure) ಎಂದು ಕರೆಯುತ್ತಾರೆ. ಒಕ್ಕಲುಗಳಿಗೆ ಸಾಗುವಳಿಯ ಹಕ್ಕು ಇರುತ್ತಿತ್ತು.

### 2.4.1 ಭೂ ಹಿಡುವಳಿಯ ವಿಧಗಳು :

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮೂರು ರೀತಿಯ ಭೂ-ಹಿಡುವಳಿ ಪದ್ಧತಿಗಳಿದ್ದವು.

1. ಜಮೀನ್ದಾರಿ ಪದ್ಧತಿ
2. ಮಹಲ್ವಾರಿ ಪದ್ಧತಿ
3. ರೈತವಾರಿ ಪದ್ಧತಿ

#### 2.4.1.1. ಜಮೀನ್ದಾರಿ ಪದ್ಧತಿ :

ಭಾರತದ ಕೈಗಾರಿಕೆಗಳ ಅಭಿವೃದ್ಧಿಯನ್ನು ಹತ್ತಿಕ್ಕಿದ ಬ್ರಿಟಿಷ್ ವಸಾಹತುಶಾಹಿ ಭಾರತದ ಕೃಷಿಯನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಯಿತು. ತಮ್ಮ ಮುಖ್ಯ ಆದಾಯವಾದ ಭೂ ಕಂದಾಯವನ್ನು ಲಾಭದಾಯಕನ್ನಾಗಿ ಮಾಡಲು ಭಾರತದಲ್ಲಿ ವಿವಿಧ ಕೃಷಿ ಭೂಮಿ ಧೋರಣೆಗಳನ್ನು ಅನುಸರಿಸಿದರು.

ಕಾರ್ನ್‌ವಾಲೀಸ್ 1793ರಲ್ಲಿ ಖಾಯಂಗುತ್ತಾ ಪದ್ಧತಿ (The Permanent Settlement) ಅಥವಾ ಜಮೀನುದಾರಿ ಪದ್ಧತಿಯನ್ನು ಬಂಗಾಳ, ಬಿಹಾರ ಮತ್ತು ಔಧ್ ಪ್ರಾಂತ್ಯಗಳಲ್ಲಿ ಜಾರಿಗೆ ತಂದನು. ಇದರ ಪ್ರಕಾರ ದೊಡ್ಡ ಭೂಮಾಲಿಕರಿಗೆ ಸರ್ಕಾರವು ಕೆಲವು ಎಕರೆ ಜಮೀನನ್ನು ಕೊಡುತ್ತಿತ್ತು. ಇದರಿಂದ ಪ್ರತಿವರ್ಷ ನಿರ್ದಿಷ್ಟವಾದ ಹಣ ಸರ್ಕಾರದ ಖಜಾನೆಗೆ ಭೂಕಂದಾಯದ ರೂಪದಲ್ಲಿ ಸಲ್ಲುತ್ತಿತ್ತು. ಆಡಂ ಸ್ಮಿತ್ (Adam Smith)ನ ವಿಚಾರಗಳ ಪ್ರಭಾವದಿಂದ ಈ ಪದ್ಧತಿಯನ್ನು ರೂಪಿಸಲಾಗಿತ್ತು.

ಈ ಪದ್ಧತಿಯಲ್ಲಿ ಜಮೀನ್ದಾರ ತನ್ನ ಸ್ವಂತ ಜಮೀನಿಗೆ ಮಾತ್ರ ಒಡೆಯನಾಗಿದ್ದನು; ಸರ್ಕಾರದಿಂದ ಬಂದ ಜಮೀನಿಗಲ್ಲ. ಸರ್ಕಾರದ ಜಮೀನನ್ನು ಮಾರುವ, ಅಡವಿಡುವ, ಕೌಟುಂಬಿಕ ಆಸ್ತಿಯಂತೆ ಹಂಚುವ ಹಕ್ಕು ಆತನಿಗೆ ಇರಲಿಲ್ಲ.

ಜಮೀನ್ದಾರರು ಸರ್ಕಾರದ ಪ್ರತಿನಿಧಿಗಳಂತೆ ಭೂ ಕಂದಾಯವನ್ನು ಒಕ್ಕಲುಗಳಿಂದ ವಸೂಲಿ ಮಾಡುತ್ತಿದ್ದರು. ನಿಶ್ಚಿತರೂಪದಲ್ಲಿ ಭೂ ಕಂದಾಯ ಕಟ್ಟಿ ಜಮೀನುದಾರರು ಭೂ ಹಿಡುವಳಿಯನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು. ಹೀಗೆ ಅವರು ಗ್ರಾಮೀಣ ಪ್ರದೇಶಗಳಲ್ಲಿನ ಜಮೀನುಗಳ ಒಡೆತನ ಪಡೆಯುವಂತಾಯಿತು.

ಜಮೀನ್ದಾರರು ಭೂಮಿಯನ್ನು ಸಾಗುವಳಿ ಮಾಡುವ ಕೃಷಿ ಕಾರ್ಮಿಕರಿಂದ ಪ್ರತಿವರ್ಷ ನಿಗದಿಮಾಡಿದ ಗೇಣಿಯನ್ನು ಪಡೆದು, ಗೇಣಿ ಹಣದ ಒಂದು ಭಾಗವನ್ನು ಭೂ ಕಂದಾಯವೆಂದು ಸರ್ಕಾರಕ್ಕೆ ಕೊಟ್ಟು ಉಳಿದುದನ್ನು ತಾವೇ ಇಟ್ಟುಕೊಳ್ಳುತ್ತಿದ್ದರು. ಅದು ಅವರ ನಿವ್ವಳ ಆದಾಯವಾಗಿತ್ತು.

ಜಮೀನ್ದಾರಿ ಪದ್ಧತಿಯಲ್ಲಿ ಅನೇಕ ಲೋಪದೋಷಗಳಿದ್ದವು. ಅವಾವುವೆಂದರೆ,

1. ಜಮೀನ್ದಾರರಿಗೆ ಕೃಷಿ ಕಾರ್ಮಿಕರಿಂದ ತಮಗೆ ಬರಬೇಕಿದ್ದ ಗೇಣಿಯ ಬಗ್ಗೆ ಮಾತ್ರ ಆಸಕ್ತಿಯಿತ್ತೇ ವಿನಾ ಸಾಗುವಳಿಯನ್ನು ಸುಧಾರಿಸಲು ಯಾವ ಆಸಕ್ತಿಯೂ ಇರಲಿಲ್ಲ.

2. ಜಮೀನ್ದಾರರು ಸ್ವತಃ ಸಾಗುವಳಿ ಮಾಡದಿದ್ದರೂ ಭೂ-ಒಡೆಯರಾಗಿದ್ದರು. ಇದರಿಂದ ಅನುಪಸ್ಥಿತಿಯ ಜಮೀನ್ದಾರಿ ಪದ್ಧತಿ ಪ್ರಾರಂಭವಾಯಿತು. ಇದರಿಂದ ಗೇಣಿದಾರರ ಸ್ಥಿತಿ ಶೋಚನೀಯವಾಯಿತು.

3. ಜಮೀನುದಾರರು ಗೇಣಿಯನ್ನು ತಮ್ಮ ಮನಬಂದಂತೆ ಹೆಚ್ಚಿಸುತ್ತಿದ್ದರು. ಗೇಣಿಯನ್ನು ಕೊಡಲಾಗದ ಗೇಣಿದಾರರನ್ನು ಒಕ್ಕಲೆಬ್ಬಿಸುತ್ತಿದ್ದರು ಮತ್ತು ಗೇಣಿದಾರರ ಕೃಷಿ ಸಲಕರಣೆ, ಮನೆ, ಆಸ್ತಿ ಮೊದಲಾದವನ್ನು ಜಪ್ತಿ ಮಾಡಿ ತಮ್ಮ ವಶಮಾಡಿಕೊಳ್ಳುತ್ತಿದ್ದರು. ಅಲ್ಲದೆ ಒಕ್ಕಲುಗಳಿಂದ ಪುಕ್ಕಟೆ ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದರು.

4. ಗೇಣಿದಾರರು ಭೂ ಸಾಗುವಳಿ ಮಾಡಿದರೂ ಅದರ ಒಡೆತನದ ಹಕ್ಕನ್ನು ಜಮೀನ್ದಾರರು ಪಡೆದಿದ್ದರು. ಅಕ್ರಮವಾಗಿ ನಿಗದಿಯಾದ ಗೇಣಿಯನ್ನು ಕೊಡಬೇಕಾದ್ದರಿಂದ ಸಾಗುವಳಿಯಲ್ಲಿ ಒಕ್ಕಲುಗಳ ಆಸಕ್ತಿ ಕಡಿಮೆಯಾಯಿತು. ಅಲ್ಲದೆ ಗೇಣಿದಾರರನ್ನು ಯಾವಾಗ ಬೇಕೆಂದರೂ ತಮ್ಮ ಮನಸ್ಸಿಗೆ ಬಂದಂತೆ ಜಮೀನಿನಿಂದ ಹೊರಹಾಕಬಹುದಾದ್ದರಿಂದ ಅವರಲ್ಲಿ ಅಭದ್ರತೆ ಕಾಡುತ್ತಿತ್ತು.

5. ಗೇಣಿದಾರರಿಂದ ಪಡೆಯುವ ಗೇಣಿಯನ್ನು ಪ್ರತಿವರ್ಷ ಹೆಚ್ಚಿಸಿದರೂ, ಸರ್ಕಾರಕ್ಕೆ ಅದರಿಂದ ಹೆಚ್ಚಿನ ವರಮಾನ ಬರಲಿಲ್ಲ. ಜಮೀನ್ದಾರರೇ ಹೆಚ್ಚಿನ ಲಾಭ ಪಡೆಯುತ್ತಿದ್ದರು.

ಆದ್ದರಿಂದ ಪ್ರೊ.ಕಾರ್ವರ ಅವರು 'ಮಹಾಯುದ್ಧ ಮಹಾ ಅಂಟುರೋಗ ಮತ್ತು ಬರಗಾಲಗಳ ನಂತರ, ಗ್ರಾಮೀಣ ಜನತೆಗೆ ಅತ್ಯಂತ ಅನಿಷ್ಟವಾದುದೆಂದರೆ ಅನುಪಸ್ಥಿತಿಯ ಜಮೀನುದಾರ ಪದ್ಧತಿ' ಎಂದು ಹೇಳಿದ್ದಾರೆ. (ಬಸವಾ ಕೆ.ಡಿ.:1999:88)

### 2.4.1.2. ಮಹಲವಾರಿ/ಮಹಲ್ವಾರಿ ಪದ್ಧತಿ :

ಒಂದು ಗ್ರಾಮದ (ಮಹಲು-ಗ್ರಾಮ) ಎಲ್ಲ ರೈತರು ಸಾಮೂಹಿಕವಾಗಿ ಸರ್ಕಾರಕ್ಕೆ ನೇರವಾಗಿ ಭೂ-ಕಂದಾಯ ಕೊಡುತ್ತಿದ್ದರು. ಗ್ರಾಮದ ರೈತರೆಲ್ಲರಿಗೂ ತಾವು ಉಳುವ ಭೂಮಿಯ ಒಡೆತನದ ಹಕ್ಕು ಇತ್ತು. ಇದು ಉತ್ತರ ಭಾರತದ ಕೆಲವು ಭಾಗಗಳಲ್ಲಿ ಪ್ರಚಲಿತವಿದ್ದು ಅಕ್ಬರ್‌ನ ಕಾಲದ ವ್ಯವಸ್ಥೆಯಾಗಿತ್ತು.

### 2.4.1.3. ರೈತವಾರಿ ಪದ್ಧತಿ :

ಈ ಪದ್ಧತಿಯಲ್ಲಿ ಉಳುವವರೇ ಭೂಮಿಯ ಒಡೆಯರಾಗಿದ್ದರು. ಅವರೇ ನೇರವಾಗಿ ಭೂ ಕಂದಾಯ ಪಾವತಿಸುತ್ತಿದ್ದರು. ಭೂ-ಕಂದಾಯವನ್ನು ಸರ್ಕಾರಕ್ಕೆ ಕೊಡುವವರೇ ಭೂ-ಮಾಲಿಕರೆಂದು ಪರಿಗಣಿಸಲ್ಪಡುತ್ತಿದ್ದರು. ಅವನು ತನ್ನ ಭೂಮಿ ಮೇಲೆ ಸಂಪೂರ್ಣ ಒಡೆತನ ಹೊಂದಿದ್ದರಿಂದ ಅದನ್ನು ಅಡವು ಇಡಬಹುದು, ಗೇಣಿಗೆ ಕೊಡಬಹುದು, ಬೇರೆಯವರಿಗೆ ಮಾರಾಟ ಮಾಡಬಹುದು ಅಥವಾ ವಂಶಜರಿಗೆ ಹಂಚಬಹುದು.

ವಸಾಹತು ಪೂರ್ವದ ಕರ್ನಾಟಕದಲ್ಲಿ ಹೈದರನ ಆಡಳಿತದ ಕಾಲದಲ್ಲಿ 'ಕಂದಾಚಾರ ಪದ್ಧತಿ' ರೂಢಿಯಲ್ಲಿತ್ತು. ಅಂದರೆ ರೈತರು ಭೂಮಿಯ ಸಾಗುವಳಿ ಮಾಡುವುದಲ್ಲದೆ, ಯುದ್ಧ ಕಾಲದಲ್ಲಿ ರಾಜನ ಸೈನಿಕರಾಗಿ ಹೋರಾಡಬೇಕಿತ್ತು. ಅಂದರೆ ಒಕ್ಕಲಿಗರು ಕೃಷಿಕಯೋಧ (ಆಗ್ರೋ-ಮಾರ್ಶಲ್)ರಾಗಿದ್ದರು. ಕೃಷಿಕರೇ ರಾಜ್ಯಗಳ ಆರ್ಥಿಕ ಶಕ್ತಿಯ ಮೂಲವಾಗಿರುವುದರ ಜೊತೆಗೆ ಸೇನಾಶಕ್ತಿಗೂ ಬಲವಾಗಿದ್ದರು. ಏಕೆಂದರೆ ಬಹುಸಂಖ್ಯಾತ ಪ್ರಜೆಗಳು ಕೃಷಿಕರೇ ಆಗಿದ್ದರು. (ಸೂರ್ಯನಾಥ ಕಾಮತ್:2006:119)

ಬ್ರಿಟಿಷರ ಜೊತೆ ಹೈದರ್ ಮೇಲಿಂದ ಮೇಲೆ ಯುದ್ಧ ಮಾಡಬೇಕಾದ ಸಂದರ್ಭಗಳು ಒದಗಿದುದರಿಂದ, ತನ್ನ ಸೇನೆಗೆ ಐರೊಪ್ಯರಂತೆ ಶಿಸ್ತು ಇರುವುದು ಅನಿವಾರ್ಯ ಎಂದು ಕಂಡುಕೊಂಡು, ಎಲ್ಲ ವರ್ಗದ, ಎಲ್ಲ ಪಂಗಡದ, ಭಾರತದ ಇತರ ಭಾಗಗಳಿಂದ ಇರಾಕ್ ಇರಾನ್‌ನಂಥ ದೇಶಗಳಿಂದಲೂ ಜನರನ್ನು ಸೇನೆಗೆ ಭರ್ತಿ ಮಾಡಿದ. ಆದ್ದರಿಂದ ಸೇನಾಸೇವೆಯ ಕಟ್ಟುಪಾಡಿನಿಂದ ರೈತರು ಮುಕ್ತರಾದರು. ಟಿಪ್ಪುವಿನ ಕಾಲದಲ್ಲಿ ಭೂ ಕಂದಾಯವನ್ನು ಶೇ.37.5ರಷ್ಟು ಹೆಚ್ಚಿಸಲಾಯಿತು. ಟಿಪ್ಪು ಕಂದಾಚಾರ ಪದ್ಧತಿಯನ್ನು ಸಂಪೂರ್ಣ ರದ್ದು ಮಾಡಿದ. ಹೆಚ್ಚಿನ ಕಂದಾಯ ಕೊಡಬೇಕಾದ್ದರಿಂದ ಭೂಮಿಯ ಮೇಲೆ ರೈತರ ಒಡೆತನದ ಹಕ್ಕು ಬಲವಾಯಿತು. ಇದರಿಂದ ಒಂದು ರೀತಿಯ 'ರೈತವಾರಿ ಪದ್ಧತಿ' ಜಾರಿಗೆ ಬಂತು. (ಸೂರ್ಯನಾಥ ಕಾಮತ್:2006:175)

ಬ್ರಿಟಿಷ್ ವಸಾಹತುಶಾಹಿಯಲ್ಲಿ ರೈತವಾರಿ ಪದ್ಧತಿಯ ರೂವಾರಿ ಥಾಮಸ್ ಮನ್ರೊ ಎಂಬ ಆಡಳಿತಾಧಿಕಾರಿ. ಹತ್ತೊಂಭತ್ತನೇ ಶತಮಾನದಲ್ಲಿ ಬ್ರಿಟಿಷರು ದಕ್ಷಿಣ ಭಾರತದಲ್ಲಿ ಜಾರಿಗೆ ತಂದ ಕಂದಾಯ ಪದ್ಧತಿಯು ಆ ಕಾಲದ ಅರ್ಥಶಾಸ್ತ್ರಜ್ಞರಾದ ಡೇವಿಡ್ ರಿಕಾರ್ಡೋ ಮತ್ತು ಜೇಮ್ಸ್ ಮಿಲ್‌ರ ವಿಚಾರಗಳಿಂದ ಪ್ರಭಾವಿತವಾಗಿತ್ತು. ಇಂಗ್ಲೆಂಡಿನ ಖ್ಯಾತ ಸಮಕಾಲೀನ ಅರ್ಥಶಾಸ್ತ್ರಜ್ಞನಾದ ಡೇವಿಡ್ ರಿಕಾರ್ಡೋ ಗುತ್ತಿಗೆ ಸಿದ್ಧಾಂತವನ್ನು ಮಂಡಿಸಿದ. ಅವನ ಪ್ರಕಾರ ಗುತ್ತಿಗೆ ಎಂಬುದು ಏಕಸ್ವಾಮ್ಯ ಮೌಲ್ಯ ಉಳ್ಳದ್ದು. (ಮಾನವಿಕ ಕರ್ನಾಟಕ:1984:41). ಕೃಷಿ ಭೂಮಿ ಉತ್ಪಾದನಾ ಮಾಧ್ಯಮವಾಗಿ ಸೀಮಿತವಾಗಿದೆ. ಆದ್ದರಿಂದ ಅದನ್ನು ಶಾಸನ ಒಡೆತನಕ್ಕೆ ಅಳವಡಿಸಬಹುದು ಎಂದು ಆತ ಪ್ರತಿಪಾದಿಸಿದ ಅಲ್ಲದೆ ಜಮೀನುದಾರು ಸಮಾಜದ ಪರಾವಲಂಬಿ ವರ್ಗಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ನಿಲುವನ್ನು ಹೊಂದಿರುತ್ತಾರೆ. ಆದ್ದರಿಂದ ಗುತ್ತಿಗೆಯನ್ನು ತೆರಿಗೆಯ ರೂಪದಲ್ಲಿ ಸರ್ಕಾರದ ಬೊಕ್ಕಸಕ್ಕೆ ತೆಗೆದುಕೊಳ್ಳ ಬಹುದು. ಇದರಿಂದ ಕಿಂಚಿತ್ ಲಾಭ (profit) ಕೂಲಿ (wage) ಅಥವ ವಸ್ತುಗಳ ಬೆಲೆಗಳ ಮೇಲೆ ಪರಿಣಾಮವಾಗುವುದಿಲ್ಲ ಎಂದು ರಿಕಾರ್ಡೋ ವಾದಿಸಿದ. (ಅದೇ.)

ಹೀಗೆ ಜಮೀನುದಾರ ವರ್ಗವನ್ನು ಕೈಬಿಟ್ಟು ನೇರವಾಗಿ ಕಂದಾಯವನ್ನು ನಿಗದಿಪಡಿಸುವ ರೈತವಾರಿ ಪದ್ಧತಿಯನ್ನು ಬ್ರಿಟಿಷರು ತಮ್ಮ ಲಾಭದ ಉದ್ದೇಶದಿಂದ ಜಾರಿಗೆ ತಂದರು. ಈ ವ್ಯವಸ್ಥೆಯಲ್ಲಿ ರೈತನಿಗೆ ಆಸ್ತಿಯ ಹಕ್ಕು ಬಂದಿತು. ಆದರೆ ನಿಗದಿ ಮಾಡಿದ ಕಂದಾಯ ರೈತರಿಗೆ ಭಾರವಾಗಿದ್ದರಿಂದಲೂ ಮತ್ತು ಅದನ್ನು ಕಠಿಣ ಕ್ರಮಗಳ ಮೂಲಕ ವಸೂಲಿ ಮಾಡುತ್ತಿದ್ದುದರಿಂದಲೂ ರೈತನು ಲೇವಾದೇವಿ ಮಾಡು ವವರ ಬಲೆಗೆ ಬೀಳುವಂತಾಯಿತು. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಋಣಭಾದೆ ಹೆಚ್ಚಿತು. (ಮಾನವಿಕ ಕರ್ನಾಟಕ:1984:44).

**ರೈತವಾರಿ ಪದ್ಧತಿಯ ಅನುಕೂಲಗಳು :**

1. ಭೂಮಿಯನ್ನು ಸಾಗುವಳಿ ಮಾಡುವ ರೈತನೇ ಭೂಮಿಯ ಒಡೆಯನಾದ್ದರಿಂದ ಭೂಮಿ ಸಾಗುವಳಿಯಲ್ಲಿ ರೈತನು ತೀವ್ರ ಆಸಕ್ತಿಯನ್ನು ಹೊಂದಿ ಹೆಚ್ಚು ಉತ್ಪಾದಿಸಲು ಪ್ರಯತ್ನಿಸುತ್ತಿದ್ದನು.
2. ಸರ್ಕಾರ ಮತ್ತು ರೈತರ ಮಧ್ಯ ನೇರ ಸಂಪರ್ಕ ಬಂದು ಯಾವ ಮಧ್ಯಸ್ಥನೂ ಇಲ್ಲದ ಕಾರಣ ರೈತರು ಶೋಷಣೆಗೆ ಒಳಗಾಗುತ್ತಿರಲಿಲ್ಲ
3. ಸರ್ಕಾರವು ಭೂಮಿಯ ಸುಧಾರಣೆಗೆ ಅನೇಕ ಸೌಲಭ್ಯಗಳನ್ನು ರೈತರಿಗೆ ಒದಗಿಸಬಹುದಾಗಿತ್ತು.

**ರೈತವಾರಿ ಪದ್ಧತಿಯ ದೋಷಗಳು :**

1. ಅನೇಕ ರೈತ ಹಿಡುವಳಿಗಳು ಅತಿ ಚಿಕ್ಕವಾಗಿರುವುದರಿಂದ ಅವರಲ್ಲಿ ಸಾಗುವಳಿ ಮಾಡುವುದು ಲಾಭದಾಯಕವಾಗಿರಲಿಲ್ಲ.

2. ಚಿಕ್ಕ ರೈತರ ವಾರ್ಷಿಕ ವರಮಾನ ಕಡಿಮೆ ಇದ್ದುದರಿಂದ ಭೂಮಿಯಲ್ಲಿ ಸುಧಾರಣೆ ಮಾಡಿ ಹೆಚ್ಚು ಉತ್ಪಾದಿಸಲು ಸಾಧ್ಯವಿರಲಿಲ್ಲ.

3. ಸರ್ಕಾರವು ಭೂ-ಕಂದಾಯವನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಿದ್ದುದರಿಂದ ರೈತರಿಗೆ ಅದರಿಂದ ತೊಂದರೆಯುಂಟಾಗಿತ್ತು.

4. ಕೆಲವೊಮ್ಮೆ ಭೂಕಂದಾಯ ಹೆಚ್ಚಾಗಿಯೂ ಇರುತ್ತಿತ್ತು. ಇದರಿಂದ ಧನಿ ಒಕ್ಕಲುಗಳ ನಡುವೆ ಸಂಘರ್ಷ ಏರ್ಪಡುತ್ತಿತ್ತು.

ಅನೇಕ ದೋಷಗಳ ನಡುವೆಯೂ ರೈತವಾರಿ ಪದ್ಧತಿಯು ಜಮೀನುದಾರಿ ಮತ್ತು ಮಹಲವಾರಿ ಪದ್ಧತಿಗಿಂತ ಉತ್ತಮವಾಗಿತ್ತು. (ಬಸವಾ ಕೆ.ಡಿ.:1999:89)

## 2.5. ಸಾಗುವಳಿ ಭೂಮಿಯ ವಿಧಗಳು :

ಮಲೆನಾಡಿನಲ್ಲಿ ಭೂಮಿ ಉಳುವ ರೈತನ ಗುಡಿಸಲು ಜಮೀನಿಗೆ ಅಂಟಿಕೊಂಡೇ ಅಥವಾ ಜಮೀನಿನ ಒಳಗೇ ಇರುತ್ತದೆ. (Hayavadana Rao:1929A:20)

ವ್ಯವಸಾಯದ ಬೆಳೆಯನ್ನು ಬಾಗಾಯತ, ತರಿ ಮತ್ತು ಕುಶ್ಕಿ ಎಂದು ಮೂರು ರೀತಿಯಲ್ಲಿ ವಿಂಗಡಿಸಲಾಗಿದೆ. ಬಾಗಾಯತ ಎಂದರೆ ತೋಟ, ಅಡಕೆ ಮತ್ತು ತೆಂಗಿನಕಾಯಿ ಇದರ ಬೆಳೆ. ಇದಕ್ಕೆ ನೀರಿನ ವ್ಯವಸ್ಥೆ ಚೆನ್ನಾಗಿರಬೇಕಾಗುತ್ತದೆ. ಮಲೆನಾಡಿನಲ್ಲಿ ಅಡಕೆ ತೋಟಗಳು ಸಾಕಷ್ಟಿದ್ದು ಮಳೆಗಾಲದಲ್ಲಿ ಅಧಿಕವಾಗಿ ನೀರಿನ ಪೂರೈಕೆಯಾಗುತ್ತದೆ. ಇನ್ನುಳಿದ ಕಾಲದಲ್ಲಿ ತೊರೆಯ ಬಳಿಯಿರುವ ಸಣ್ಣ ಹೊಂಡ, ತೊಟ್ಟಗಳಿಂದ ಒದಗುವ ಸ್ವಾಭಾವಿಕ ತೇವಾಂಶವನ್ನು ಅವಲಂಬಿಸುತ್ತವೆ. ಇಂತಹ ತೋಟಗಳನ್ನು ಸುಸ್ಥಿತಿಯಲ್ಲಿಡಲು ಹೆಚ್ಚಿನ ಆರೈಕೆಯ ಅವಶ್ಯಕತೆ ಇದ್ದು ಹೆಚ್ಚು ಖರ್ಚಾಗುವುದು. (ಅದೇ.)

ಬತ್ತ ಮುಖ್ಯವಾದ ತರಿ ಬೆಳೆಯಾಗಿದೆ. ಮುಂಗಾರು ಮಳೆಯ ಸಮಯದಲ್ಲಿ ಇದರ ಕೆಲಸ ಶುರುವಾಗಿ ಮೂರು ನಾಲ್ಕು ತಿಂಗಳಲ್ಲಿ ಇದರ ಬೆಳೆ ಬರುತ್ತದೆ. (ಮಲೆನಾಡಿನ ಮುಖ್ಯ ಬೆಳೆ-ಬತ್ತ) ಬತ್ತಕ್ಕೆ ಹೆಚ್ಚು ನೀರಿನ ಅವಶ್ಯಕತೆಯಿದೆ. ಹೆಚ್ಚು ಮಳೆಯಾಗುವ ಮತ್ತು ನೀರಾವರಿ ಸೌಲಭ್ಯವಿರುವ ಪ್ರದೇಶದಲ್ಲಿ ಬೆಳೆಯುತ್ತವೆ. 1923-24ರಲ್ಲಿ ಮೈಸೂರು ರಾಜ್ಯದಲ್ಲಿ ಬತ್ತ ಬೆಳೆದ ಪ್ರದೇಶ 707,509 ಎಕರೆ ಇದ್ದರೆ, ಅದರಲ್ಲಿ ಗರಿಷ್ಠ - 204,211 ಎಕರೆ ಶಿವಮೊಗ್ಗದ ಬತ್ತದ ಗದ್ದೆಗಳೇ ಆಗಿದ್ದವು.

ಕುಷ್ಕಿ ಎಂದರೆ ಒಣಭೂಮಿ. ಮಳೆಗಾಲದಲ್ಲಿ ಚೆನ್ನಾಗಿ ಮಳೆ ಬಿದ್ದರೆ, ಅನಂತರದ ತಿಂಗಳುಗಳಲ್ಲಿ ಅಷ್ಟಾಗಿ ನೀರಿನ ಅವಶ್ಯಕತೆ ಇರುವುದಿಲ್ಲ. ಈ ಭೂಮಿಯಲ್ಲಿ ಮಲೆನಾಡಿಗರು ತೆಂಗಿನಕಾಯನ್ನು ಬೆಳೆಯುತ್ತಿದ್ದರು.

ಮಲೆನಾಡಿನ ಈ ಭಾಗದಲ್ಲಿ ಕಾಫಿಯನ್ನು ಕಡಿಮೆ ಬೆಳೆಯುತ್ತಿದ್ದರು ಅಥವ ಇಲ್ಲವೇ ಇಲ್ಲ ಎಂದು ಹೇಳಬಹುದು. ವಾಣಿಜ್ಯ ಬೆಳೆಯಾದ ಕಾಫಿ ಬೆಳೆಯ ಬಗ್ಗೆ 'ಮಲೆಗಳಲ್ಲಿ ಮದುಮಗಳು' ಮತ್ತು

'ಕಾನೂರು ಹೆಗ್ಗಡಿತಿ' ಕಾದಂಬರಿಗಳಲ್ಲಿ ಎಲ್ಲೂ ದಾಖಲಾಗದಿದ್ದನ್ನು ಗಮನಿಸಿದರೆ ಬಹುಶಃ ಜನರ ಒಲವು ಅತ್ತ ಇರಲಿಲ್ಲ ಎಂದು ಊಹಿಸಬಹುದು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಾಫಿ ಆಗ ತಾನೆ ಪರಿಚಯವಾಗುತ್ತಿತ್ತು. ಸುಬ್ಬಣ್ಣ ಹೆಗ್ಗಡೆಯಂಥ ಹಳೆ ತಲೆಮಾರಿನವರಿಗೆ ಕಾಫಿಗಿಂತ ಕಷಾಯವೇ ಹೆಚ್ಚು ಆಪ್ಯಾಯಮಾನವಾಗಿತ್ತು. 'ಕಾನೂರು ಹೆಗ್ಗಡಿತಿ'ಯಲ್ಲಿ ಕಾಫಿ ಕುಡಿಯುವುದು ನಿತ್ಯಜೀವನದ ಒಂದು ವಿಧಾನವಾಗಿದೆ. ಆದರೂ ಕಾಫಿ ಬೆಳೆ ಬಗ್ಗೆ ಎಲ್ಲೂ ಪ್ರಸ್ತಾಪವಿಲ್ಲ.

ಲಾಭದಾಯಕವಾದ ತೆಂಗು ಅಡಕೆ ತೋಟಗಳನ್ನು ಜಮೀನ್ದಾರರು, ಶ್ರೀಮಂತರು ತಾವೇ ಸಾಗುವಳಿ ಮಾಡುತ್ತಿದ್ದರು. ಅಡಕೆ ತೋಟವೂ ಅನೇಕ ಎಕರೆಗಳಿದ್ದರೆ, ಆಗ ಅವನ್ನು ಗುತ್ತಿಗೆಗೆ ಕೊಡುತ್ತಿದ್ದರು. ಆಸ್ತಿ ಸಣ್ಣದಿದ್ದರೆ ತಾವೇ ಅದನ್ನು ನೋಡಿಕೊಳ್ಳುತ್ತಿದ್ದರು. ಅದರ ನಿರ್ವಹಣೆಗೆ ಕೂಲಿಯಾಳುಗಳನ್ನು ನೇಮಿಸಿಕೊಳ್ಳುತ್ತಿದ್ದರು. ತೋಟದ ಮಣ್ಣಿನ ತೇವಾಂಶ ಕಾಪಾಡಲು ಮರದ ಸುತ್ತ ದರಗು ಹಾಕುವುದು, ಅಗೆಯುವುದು, ನೀರುಣಿಸುವುದು ಮುಂತಾದ ಕೆಲಸಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆಯಿತ್ತು. ಇದನ್ನು ನಿರ್ವಹಿಸಲು ತೋಟದ ಮಾಲಿಕರೂ ಸಾಕಷ್ಟು ಸ್ಥಿತಿವಂತರಾಗಬೇಕಿತ್ತು. ಅದಕ್ಕೆ ಇಂತಹ ಶ್ರೀಮಂತ ತೋಟಗಳ ಒಡೆಯರಾಗಿದ್ದರೂ, ಅವರು ಸಾಲವಂದಿಗರಾಗಿರುತ್ತಿದ್ದರು. ಕಾನೂರಿನ ಚಂದ್ರಯ್ಯ ಗೌಡ ಮುತ್ತಳ್ಳಿ ಶ್ಯಾಮಯ್ಯಗೌಡರ ಬಳಿ ಸಾಲ ಮಾಡಿದ್ದರು. ಕಾನೂರಿನ ರಾಮಯ್ಯ ತನ್ನ ಮನೆಯ ಖರ್ಚು ವೆಚ್ಚ ನಿರ್ವಹಿಸಲು ಹಾಗು ಸಾಲ ತೀರಿಸಲು ಸೀತೆಮನೆ ಸಿಂಗಪ್ಪಯ್ಯನವರಿಗೆ ಒಂದು ಜಮೀನನ್ನು ಮಾರಲು ನಿರ್ಧರಿಸಿದ್ದನ್ನು 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಕಾಣಬಹುದು.

## 2.6. ಗೇಣಿ

'ಗೇಣಿ ಪದ್ಧತಿ' ಎಂದರೆ ಭೂ ಒಡೆಯನು ತನ್ನ ಜಮೀನಿನನ್ನು ಸಾಗುವಳಿ ಮಾಡಲು ರೈತ ಕಾರ್ಮಿಕನಿಗೆ ವಾರ್ಷಿಕ ಗೇಣಿಯ ಕರಾರಿನ ಮೂಲಕ ಕೊಡುವ ಪದ್ಧತಿ.

ಗೇಣಿ ಪದ್ಧತಿಯು ಮುಖ್ಯವಾಗಿ ಎರಡು ವಿಧವಾಗಿದೆ.

1) ಹಕ್ಕುದಾರ ಗೇಣಿದಾರರು (Occupancy Tenants)

2) ಹಕ್ಕು ರಹಿತ ಗೇಣಿದಾರರು (Non-ocuupancy Tenants)

ಹಕ್ಕುದಾರ ಗೇಣಿದಾರರು ತಾವು ಸಾಗುವಳಿ ಮಾಡುವ ಜಮೀನುದಾರನ ಜಮೀನಿನ ಮೇಲೆ ಸಾಗುವಳಿಯ ಶಾಶ್ವತ ಹಕ್ಕನ್ನು ಪಡೆದಿರುತ್ತಾರೆ. ಇವರು ನಿರ್ದಿಷ್ಟವಾದ ಗೇಣಿಯನ್ನು ಜಮೀನ್ದಾರರಿಗೆ ಕೊಡುತ್ತಿರುತ್ತಾರೆ. ಇವರನ್ನು ಜಮೀನಿನಿಂದ ಹೊರದೂಡಲು ಸಾಧ್ಯವಿಲ್ಲ. ಗೇಣಿಯು ನಿರ್ದಿಷ್ಟ ವಾಗಿರುವುದರಿಂದ ಅದನ್ನು ಜಮೀನುದಾರರು ಏರಿಸುವಂತಿಲ್ಲ.

ಹಕ್ಕು ರಹಿತ ಗೇಣಿದಾರರು ತಾವು ಸಾಗುವಳಿ ಮಾಡುವ ಜಮೀನ್ದಾರನ ಜಮೀನಿನ ಮೇಲೆ ಸಾಗುವಳಿಯ ಶಾಶ್ವತ ಹಕ್ಕನ್ನು ಪಡೆದಿರುವುದಿಲ್ಲ. ಗೇಣಿಯ ದರ ನಿರ್ದಿಷ್ಟವಾಗಿರುವುದಿಲ್ಲ. ಜಮೀನ್ದಾರ ಅವನ್ನು ತನ್ನಿಚ್ಛೆಗೆ ತಕ್ಕಂತೆ ಏರಿಳಿಸಬಹುದು. ಹಾಗೆ ತಮಗೆ ಬೇಡವೆನಿಸದಾಗ ಗೇಣಿದಾರರನ್ನು ಜಮೀನಿನಿಂದ ಹೊರದೂಡಬಹುದು.

ಮಲೆನಾಡಿನಲ್ಲಿ ಕಂಡುಬರುವ ಒಕ್ಕಲುಗಳು ಹಕ್ಕುರಹಿತ ಗೇಣಿದಾರರು.

### 2.6.1. ಗೇಣಿ ಪದ್ಧತಿಯ ಸಮಸ್ಯೆಗಳು :

ಗೇಣಿ ಪದ್ಧತಿಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿತ್ತು.

1. **ಅನುಪಸ್ಥಿತಿಯ ಭೂಮಾಲಿಕರು** : ಒಕ್ಕಲುತನದ ಪದ್ಧತಿಯಲ್ಲಿ ಭೂಮಿಯ ನಿಜವಾದ ಒಡೆಯ ಭೂ ವ್ಯವಸಾಯ ಮಾಡುವುದಿಲ್ಲ. ಹಿಡುವಳಿಯ ಯಜಮಾನ ಕೃಷಿ ಮಾಡದೆ ಇರುವ ಕ್ರಮಕ್ಕೆ 'ಗೈರು ಹಾಜರಿಯ ಭೂ ಒಡೆತನ' ಎಂದು ಹೆಸರು. ತಾವು ಸಾಗುವಳಿ ಮಾಡುತ್ತಿರುವ ಜಮೀನು ತಮ್ಮದಲ್ಲವಾದ್ದರಿಂದ ಸಾಗುವಳಿಯಲ್ಲಿ ತೀವ್ರ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ. ಇದರಿಂದ ಕೃಷಿಯ ಉತ್ಪಾದನೆಯು ಕುಂಠಿತವಾಯಿತು.

2. **ಗೇಣಿಯ ಏರಿಕೆ** : ಜಮೀನ್ದಾರರು ಪ್ರತಿ ವರ್ಷ ಗೇಣಿಯನ್ನು ತಮಗೆ ಇಷ್ಟ ಬಂದಂತೆ ಹೆಚ್ಚಿಸುತ್ತಿದ್ದರು. ಯಾರು ಅತಿ ಹೆಚ್ಚಿನ ಗೇಣಿ ಕೊಡಲು ಒಪ್ಪುವರೋ ಅವರಿಗೆ ಜಮೀನಿನ ಸಾಗುವಳಿ ಕೊಡುತ್ತಿದ್ದರು.

3. **ಗೇಣಿಯ ಭದ್ರತೆ ಇಲ್ಲ** : ಒಕ್ಕಲುಗಳಿಗೆ ತಾವೇ ಪ್ರತಿವರ್ಷ ಮುಂದುವರಿಯುತ್ತೇವೆಂಬ ಭರವಸೆ ಇರಲಿಲ್ಲ. ಜಮೀನ್ದಾರರು ಹೆಚ್ಚು ಗೇಣಿ ಕೊಡುವವರಿಗೆ ಭೂಮಿ ಸಾಗುವಳಿಯನ್ನು ಕೊಡುತ್ತಿದ್ದರು. ಸ್ವಾಧೀನರಹಿತ ಒಕ್ಕಲಿಗರದೇ ಬಹು ಸಂಖ್ಯೆಯಾದುದರಿಂದ, ಭೂಮಿಯ ಒಡೆಯ ಯಾವಾಗ ಬೇಕಾದರೂ ಒಕ್ಕಲುತನದಿಂದ ಕೃಷಿಕರನ್ನು ಓಡಿಸಬಹುದು.

4. **ಸಾಲದ ಭಾರ** : ಅತ್ಯಧಿಕ ಮೊತ್ತದ ಗೇಣಿಯನ್ನು ಕೊಟ್ಟು ಗೇಣಿದಾರರು ಸಾಗುವಳಿಯಿಂದ ಯಾವ ಲಾಭವನ್ನೂ ಪಡೆಯುತ್ತಿರಲ್ಲ. ಕೃಷಿ ಉತ್ಪಾದನೆ ಕಡಮೆ ಇದ್ದುದರಿಂದ ಗೇಣಿಯನ್ನು ಕೊಟ್ಟು ಒಕ್ಕಲುಗಳಿಗೆ ಉಳಿಯುತ್ತಿದ್ದುದು ಕಡಿಮೆ. ಆದ್ದರಿಂದ ಅವರು ಯಾವಾಗಲೂ ಸಾಲದಲ್ಲಿಯೇ ಮುಳುಗಿರಬೇಕಾಗುತ್ತಿತ್ತು.

ಮಲೆನಾಡಿನ ವ್ಯವಸಾಯದ ಹೆಚ್ಚಿನ ಪಾಲು ಬ್ರಾಹ್ಮಣ ಮತ್ತು ಒಕ್ಕಲಿಗರ ಹಿಡಿತದಲ್ಲಿತ್ತು. ಬತ್ತ ಹಾಗು ಕಬ್ಬು ತರಿ ಬೆಳೆಯಾಗಿದ್ದು ಈ ಗದ್ದೆಗಳನ್ನು ಗೇಣಿಯಾಧಾರದ ಮೇಲೆ ಒಕ್ಕಲುಗಳಿಗೆ ಕೊಡುತ್ತಿದ್ದರು. ಜಮೀನ್ದಾರರು ಲಾಭದಾಯಕವಾದ ಅಡಕೆ ತೋಟವನ್ನು ತಾವೇ ನೋಡಿಕೊಳ್ಳುತ್ತಿದ್ದರು.

### 2.7. ಗುತ್ತ :

ಜಮೀನಿನ ಸಾಗುವಳಿಗೆ ಪ್ರತಿಯಾಗಿ ಒಕ್ಕಲುಗಳು ಆ ಭೂಮಿಯ ಬಾಡಿಗೆ ಅಥವ ಗುತ್ತಿಗೆಯಾಗಿ ಬೆಳೆಯಲ್ಲಿ ನಿರ್ದಿಷ್ಟವಾದ ಪಾಲನ್ನು ಜಮೀನ್ದಾರರಿಗೆ ಕೊಡಬೇಕಿತ್ತು. ಇದನ್ನು 'ಗುತ್ತ' ಎಂದು ಕರೆಯುತ್ತಿದ್ದರು. ಹೀಗೆ ಗುತ್ತಿಗೆಗೆ ಕೊಟ್ಟ ಗದ್ದೆಗಳ ಉಳುವ ಬಿತ್ತುವ ಮುಂತಾದ ಯಾವುದೇ ವಿಷಯದಲ್ಲಿ

ಒಡೆಯರು ಹಸ್ತಕ್ಷೇಪ ಮಾಡುವುದಿಲ್ಲ. ಕೆಲವೊಮ್ಮೆ ಅವರು ತಮ್ಮ ಗದ್ದೆ ಎಲ್ಲಿದೆ ಎಂದೇ ನೋಡಿರುವುದಿಲ್ಲ. ಒಟ್ಟಿನಲ್ಲಿ ಒಕ್ಕಲಾದವನು ಬತ್ತದ ಕೊಯ್ಲು ಆದಾಗ ನಿಯತ್ತಾಗಿ ಒಡೆಯರ ಪಾಲನ್ನು ಕೊಡುತ್ತಿದ್ದನು. ಇಲ್ಲವೆ ಒಡೆಯರ ಆದೇಶದ ಮೇರೆಗೆ ಒಡೆಯರ ಪಾಲನ್ನು ಮಾರಿ ಬಂದ ಹಣವನ್ನು ಜಮೀನ್ದಾರರಿಗೆ ತಲುಪಿಸುತ್ತಿದ್ದನು.

ಇಂತಹ ಗುತ್ತಿಗೆಯ ಅವಧಿ ಮೂರು ವರ್ಷಕ್ಕಿಂತ ಕಡಿಮೆ ಇರುತ್ತಿರಲಿಲ್ಲ. ಗುತ್ತದ ಪ್ರಮಾಣದಲ್ಲೂ ಸ್ಪರ್ಧೆ ಇದ್ದು, ಒಂದು ಖಂಡುಗ (180 ಪಾವುಗಳು) ಬತ್ತದಿಂದ ಐದು ಖಂಡುಗ ಬತ್ತದವರೆಗೆ ಏರುತ್ತಿತ್ತು. ಗದ್ದೆ ಫಲವತ್ತಾಗಿದ್ದರೆ ಏಳು ಖಂಡುಗವೂ ಆಗುತ್ತಿತ್ತು. ಈ ಗುತ್ತಿಗೆಯು ಬೆಳೆಯ ಸುಮಾರು ಅರ್ಧ ಭಾಗವಾಗುತ್ತಿತ್ತು. ಬಾಗಾಯ್ತು ಸಾಗುವಳಿ ಮಾಡಿದವರು ಎಕರೆ ಒಂದಕ್ಕೆ ಹನ್ನೆರಡು ಮಣದಿಂದ ಹದಿನಾರು ಮಣ ಅಡಕೆ ಕೊಡುತ್ತಿದ್ದರು ಎಂದು ಕಡಿದಾಳು ರಾಮಪ್ಪಗೌಡರು ಸ್ಮರಿಸಿಕೊಂಡಿದ್ದಾರೆ. (ಕಡಿದಾಳು ರಾಮಪ್ಪಗೌಡ, ಎಸ್.:1998:49) ಒಂದು ಎಕರೆ ಗದ್ದೆಗೆ ಆರು ಖಂಡುಗ ಬತ್ತವನ್ನು ಗೇಣಿಯಾಗಿ ನಿಗದಿ ಮಾಡಲಾಗಿತ್ತು ಎಂದು ಹಾಲಪ್ಪ ಹೇಳುತ್ತಾರೆ. (ಅನುಬಂಧ-ಹಾಲಪ್ಪ)

ಜಮೀನ್ದಾರರು ಗೇಣಿಯಿಂದ ಭೂ ಕಂದಾಯ, ರಸ್ತೆ ತೆರಿಗೆ ಮುಂತಾದ ತೆರಿಗೆಗಳನ್ನು ಪಾವತಿಸುತ್ತಿದ್ದರು. ರಾಜ್ಯ ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯ ಕಟ್ಟಿದಾಗ ಭೂಮಿಯ ಒಡೆತನದ ಹಕ್ಕನ್ನು ಸರ್ಕಾರವು ಭೂಮಾಲಿಕರಿಗೆ ಕೊಡುತ್ತಿತ್ತು. ಒಕ್ಕಲುಗಳು ಬೇಸಾಯದ ಎಲ್ಲ ಖರ್ಚನ್ನು ಭರಿಸುತ್ತಿದ್ದರು. ಕೆಲವೊಮ್ಮೆ ಒಡೆಯರಿಂದ ಸಾಲವನ್ನೂ ಪಡೆಯುತ್ತಿದ್ದರು.

ಅಡಕೆ ತೋಟದ ಗುತ್ತಿಗೆಯು ಅಪರೂಪವಾಗಿತ್ತು. ಗುತ್ತಿಗೆ ಕೊಟ್ಟರೆ ಅದು ದೀರ್ಘಾವಧಿಯದಾಗಿರುತ್ತಿತ್ತು. ನೂರು ಫಲವತ್ತಾದ ಅಡಕೆ ಮರಗಳಿಗೆ ಇಂತಿಷ್ಟು ಗುತ್ತ ಎಂದು ನಿಗದಿಯಾಗಿರುತ್ತಿತ್ತು. ಇದು ಒಟ್ಟು ಬೆಳೆಯ ಶೇಕಡ 33%ರಷ್ಟಾಗುತ್ತಿತ್ತು. ಗುತ್ತಿಗೆಯ ಅವಧಿ ಹತ್ತು ವರ್ಷಗಳಿಗಿಂತಲೂ ಹೆಚ್ಚಿಗೆ ಇರುತ್ತಿತ್ತು. ಈ ಗುತ್ತಿಗೆ ಕರಾರು, ತೋಟದ ಉಸ್ತುವಾರಿಗೆ ಅಗತ್ಯವಾದ ಕಠಿಣ ನಿಯಮಗಳನ್ನು ಒಳಗೊಂಡಿರುತ್ತಿತ್ತು. ಇದರ ಖರ್ಚು ಒಟ್ಟು ಉತ್ಪಾದನೆಯ 1/3ರಷ್ಟಾಗುತಿತ್ತು, ಉಳಿದ 1/3ರಷ್ಟು ಭಾಗ ಒಕ್ಕಲಿನ ಪಾಲಾಗಿತ್ತು.

ಅಡಕೆ ಬೆಳೆಯಿಂದ ಬರುವ ಆದಾಯವು ನಿಯಮಿತವಾಗಿರುತ್ತಿರಲಿಲ್ಲ. ಅದು ಭಾರಿ ಏರುಪೇರುಗಳಿಂದ ಕೂಡಿತ್ತು. ಅದಕ್ಕೆ ಮೂರು ಮುಖ್ಯ ಕಾರಣಗಳನ್ನು ಗುರುತಿಸಬಹುದು.

1. ಮಾರುಕಟ್ಟೆಯಲ್ಲಿ ಅಡಕೆ ಬೆಲೆಯ ಏರಿಳಿತ.
2. ಅಡಕೆ ಬೆಳೆಗೆ ತಾಗುವ ರೋಗ.
3. ಮಳೆ ಬಿರುಗಾಳಿ ಸಿಡಿಲಿನಿಂದ ಉಂಟಾಗುವ ಹಾನಿ.

ಅಡಕೆಗೆ ಕೊಳೆ ರೋಗ ಬಂದು ಉದುರಿ ಹೋಗಿ ಒಂದೊಂದು ವರ್ಷ ಗುತ್ತಿಗೆ ಅಡಕೆ ಬಾಕಿ ಉಳಿಯುತ್ತಿತ್ತು. ಈ ಬಾಕಿಯು ಹಿಂದಿನ ಸಾಲದೊಂದಿಗೆ ಸೇರಿ ಒಕ್ಕಲುಗಳ ಸಾಲದ ಹೊರೆ ಹೆಚ್ಚುತ್ತಿತ್ತು.

ಕರ್ನಾಟಕದಲ್ಲಿ ಅಡಕೆ ತೋಟದ ವ್ಯಾಪ್ತಿ 1922-23ರಲ್ಲಿ 53,242 ಎಕರೆಗಳಷ್ಟು ಇದ್ದರೆ, ಶಿವಮೊಗ್ಗ ಜಿಲ್ಲೆಯೊಂದರಲ್ಲೇ ಅತಿ ಹೆಚ್ಚಿನ ಅಡಕೆ ತೋಟದ ಎಕರೆಗಳು-15,409ರಷ್ಟು ಇದ್ದವು. (Hayavadana Rao:1930:11) ಹಾಗು ಇದರ ರಫ್ತು ಸುಮಾರು 1,5,78 ಟನ್‌ಗಳಷ್ಟಿತ್ತು. ಅಡಕೆಯನ್ನು ಬೀರೂರು ಮುಖಾಂತರ ಬಳ್ಳಾರಿ ಹಾಗು ವಲಜ್‌ಗೆ ರಫ್ತು ಮಾಡಲಾಗುತ್ತಿತ್ತು.

ಏಲಕ್ಕಿ, ಮೆಣಸು ಹಾಗು ವಿಳೇದೆಲೆಯನ್ನು ಅಡಕೆ ಮರಕ್ಕೆ ಹಬ್ಬಿಸಲಾಗುತ್ತಿತ್ತು. ಮೆಣಸನ್ನು ಕೆನರಾ ಪ್ರದೇಶಕ್ಕೂ, ಏಲಕ್ಕಿಯನ್ನು ಧಾರವಾಡಕ್ಕೂ ರಫ್ತು ಮಾಡಲಾಗುತ್ತಿತ್ತು. (Hayavadana Rao:1930: 1348)

### 2.7.1. ಒಕ್ಕಲು ಮತ್ತು ಜಮೀನ್ದಾರರ ಸಂಬಂಧ :

ಒಕ್ಕಲುಗಳು ತಾವು ಬೆಳೆದ ಬೆಳೆಯಲ್ಲಿ ಒಡೆಯರಿಗೆ ನಿಗದಿ ಮಾಡಿದ ಪಾಲನ್ನು ಕೊಟ್ಟು ನಿಷ್ಠೆಯಿಂದಿದ್ದರು. ಒಡೆಯರೂ ಒಕ್ಕಲುಗಳನ್ನು ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು.

ಒಕ್ಕಲಿನ ಮನೆಯಲ್ಲಿ ನಡೆಯುವ ಮದುವೆ ಶುಭಕಾರ್ಯಗಳು ಮತ್ತು ಇತರ ಎಲ್ಲ ವೆಚ್ಚಗಳಿಗೆ ಒಡೆಯರು ಸಾಲ ಕೊಡುತ್ತಿದ್ದರು. 'ಕಾನೂರು ಹೆಗ್ಗಡಿತಿ' ಕಾದಂಬರಿಯ ಕಾನೂರಿನ ಚಂದ್ರಯ್ಯಗೌಡರು ಕೆಳ ಕಾನೂರಿನ ಅಣ್ಣಯ್ಯಗೌಡರಿಗೆ 800 ರೂಪಾಯಿಗಳ ಸಾಲವನ್ನು ಅವರ ಮದುವೆಗಾಗಿ ಕೊಟ್ಟಿದ್ದರು. ಹೀಗೆ ಕೊಟ್ಟ ಸಾಲಕ್ಕೆ ಬಡ್ಡಿಯನ್ನೂ ಹಾಕುತ್ತಿದ್ದರು.

### 2.7.2. ಬಿಟ್ಟಿ ಕೆಲಸ :

ಭೂಮಾಲಿಕರ ಮನೆಯ ಮದುವೆ ಮುಂತಾದ ಸಮಾರಂಭಗಳಲ್ಲಿ ಅಥವಾ ಅವರ ಮನೆಯ ಕೆಲಸವಿದ್ದಾಗ ಒಕ್ಕಲುಗಳು ಅಲ್ಲಿ ಹೋಗಿ ಕೆಲಸ ಮಾಡಬೇಕಾಗುತ್ತಿತ್ತು. ಇದು ಬಿಟ್ಟಿ ಕೆಲಸವಾಗಿದ್ದು, ಉಣ್ಣಲು ಮಾತ್ರ ಒಡೆಯರು ಕೊಡುತ್ತಿದ್ದರು ಎಂದು ಶ್ರೀ ಶೇಷಪ್ಪಗೌಡರು, ಶ್ರೀಹಾಲಪ್ಪ ಹಾಗು ಶ್ರೀಮತಿ ಲಕ್ಷ್ಮೀದೇವಮ್ಮನವರು ಸ್ಮರಿಸಿಕೊಂಡಿದ್ದಾರೆ. (ಅನುಬಂಧ)

ಗದ್ದೆ ಬಿತ್ತನೆ ಕಾಲದಲ್ಲಿ ಒಂದು ಜೊತೆ ಎತ್ತು, ಹೂಟೆ ಆಳು ಮತ್ತು ಒಂದು ಹೆಣ್ಣಾಳು ಒಂದೆರಡು ದಿನ ಒಡೆಯರ ಗದ್ದೆ ಬಿತ್ತನೆ ಕೆಲಸ ಮಾಡಬೇಕು. ಅವರ ಮನೆ ಹೊದಿಸಲು, ಕಟ್ಟಿಗೆ ಕಡಿಯಲು, ಸಸಿ ನೆಟ್ಟಿ, ಹೂಟೆ ಮುಂತಾದ ಕಾರ್ಯಗಳಿಗೆ ಒಕ್ಕಲುಗಳು ಒಡೆಯರ ಮನೆಗೆ ಬರುತ್ತಿದ್ದರು. ಒಕ್ಕಲುಗಳ ಮನೆಯ ಸಾಧಾರಣ ವಯಸ್ಸಿನ ಹೆಣ್ಣುಮಕ್ಕಳು ಒಡೆಯರ ಮನೆ ಮಕ್ಕಳಾಡಿಸಲು ಮತ್ತು ಸ್ವಲ್ಪ ದೊಡ್ಡ ಹುಡುಗರು ಒಡೆಯರ ಮನೆಯ ದನ ಕಾಯಲು ಹೋಗಲೇಬೇಕಿತ್ತು. ಈ ಕೆಲಸಗಳಿಗೆ ಏನಾದರೂ ಸಂಬಳ ಕೊಡುತ್ತಿದ್ದರು. (ಕಡಿದಾಳು ರಾಮಪ್ಪಗೌಡ ಎಸ್.:1998:49) ಇದಲ್ಲದೆ ವರ್ಷಕ್ಕೆ 10-15 ಆಳು ಮಾಡುವ ಕೆಲಸವನ್ನು ಗೇಣಿ ರೈತ ಉಚಿತವಾಗಿ ಮಾಲಿಕರ ಮನೆಯಲ್ಲಿ ಮಾಡಬೇಕಿತ್ತು. (ಕೂಡ್ಲಿಗೆರೆ ಮಲ್ಲಿಕಾರ್ಜುನ:2005:10)

### 2.7.3. ಒಕ್ಕಲೆಬ್ಬಿಸುವುದು :

ಭೂಮಾಲಿಕ ಸ್ವಂತ ಸಾಗುವಳಿ ಮಾಡುವ ಇಚ್ಛೆ ಹೊಂದಿದ್ದರೆ, ಒಕ್ಕಲು ಭೂಮಿಯನ್ನು ಹಾಳುಗೆಡ ವಿದ್ದರೆ, ಒಕ್ಕಲು ಗೇಣಿ ಸರಿಯಾಗಿ ಸಲ್ಲಿಸದಿದ್ದರೆ ಭೂಮಾಲಿಕರು ಗೇಣಿದಾರರನ್ನು ಒಕ್ಕಲೆಬ್ಬಿಸುತ್ತಿದ್ದರು. ಬಹುತೇಕ ಗೇಣಿ ಒಕ್ಕಲುಗಳು ಬಾಯ್ದೆರೆ ಒಕ್ಕಲಾಗಿ, ವಂಶಪಾರಂಪರ್ಯ ಒಕ್ಕಲಾಗಿದ್ದರೂ ಯಾವ ಅಧಿ ಕೃತ ದಾಖಲೆಗಳನ್ನೂ ಹೊಂದಿರಲಿಲ್ಲ. (ನಾಗರಾಜ್, ಎಂ.ಜಿ.,:2006:12)

### 2.7.4. ಗೇಣಿ ಅಳೆಯುವುದರಲ್ಲಿ ಅವ್ಯವಹಾರ :

ಕೃಷಿ ಕಾರ್ಮಿಕರು ಕೊಡುವ ಗೇಣಿಯನ್ನು ಅಳೆಯಬೇಕಾದರೆ ಕೆಲವು ಒಡೆಯರು ಅಕ್ರಮ ಪದ್ಧತಿ ಯನ್ನು ಅನುಸರಿಸುತ್ತಿದ್ದರು. ಮಲೆನಾಡಿನ ಒಂದು ಭಾಗವಾದ ಕಾಗೋಡಿನಲ್ಲಿ 'ಗೇಣಿ ರೈತರು ಭೂಮಾಲಿಕರಾದ ಒಡೆಯರಿಗೆ ಗೇಣಿ ನೀಡುವಾಗ ಬತ್ತವನ್ನು ಅಳೆಯುತ್ತಿದ್ದ ಮೂರುವರೆ ಸೇರು ಅಥವಾ ನಾಲ್ಕು ಸೇರಿನ ಕೊಳಗದಲ್ಲಿಯೇ ನೀಡಬೇಕಿತ್ತು. ಒಡೆಯರು ಮಾತ್ರ ರೈತರಿಗೆ ಸಾಲ ನೀಡು ವಾಗ ಮೂರು ಸೇರಿನ ಸರ್ಕಾರಿ ಕೊಳಗದಲ್ಲಿಯೇ ಅಳೆದು ಕೊಡುತ್ತಿದ್ದರು. ಅಳತೆಯಲ್ಲಿ ವ್ಯತ್ಯಾಸ ಮಾಡಿ ಗೇಣಿ ರೈತರನ್ನು ವಂಚಿಸುತ್ತಿದ್ದರು. ಇದಲ್ಲದೆ ಒಡೆಯರ ಮನೆಗೆ ಹುಲ್ಲು, ಸಲಿಗೆ ಬತ್ತ, ಪೆಚ್ಚಿನ ಬತ್ತ ಮುಂತಾದ ರೂಪಗಳಲ್ಲಿ ಗೇಣಿ ನೀಡಬೇಕಿತ್ತು. (ಕೂಡ್ಲಿಕೆರೆ ಮಲ್ಲಿಕಾರ್ಜುನ:2005:10) ಇದೇ ಮುಂದೆ 1951ರಲ್ಲಿ ಕಾಗೋಡು ಚಳುವಳಿಗೆ ನಾಂದಿಯಾಯಿತು.

### 2.7.5. ಒಕ್ಕಲುಗಳ ಸಾಲ :

ಒಕ್ಕಲುಗಳ ಕಷ್ಟ ಸುಖಕ್ಕೆ ಜಮೀನ್ದಾರರು ಸಹಾಯ ಮಾಡುತ್ತಿದ್ದರು. ಅವರ ಮನೆಯ ಮದುವೆ ಸಮಾರಂಭ ಇತ್ಯಾದಿಗೆ ಸಾಲ ಕೊಡುವುದಲ್ಲದೆ ಕೃಷಿಯಾಧಾರಿತ ಚಟುವಟಿಕೆಗಳಿಗೂ ಸಾಲ ಕೊಡುತ್ತಿ ದ್ದರು.

ಅಡಕೆಗೆ ಕೂಳೆ ರೋಗ ಬಂದು ಉದುರಿ ಹೋಗಿ ಒಂದು ವರ್ಷ ಒಡೆಯರ ಪಾಲು ಕೊಡಲಾಗದೆ ಗುತ್ತಿಗೆ ಅಡಕೆ ಬಾಕಿಯಾಗುತ್ತಿತ್ತು. ಹಿಂದಿನದು ಏನಾದರೂ ಸಾಲ ಕೊಡುವುದು ಬಾಕಿ ಇದ್ದರೆ, ಅದರೊಂದಿಗೆ ಈ ಬಾಕಿ ಸಾಲವೂ ಸೇರಿ ಸಾಲದ ಹೊರೆ ಹೆಚ್ಚಾಗುತ್ತಿತ್ತು.

ಕೆಲವು ಸಂದರ್ಭಗಳಲ್ಲಿ ಒಡೆಯರ ಗೇಣಿ ಕೊಟ್ಟು ಒಕ್ಕಲುಗಳಿಗೆ ಬತ್ತ ಹೆಚ್ಚು ಉಳಿಯುತ್ತಿರಲಿಲ್ಲ. ಆ ವರ್ಷ ಊಟಕ್ಕೆ ತೊಂದರೆಯಾಗಿ ಒಡೆಯರ ಮನೆಯಿಂದ ಬತ್ತ ಕಡ ತೆಗೆದುಕೊಂಡು ಹೋಗುತ್ತಿ ದ್ದರು. ಅದಕ್ಕೂ ಹುಲಿ ಬತ್ತ ಸೇರಿಸಿ ಬಾಕಿ ಮಾಡುತ್ತಿದ್ದರು. (ಕಡಿದಾಳು ರಾಮಪ್ಪಗೌಡ ಎಸ್.: 1998:44)

'ಹುಲಿ ಬತ್ತ' ಎಂದರೆ ಒಡೆಯರ ಮನೆಯಿಂದ ಬತ್ತ ಕಡ ತಂದಿದ್ದರೆ, ಗದ್ದೆ ಕೊಯಿಲಿನ ನಂತರ ಎಷ್ಟು ಬತ್ತ ಕಡ ತಂದಿದ್ದರೋ, ಅದಕ್ಕೆ ಮತ್ತಷ್ಟು ಬತ್ತ ಸೇರಿಸಿ ಅಂದರೆ ಅವನು ತಂದ ಬತ್ತ ಖಂಡುಗ ಒಂದಕ್ಕೆ ಹೆಚ್ಚಿಗೆ ಹತ್ತು ಕೊಳಗದಿಂದ ಒಂದು ಖಂಡುಗದವರೆಗಾದರೂ ಸೇರಿಸಿ ಕೊಡುವುದು. (ಕಡಿದಾಳು ರಾಮಪ್ಪಗೌಡ ಎಸ್.:1998:44)

ಒಕ್ಕಲುಗಳು ಸಾಲವನ್ನು ಮರುಪಾತಿಸದಿದ್ದಲ್ಲಿ ಅಥವ ಪಾವತಿಸಲು ತಡಮಾಡಿದಲ್ಲಿ ಒಡೆಯರು ತಮ್ಮ ವಸೂಲಿಸಾಬರನ್ನು ಸಾಲದ ವಸೂಲಿಗೆ ಕಳುಹಿಸುತ್ತಿದ್ದರು. ಬತ್ತದ ಕೊಯಿಲು ಆಗುತ್ತಿದ್ದಂತೆಯೇ ಇವರು ಒಕ್ಕಲುಗಳ ಮನೆಗೆ ಹೋಗಿ ಸಾಲದ ಭತ್ತ ಅಥವ ಹಣ ಪಡೆಯುತ್ತಿದ್ದರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಲ್ಲೂರ ಮಂಜಭಟ್ಟರು, ಸಿಂಬಾವಿ ಭರಮೈ ಹೆಗ್ಗಡೆ, ಹಳೆಮನೆ ಸುಬ್ಬಣ್ಣನಾಯಕ, ಮೊದಲಾದವರು ವಸೂಲಿ ಸಾಬರ ಸೇವೆಯನ್ನು ಪಡೆಯುತ್ತಿದ್ದರು.

ಸಾಲವನ್ನು ಬಡ್ಡಿ ಸಮೇತ ಮರು ಪಾವತಿಸುವವರೆಗೂ ಒಕ್ಕಲು ಜಮೀನನ್ನು ಬಿಟ್ಟು ಹೋಗು ವಂತಿರಲಿಲ್ಲ. ಕಾನೂರಿನ ಅಣ್ಣಯ್ಯಗೌಡ ಸಂಸಾರ ಸಮೇತ ಸೀತೆ ಮನೆ ಸಿಂಗಪ್ಪಗೌಡರ ಮನೆಗೆ ಕದ್ದು ಹೋಗುತ್ತಿದ್ದಾಗ ಚಂದ್ರಯ್ಯಗೌಡರಿಗೆ ಸಿಕ್ಕಿ ಬಿದ್ದರು. ಆಗ,

''...ಆ ದಿನವೆ ಚಂದ್ರಯ್ಯಗೌಡರು ಕೆಳಕಾನೂರು ಅಣ್ಣಯ್ಯಗೌಡರ ಪಾತ್ರೆ ಪರಟ ಸರಕು ಸಾಮಾನು ದನಕರು ಜಾನುವಾರುಗಳನ್ನೆಲ್ಲ ತಮ್ಮ ಸಾಲಕ್ಕೆ ಮುಟ್ಟುಗೋಲು ಹಾಕಿಕೊಂಡು ಅಣ್ಣಯ್ಯಗೌಡರನ್ನು ಅವರ ಮಗ ಮತ್ತು ಮಗಳು ಸಮೇತವಾಗಿ ಊರಿನಿಂದ ಹೊರಡಿಸಿದರು. ಅವರ ಕೋಳಿಗಳನ್ನು ಕೂಡ ಅವರಿಗೆ ಬಿಡಲಿಲ್ಲ. ಅವರಿಗೆ ಉಳಿದುದೆಂದರೆ ಕರಿಯ ಬಣ್ಣದ ಕುರೂಪಿಯಾದ ಅವರ ಕಂತ್ರಿ ನಾಯಿ.'' (ಕುವೆಂಪು:2006ಅ:265)

## 2.8. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ :

ಹಿಂದುಳಿದ ದೇಶಗಳಲ್ಲಿ ಅಸಮಾನತೆಯು ವಿವಿಧ ರೂಪಗಳನ್ನು ತಳೆಯುತ್ತದೆ. ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾದವರು ಇದರ ನೇರ ಪರಿಣಾಮವನ್ನು ಎದುರಿಸುತ್ತಾರೆ. ಕಡಿಮೆ ಸಂಖ್ಯೆಯ ಭೂಮಾಲಿಕರು ತಮಗಿಂತ ಕೆಳಗಿರುವ ಭೂರಹಿತ ಕೂಲಿಯಾಳು, ಕೃಷಿಕಾರ್ಮಿಕರನ್ನು ಶೋಷಿಸುತ್ತಾರೆ. ಕೂಲಿಯಾಳುಗಳು, ಒಕ್ಕಲುಗಳು ಸಮಾಜದ ಅರ್ಧಕ್ಕಿಂತ ಹೆಚ್ಚಾದ ಜನಸಂಖ್ಯೆ ಇದ್ದರೂ ಅನುಪಸ್ಥಿತ ಭೂಮಾಲಿಕನು ಅವರನ್ನು ತನ್ನ ಬಿಗಿ ಹಿಡಿತದಲ್ಲಿರಿಸಿಕೊಂಡಿರುತ್ತಾನೆ.

ಇಂತಹ ಅಸಮಾನತೆಗಳು ಭಾರತದಲ್ಲಿ ಒಂದು ಸಾಮಾಜಿಕ ನಿಯಮವಾಗಿದೆ. ಪರಂಪರೆ, ಮನುಧರ್ಮ, ಶಾಸ್ತ್ರಗಳು ಭಾರತದ ಸಮಾಜವನ್ನು ಕಸುಬುಗಳನ್ನಾಧರಿಸಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಾಗಿ ವಿಂಗಡಿಸಿದೆ.

ಕಸುಬನ್ನು ಆಧರಿಸಿ ಮಾಡಿದ ವರ್ಣಬೇಧವು ಮುಂದೆ ಜಾತಿಯಾಗಿ ಬೆಳೆದು ಬಂದಿದೆ. ಎಷ್ಟರ ಮಟ್ಟಿಗೆ ಅಂದರೆ ಒಂದು ಜಾತಿಯವರು ಇನ್ನೊಂದು ಜಾತಿಯ ಕಸುಬನ್ನು ಮಾಡುವುದು ಒಂದು ಶಿಕ್ಷಾರ್ಹ ಅಪರಾಧವೆಂಬಂತೆ.

ಭಾರತವು ಪಾಶ್ಚಾತ್ಯ ದೇಶಗಳಂತೆ ಬಂಡವಾಳಶಾಹಿ ರಾಷ್ಟ್ರವಲ್ಲ. ಆದ್ದರಿಂದ ಈ ಸಮಾಜದಲ್ಲಿ ವರ್ಗಗಳಿಲ್ಲ. ಇಲ್ಲಿ ಜಾತಿ ಪದ್ಧತಿ ಮುಖ್ಯವಾಗುತ್ತದೆ. ಅಸಮಾನತೆಗಳೇನಿದ್ದರೂ ಜಾತಿಯನ್ನಾಧರಿಸಿರುತ್ತದೆ. ಜಾತಿ ಪದ್ಧತಿ ಆಸ್ತಿಯ ಹಂಚಿಕೆಯನ್ನು ಪ್ರಭಾವಿಸುತ್ತದೆ.

ಅಂತೆಯೇ ಕುವೆಂಪು ಅವರ ಕಾದಂಬರಿಗಳಲ್ಲಿ ಎರಡು ವರ್ಣ, ಎರಡು ಜಾತಿಗಳ ಘರ್ಷಣೆ ಕಾಣಬಹುದು. ಬ್ರಾಹ್ಮಣ, ಶೂದ್ರ ಎಂಬ ಎರಡು ವರ್ಣಗಳಿದ್ದರೆ, ಬ್ರಾಹ್ಮಣ, ಒಕ್ಕಲಿಗ, ಎಂಬ ಎರಡು ಜಾತಿಗಳನ್ನು ಮುಖ್ಯವಾಗಿ ಕಾಣಬಹುದು. ಇವುಗಳೊಂದಿಗೆ ನಿಮ್ನ ವರ್ಗವೊಂದಿದೆ. ಅವರೇ ಹೊಲೆಯರು ಅಥವ ಅಸ್ಪೃಶ್ಯರು. ಈ ವರ್ಗದವರು ಯಾವ ಜಾತಿಗೂ ಸೇರುವುದಿಲ್ಲ. ಇವರು ಜಾತಿ, ವರ್ಣಬೇಧವಿಲ್ಲದೆ ಎಲ್ಲ ವರ್ಣ ಜಾತಿಯವರ ಸೇವೆ ಮಾಡುವುದೇ ಇವರ ಕಸುಬು. ಉತ್ತಮ ಜಾತಿಯವರೆಲ್ಲ ಮಾಡಲು ಹೇಸುವ ಕೆಲಸಗಳನ್ನು ಇವರೇ ಮಾಡಬೇಕು.

ಜಮೀನ್ದಾರಿಯ ಪದ್ಧತಿಯಲ್ಲಿ ಶೂದ್ರ ವರ್ಣದವರಾದ ಭೂಮಾಲಿಕರು ಕೃಷಿ ಕಾರ್ಮಿಕರು ಹಾಗು ತಮಗಿಂತ ಕೆಳಗಿನ ಶ್ರೇಣಿಯಲ್ಲಿರುವ ಅಸ್ಪೃಶ್ಯರನ್ನು ಕಡೆಗಣಿಸುತ್ತಿದ್ದ ರೀತಿಯನ್ನು ನೋಡಿದಾಗ, ಶ್ರೀಮಂತ ಹಾಗು ಬಡ ವರ್ಗದ ಜನರ ನಡುವಿನ ವ್ಯತ್ಯಾಸ, ಸಂಬಂಧ ತಿಳಿಯುತ್ತದೆ. ಹಾಗಾಗಿ ವರ್ಗ ವರ್ಣ ತಾರತಮ್ಯವು ಜಾತಿ ತಾರತಮ್ಯದಷ್ಟೇ ಪ್ರಬಲವಾಗಿದೆ. ಸಾಮಾಜಿಕ ಕಾರಣಗಳಿಗಿಂತ ಆರ್ಥಿಕ ಕಾರಣಗಳು ಪ್ರಬಲವಾಗುತ್ತದೆ.

ವರ್ಣ ಶ್ರೇಣಿಯ ತುತ್ತತುದಿಯಲ್ಲಿರುವ ಬ್ರಾಹ್ಮಣ ವರ್ಗವು ಪೌರೋಹಿತ್ಯ, ಪೂಜೆ, ನಿಮಿತ್ತ ಹೇಳುವುದು, ಜಾತಕ ನೋಡುವುದು ಮುಂತಾದ ವಂಶಪಾರಂಪರ್ಯ ಕೆಲಸಗಳಲ್ಲಿ ಗುರುತಿಸಿಕೊಂಡಿತ್ತು.

ವಿದ್ಯಾಭ್ಯಾಸವನ್ನು ಬಲ್ಲ, ವೇದೋಪನಿಷತ್ತನ್ನು ಅರ್ಥಮಾಡಿಕೊಂಡವರು ಬ್ರಾಹ್ಮಣರು. 'ಅವರ ಉದ್ಯೋಗಗಳಲ್ಲಿ ಮುಖ್ಯವಾದುವೆಂದರೆ ದೇವರ ಪೂಜೆ, ನಿಮಿತ್ತ ನೋಡುವುದು, ಭವಿಷ್ಯ ಹೇಳು ವುದು, ಜಾತಕ ಬರೆಯುವುದು ಮತ್ತು ನೋಡುವುದು, ಶೂದ್ರರ ಭೂತಾದಿಗಳಿಗೆ ರಕ್ತದ ಬಲಿಕೊಡುವ ಮೊದಲು ಹಣ್ಣು ಕಾಯಿ ಮಾಡುವುದು, ಮಂತ್ರದಿಂದ ದೆವ್ವಗಳನ್ನು ಬಿಡಿಸುವುದು ಮತ್ತು ಹಿಡಿಸುವುದು ಇತ್ಯಾದಿ. ಆದ ಕಾರಣ ಹಳ್ಳಿಯವರಿಗೆಲ್ಲ ಅವರನ್ನು ಕಂಡರೆ ಭಯ ಭಕ್ತಿ' (ಕುವೆಂಪು :2006ಅ:62) ಜನರ ಮೌಢ್ಯ ಅಜ್ಞಾನವೇ ಇವರ ಬಂಡವಾಳವಾಗಿತ್ತು. ಇದಕ್ಕಾಗಿ ಶರಶಯ್ಯೆಯಲ್ಲಿ ಮಲಗಿರುವ ರೋಗಿ ಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲೂ ಹಳ್ಳಿಗರಿಗೆ ಬಿಡುತ್ತಿರಲಿಲ್ಲ.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಕೆಳಕಾನೂರಿನ ಅಣ್ಣಯ್ಯ ಗೌಡರ ಹೆಂಡತಿ ರೋಗಗ್ರಸ್ತೆಯಾಗಿ ಮಲಗಿದ್ದಾಗ, ರೋಗದ ಉಲ್ಬಣಾವಸ್ಥೆಯನ್ನು ಕಂಡು ಕೆಲವರು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಡಾಕ್ಟರಿಗೆ ತೋರಿಸಲು ಸಲಹೆ ನೀಡಿದರು. ಆಗ ಅಗ್ರಹಾರದ ಜೋಯಿಸ ವೆಂಕಪ್ಪಯ್ಯನವರು

‘ಭೂತ ಜಕ್ಕಣಿಗಳಿಂದಲೂ ಆಗದ ಕಾರ್ಯ ಆಸ್ಪತ್ರೆ ಡಾಕ್ಟರುಗಳಿಂದೇನಾಗುತ್ತದೆ? ಎಷ್ಟೋ ಜನರಿಗೆ ತಾನೇ ಉಪದೇಶ ಮಾಡಿಲ್ಲವೇ ಆಸ್ಪತ್ರೆಗೆ ಹೋಗಬೇಡಿ ಎಂದು? ‘ಅಪ್ಪ ಅವ್ವ ಸತ್ರ ಆಸ್ಪತ್ರೆ!’ ಎಂದು ಗಾದೆಯಿಲ್ಲವೆ? ವೇದ ಸುಳ್ಳಾದರೂ ಗಾದೆ ಸುಳ್ಳಾಗದು!... ಎಲ್ಲಾ ಕರ್ಮದ ಫಲ’ ಎಂದು ಹೇಳಿ ಅಣ್ಣಯ್ಯಗೌಡನಿಗೆ ದುರ್ಬೋಧನೆ ಮಾಡಿದನು. (ಕುವೆಂಪು:2006ಅ:79) ಇದರ ಫಲವಾಗಿ ಅಣ್ಣಯ್ಯಗೌಡರ ಹೆಂಡತಿ ತೀರಿಕೊಂಡಿದ್ದಳು.

ವಿದ್ಯಾವಂತರಾಗುತ್ತಿದ್ದ ಶೂದ್ರರ ಬಗ್ಗೆ ಅಸಮಾಧಾನವೂ ಇವರಿಗೆ ಇತ್ತು. ಇತರರು ವಿದ್ಯಾವಂತ ರಾಗುವುದರಿಂದ ಅವರ ದುಡಿಮೆಯ ಮೂಲಕ್ಕೆ ಧಕ್ಕೆಯಾಗುತ್ತಿತ್ತು. ವಿದ್ಯಾವಂತರ ಮಾತು ಕೇಳಿ ಜನರಿಗೆ ತಮ್ಮ ಮೇಲೆ ನಂಬಿಕೆ ಕಡಿಮೆಯಾಗಿ ತಮ್ಮ ಆದಾಯಕ್ಕೆ ಕುತ್ತು ಬರುವುದು ಎಂಬ ಭಯ ಅವರನ್ನು ಕಾಡುತಿತ್ತು. ಆದ್ದರಿಂದ ಹೂವಯ್ಯ ರಾಮಯ್ಯ ಇವರ ವಿದ್ಯಾಭ್ಯಾಸ ನಿಲ್ಲಿಸುವಂತೆ ಕಾನೂರಿನ ಚಂದ್ರಯ್ಯ ಗೌಡರಿಗೆ ಹೇಳುತ್ತಾರೆ.

‘ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡಿಬಿಡುತ್ತದೆ. ದೇವರು ದಿಂಡರು ಭಕ್ತಿ ಗಿಕ್ತಿ ಎಲ್ಲ ನಿರ್ನಾಮ! ಜೊತೆಗೆ ನೂರಾರು ಹವ್ಯಾಸಗಳನ್ನು ಬೇರೆ ಕಲಿತುಬಿಡುತ್ತಾರೆ. ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ ಮದುವೆ ಗಿದುವೆ ಮಾಡಿ ಕೆಲಸ ಹಚ್ಚು’ (ಕುವೆಂಪು: 2006ಅ:67) ಎಂದು ಉಪದೇಶಿಸಿ ವಿದ್ಯಾಭ್ಯಾಸವನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದರು.

ಅಲ್ಲದೆ ತಮ್ಮ ವಂಶಪಾರಂಪರ್ಯವಾಗಿ ಬಂದ ವೇದೋಪನಿಷತ್ತಿನ ಭಗದ್ಗೀತೆಯ ಜ್ಞಾನವನ್ನು ಶೂದ್ರರು ಪಡೆಯಬಾರದೆಂದು ಅವರ ಧೈರ್ಯಗೆಡಿಸುತ್ತಿದ್ದರು.

‘‘ಈ ಶೂದ್ರ ಮಕ್ಕಳಿಗೆಲ್ಲ ಉಪನಿಷತ್ತು ಭಗವದ್ಗೀತೆಗಳ ಗಂಧವಾದರೂ ಗೊತ್ತಾಗುತ್ತದೆಯೆ? ನಮಗೇ ಗೊತ್ತಾಗುವುದಿಲ್ಲ...’ ಎಂತೆಂಥ ಆಚಾರ್ಯರೇ ಅವುಗಳಿಗೆ ವ್ಯಾಖ್ಯಾನ ಬರೆಯಲು ತಿಣಿಕಿ ಬಿಟ್ಟಿದ್ದಾರೆ. ಅವರಲ್ಲಿಯೇ ಏಕಮತವಿಲ್ಲ... ಈ ಶೂದ್ರ ಮಕ್ಕಳಿಗೆಲ್ಲ ಗೊತ್ತಾಗುತ್ತದೆಯೇ... ಅದನ್ನೆಲ್ಲ ಓದಿ ಮನೆ ಹಾಳು ಮಾಡಿಕೊಳ್ಳುತ್ತಾರೆ ಅಷ್ಟೆ!...’’ (ಕುವೆಂಪು:2006ಅ:67)

ಅಷ್ಟೇ ಅಲ್ಲದೆ ಮುಗ್ಧ ಜನರನ್ನು ದೇವರು ದಿಂಡರ ಹೆಸರಲ್ಲಿ ಹೆದರಿಸಿ ಮಾನಸಿಕ ದಾಸ್ಯಕ್ಕೆ ಒಳಗು ಮಾಡಿದ್ದರು. ಹೂವಯ್ಯ ರಾಮಯ್ಯರ ಓದು ನಿಲ್ಲಿಸಿದರೆ ಚಂದ್ರಯ್ಯನ ಮನೆ ಉಳಿಯುತ್ತದೆಂದೂ ಇದರಿಂದ ‘ದೇವರ ಕೋಪಕ್ಕಾದರೂ ಪಾತ್ರರಾಗಬಹುದು ಏಕೆಂದರೆ, ಅವನು ದಯಾಸಾಗರ, ಕರುಣಾಶಾಲಿ, ಆದರೆ ಈ ಭೂತ ದೆವ್ವಗಳ ಸಿಟ್ಟಿಗೆ ಬಿದ್ದರೆ ಉಳಿಗತಿಯಿಲ್ಲ...’ ಎಂದು ಹೆದರಿಸುತ್ತಿದ್ದರು. (ಕುವೆಂಪು :2006ಅ:68)

ಬೇರೆಯವರಲ್ಲಿ ತಮಗೆ ದ್ವೇಷವಿದ್ದರೆ ಜಾತಕ ನಿಮಿತ್ತದ ಮೂಲಕ ತಮ್ಮ ಸೇಡನ್ನು ತೀರಿಸಿಕೊಳ್ಳು ತ್ತಿದ್ದರು. ‘ಕಾನೂರು ಹೆಗ್ಗಡಿತಿ’ ಕಾದಂಬರಿಯಲ್ಲಿ ಸೀತೆ ಹಾಗು ಹೂವಯ್ಯನ ಮದುವೆಗೆ ಜಾತಕ ಸರಿಯಿಲ್ಲವೆಂದು ಸುಳ್ಳು ಹೇಳಿ ತನ್ನ ವೃತ್ತಿಯನ್ನೇ ಪ್ರಶ್ನಿಸಿದ್ದ ಹೂವಯ್ಯನ ಮೇಲೇ ತನ್ನ ಸೇಡು ತೀರಿಸಿಕೊಳ್ಳುತ್ತಾನೆ.

ಉತ್ತಮ ವರ್ಣದವರಾದ ಬ್ರಾಹ್ಮಣರು ಬೇರೆ ವರ್ಣದವರನ್ನು ಹೀಗೆ ದಾರಿ ತಪ್ಪಿಸುತ್ತಿದ್ದರೆ, ಶೂದ್ರರಾದ ಒಕ್ಕಲಿಗರು, ನಾಯಕರು, ಹೆಗ್ಗಡೆಗಳು ತಮಗಿಂತ ಕೆಳಗಿನ ಸ್ತರದವರಾದ ಹಳೆಪೈಕದವರಿಗೆ ಸ್ವಂತ ಜಮೀನಿರುವ ಹಕ್ಕು ಇಲ್ಲ ಎಂದು ವಾದಿಸುತ್ತಿದ್ದರು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಇದನ್ನು ಹೀಗೆ ಪ್ರತಿಬಿಂಬಿಸಲಾಗಿದೆ :

''ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂಡು ಬಗನಿಯ ಮರದಿಂದ ಕಳ್ಳು ಇಳಿಸಿ ಕುಡಿದು, ಮಾರಿ, ಜೀವನ ಮಾಡುವ ಹಳೆಪೈಕದವರಿಗೆ (ಅವರಿಗೆ 'ದೀವರು' ಎಂಬ ಹೆಸರೂ ಉಂಟು) ಸ್ವಂತ ಜಮೀನಿರುವುದು ಬಹಳ ಅಪೂರ್ವ; ಹಾಗೆ ಜಮೀನು ಹೊಂದುವುದು ಮಹಾ ಅನಾಚಾರ ವೆಂದೂ ಅನೇಕರ ಮನಸ್ಸು, ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂದೂ ಒಕ್ಕಲಿಗರಾಗಿದ್ದ ಹೆಗ್ಗಡೆ ಗೌಡ ನಾಯಕರು ಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು.'' (ಕುವೆಂಪು :2006ಬ:8)

ಹೀಗೆ ಆಯಾ ಜಾತಿಗೆಂದು ಒಂದೊಂದು ಕಸುಬು ಮೀಸಲಾಗಿತ್ತು. ಆ ನಿಯಮವನ್ನೇನಾದರೂ ಮೀರಿದರೆ ಜಾತಿಯಿಂದ ಬಹಿಷ್ಕಾರ ಹಾಕುತ್ತಿದ್ದರು. ಆರ್ಥಿಕ ಚಟುವಟಿಕೆಯ ಉಲ್ಲಂಘನೆಯಿಂದ ಸಾಮಾಜಿಕವಾಗಿ ಬಹಿಷ್ಕಾರದ ಶಿಕ್ಷೆ ಅನುಭವಿಸಬೇಕಾಗುತ್ತಿತ್ತು. ಹಾಗಾಗಿ ವರ್ಣ ವರ್ಗ ಜಾತಿಯ ಕಟ್ಟಳೆಯನ್ನು ಅನುಸರಿಸಿ ಸಮಾಜ ಅಸಮಾನತೆಯನ್ನು ಸಮರ್ಥಿಸಿಕೊಂಡು, ಪಾಲಿಸಿಕೊಂಡು ಬಂದಿದೆ. ಒಂದೊಂದು ವೃತ್ತಿಯೂ ಒಂದೊಂದು ಜಾತಿಯ ಸ್ವತ್ತಾಗಿತ್ತು. ಇದರಿಂದ ಹಿಂದುಳಿದವರು ಹಿಂದೆಯೇ ಉಳಿಯುತ್ತಿದ್ದರು. ಉತ್ತಮ ಕುಲದವರು ಇನ್ನೂ ಉನ್ನತಿ ಪ್ರಗತಿಗಳನ್ನು ಸಾಧಿಸುತ್ತ ಮುಂದುವರಿಯುತ್ತಿ ದ್ದರು. ಇದು ಸಮಾಜದ ಆರ್ಥಿಕ ವ್ಯವಸ್ಥೆಯಲ್ಲಿ ಗಣನೀಯವಾದ ಬಿರುಕನ್ನುಂಟು ಮಾಡಿತು. ಮೇಲ್ಜಾತಿ ಯವರು ಗೊಡ್ಡು ಸಂಪ್ರದಾಯವನ್ನು ಎತ್ತಿ ಹಿಡಿದು ಶಾಸ್ತ್ರ ವೇದ, ಮುಂತಾದ ನೆಪಗಳಿಂದ ಕೆಳಜಾತಿ ಯವರಿಗೆ ಒದಗಬಹುದಾಗಿದ್ದ ಉತ್ತಮ ಅವಕಾಶಗಳಿಂದ ನಿರಂತರವಾಗಿ ಅನೇಕ ಶತಮಾನಗಳಿಂದ ವಂಚಿಸುತ್ತಾ ಬಂದರು. ಹೀಗೆ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳು ದೇಶದ ಬಡತನಕ್ಕೆ ಮುಖ್ಯ ಕಾರಣವಾದವು.

ಆದರೆ ಉತ್ತಮ ಕುಲದವರು ಇನ್ನೂ ಉತ್ತಮ ಆರ್ಥಿಕ ಲಾಭ ಗಳಿಸುವಲ್ಲಿ ತಮ್ಮ ಜಾತಿ ಕುಲ ಕಸುಬನ್ನು ಮೀರಿದ್ದು ಕಾದಂಬರಿಗಳಲ್ಲಿ ಕಾಣಬಹುದು. ಘಟ್ಟದ ಕೆಳಗಿನಿಂದ ಬಂದ ಕಲ್ಲೂರು ದೇವಸ್ಥಾನ ದಲ್ಲಿ ಪುರೋಹಿತನಾಗಿ ನೆಲೆಸಿದ ಮಂಜಪ್ಪ ಭಟ್ಟರು ಲೇವಾದೇವಿ ವ್ಯವಹಾರ, ಸಾಲ ನೀಡುವುದು ಮುಂತಾದ ಚಟುವಟಿಕೆಗಳಿಂದ ಸಾಕಷ್ಟು ಜಮೀನುಗಳನ್ನು ಹೊಂದಿದ್ದರು ಅಷ್ಟೇ ಅಲ್ಲದೆ ಶೂದ್ರ ಜಮೀನ್ದಾರರಿಗೆ ಸಾಲ ಕೊಡುವಷ್ಟು ಶ್ರೀಮಂತರಾದರು.

ಐಗಳು ಅನಂತಯ್ಯ ತಮ್ಮ ರೋಗಿಷ್ಠ ತಾಯಿಯನ್ನು ನೋಡಿ ಬರಲು ಗಟ್ಟದ ಕೆಳಗೆ ಹೋಗಬೇಕಿತ್ತು. ಹೋಗಿ ಬರುವ ದಾರಿಯ ಖರ್ಚು ಹಾಗು ತನ್ನ ತಾಯಿಗೆ ಕೊಡಲು ಸ್ವಲ್ಪ ಹಣವನ್ನು ಕೋಣೂರು ರಂಗಪ್ಪಗೌಡರನ್ನು ಕೇಳಿದಾಗ ಅವರು ತಮ್ಮ ಬಳಿ ಹಣ ಇಲ್ಲವೆಂದು ಕಲ್ಲೂರು ಮಂಜಪ್ಪಭಟ್ಟರನ್ನು ನೋಡಿ ಬರುವುದಾಗಿ ತಿಳಿಸುತ್ತಾರೆ.

ಹೀಗೆ ಬ್ರಾಹ್ಮಣ ವರ್ಗದವರು ವರ್ಣ ವ್ಯವಸ್ಥೆಯಲ್ಲಿ ತಮಗಿಂತ ಕೆಳಗಿನವರಾದ ಮೂರನೇ ಸ್ತರದಲ್ಲಿರುವ ವೈಶ್ಯರ ಕುಲಕಸುಬಾದ ಲೇವಾದೇವಿ ಇಂತಹ ಹಣಕಾಸಿನ ವ್ಯವಹಾರಕ್ಕೆ ಕೈ ಹಾಕಿ ಲಾಭ ಪಡೆದುಕೊಂಡರು.

ಒಕ್ಕಲಿಗರು ತಮಗಿಂತ ಮೇಲಿನವರಾದ ವೈಶ್ಯರಂತೆ ಹಣಕಾಸು ವ್ಯವಹಾರವನ್ನೂ ಮಾಡಿ ಲಾಭಗಳಿಸಿದರು. ಕಾನೂರಿನ ಚಂದ್ರಯ್ಯಗೌಡರು, ಸೀತೆಮನೆ ಸಿಂಗಪ್ಪಗೌಡರು, ಸಿಂಬಾವಿ ಭರಮ್ಮೆ ಹೆಗ್ಗಡೆಯವರು, ಮುತ್ತಳ್ಳಿ ಶ್ಯಾಮಯ್ಯಗೌಡರು, ಹಳೆಮನೆ ಸುಬ್ಬಣ್ಣ ಇವರೆಲ್ಲರೂ ತಮ್ಮ ಒಕ್ಕಲುಗಳಿಗೆ ಸಾಲು ಕೊಡುವುದು ಲೇವಾದೇವಿ ವ್ಯವಹಾರ ಮಾಡುವುದು, ಸಾಲಕ್ಕೆ ಭೂಮಿ ಅಡವಿಟ್ಟುಕೊಳ್ಳುವುದು ಮಾಡಿ ಹಣ ಆಸ್ತಿ ಸಂಪಾದಿಸಿದ್ದರು.

ಅಲ್ಲದೆ ತಮ್ಮ ಜನಾಂಗದವರೇ ಆದರೂ ಹಣ ಆಸ್ತಿ ವಿಷಯದಲ್ಲಿ ತುಂಬಾ ಕಟ್ಟುನಿಟ್ಟಾಗಿದ್ದರು. ಇದಕ್ಕೆ ಉತ್ತಮ ಉದಾಹರಣೆ ಕೆಳಕಾನೂರಿನ ಅಣ್ಣಯ್ಯಗೌಡರು. ಚಂದ್ರಯ್ಯಗೌಡರ ಬಳಿ ಮಾಡಿದ ಸಾಲ ತೀರಿಸಲಾಗದೆ ತಮ್ಮ ಮನೆ ಸಾಮಾನು, ಜಾನುವಾರಗಳನ್ನು ಗಾಡಿಯಲ್ಲಿ ಹೇರಿಕೊಂಡು ರಾತ್ರಿ ಸಾಗಿಸುತ್ತಿದ್ದಾಗ ಚಂದ್ರಯ್ಯಗೌಡ ಅದನ್ನು ತಡೆದು ಆ ಸಾಮಾನುಗಳನ್ನು ತನ್ನ ಸಾಲಕ್ಕೆ ಮುಟ್ಟುಗೋಲು ಹಾಕುತ್ತಾನೆ. ಸಜಾತಿಯವನಾದರೂ ಸಹ ಅದು ಮುಖ್ಯವಾಗಿರದೆ ಅವನು ಕೊಡಬೇಕಾದ ಸಾಲ ತೀರಿಸಲಾರದೆ ಒಕ್ಕಲು ಕೀಳುವುದು ಜಮೀನ್ದಾರಿ ಪದ್ಧತಿಯಲ್ಲಿ ಅಕ್ಷಮ್ಯ ಅಪರಾಧವಾಗಿತ್ತು.

ಆರ್ಥಿಕವಾಗಿ ಪರಿಸ್ಥಿತಿ ಹೀಗಿದ್ದರೆ, ಸಾಮಾಜಿಕವಾಗಿ ಇದು ಮತ್ತೊಂದು ರೂಪ ಪಡೆಯುತ್ತಿತ್ತು.

ಮದುವೆ ಮೊದಲಾದ ಸಂಭ್ರಮಗಳಲ್ಲಿ ಹಳೆಪೈಕದವರು ಒಕ್ಕಲಿಗರನ್ನು ಅನುಸರಿಸಬಾರದು. ಮದುಮಗ ಕುದುರೆ ಮೇಲೆ ಸವಾರಿ ಮಾಡಬಾರದು. ಅವರ ಮದುಮಕ್ಕಳು ದಂಡಿಗೆಯ ಮೇಲೆ ಕೂರಬಾರದು ಎಂದು ಒಕ್ಕಲಿಗರು ತೀರ್ಮಾನಿಸಿದ್ದರು. ಇದನ್ನು ಮೀರಿದರೆ ಮದುಮಕ್ಕಳಿಗೆ ಮತ್ತು ದಿಬ್ಬಣದವರಿಗೆ ಉಳಿಗತಿಯಿರಲಿಲ್ಲ. ಸರ್ಕಾರವೂ ಒಕ್ಕಲಿಗರ ಪರವಾಗಿಯೇ ತೀರ್ಮಾನ ಕೊಟ್ಟಿತೆಂದು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕುವೆಂಪು ತಿಳಿಸಿರುವರು. ಆರ್ಥಿಕವಾಗಿ ಮುಂದುವರಿದ ಜನಾಂಗ ತಮಗಿಂತ ಕೆಳಗಿನ ವರ್ಗವನ್ನು ಹೇಗೆ ಸಾಮಾಜಿಕವಾಗಿ ಹದ್ದುಬಸ್ತಿನಲ್ಲಿಡುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

ಈ ವಿವರ ಕಥೆಯ ಓಟಕ್ಕೆ ಬೇಕಾದ ಘಟನೆಯಾಗಿರದೇ ಮಲೆನಾಡಿನಲ್ಲಿ ನಡೆದ ನಿಜ ಘಟನೆಯ ಮೇಲೆ ಆಧಾರಿತವಾಗಿದೆ. 1936ಗಿಂತ ಹಿಂದೆ ಹಳೆಪೈಕದವರಿಗೂ, ಒಕ್ಕಲಿಗರಿಗೂ ಇದರ ಬಗ್ಗೆ ಜಗಳ ನಡೆಯಿತು. ಇದು ವಿಕೋಪಕ್ಕೆ ತಿರುಗಿ ಕೋರ್ಟಿಗೆ ಹೋಗಿ, ಬ್ರಿಟಿಷ್ ಸರ್ಕಾರ ಒಕ್ಕಲಿಗರ ಪರವಾಗಿಯೇ ತೀರ್ಪನ್ನು ಕೊಟ್ಟಿತೆಂದು ಶ್ರೀ ಶೇಷಪ್ಪಗೌಡರು ಸ್ಮರಿಸುತ್ತಾರೆ. ಅರಗದಲ್ಲಿ ಹಳೆಪೈಕದವರಿಗೂ, ಒಕ್ಕಲಿಗರಿಗೂ ಮದುವೆಯಲ್ಲಿ ಬಳಸುವ ದಂಡಿಗೆಯ ವಿಷಯದಲ್ಲಿ ಹೊಡೆದಾಟವಾಯಿತು. ಈ ಕೇಸು ನಗರದ ಡಿವಿಷನಲ್ ಕೋರ್ಟಿಗೆ ಒಬ್ಬ ಬ್ರಿಟಿಷ್ ಜಡ್ಜನ ಎದುರು ಬಂದಿತ್ತು, ಆಗ ಅವರು ದಂಡಿಗೆ ದಿಬ್ಬಣ ಇದು ಒಕ್ಕಲಿಗರಿಗೆ ವಂಶಪಾರಂಪರ್ಯವಾಗಿ ಬಂದ ಹಕ್ಕಾದ್ದರಿಂದ ಬೇರೆಯವರು ಇದನ್ನು

ಅನುಸರಿಸುವಂತಿಲ್ಲ ಎಂದು ತೀರ್ಪಿತ್ತರು. ಇದನ್ನು ಶ್ರೀ ಅಲಿಗೆ ಗಣಪಯ್ಯ ನಾಯಕರು ಹಾಗು ಆಲೆಮನೆ ಶ್ರೀ ಸುರೇಶ್ ಅವರು ಒಂದು ದಾಖಲೆ ಪತ್ರದ ಆಧಾರದ ಮೇಲೆ ತಿಳಿಸಿರುವರು.

ಹಳೆದಪೈಕದವರು ಒಕ್ಕಲಿಗರ ವಿರುದ್ಧ ಪ್ರತಿಭಟನೆ ತೋರಿದರೆ, ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ಪುರೋಹಿತಶಾಹಿ ವ್ಯವಸ್ಥೆ ಯಜಮಾನ ಸಂಸ್ಕೃತಿ ಹಾಗು ಮತಧರ್ಮ ಮೌಢ್ಯಗಳನ್ನು ಏಕಕಾಲಕ್ಕೆ ಖಂಡಿಸಿ, ಪ್ರತಿಭಟನೆ ತೋರುತ್ತಾರೆ. 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಹೂವಯ್ಯನ ಮೂಲಕ ಈ ಜಡ ಸಂಪ್ರದಾಯಗಳನ್ನು ಪ್ರಶ್ನಿಸಿದರು.

ಗುನ್ನಾರ್ ಮರ್ಡಲ್ ಅವರ ಅನಿಸಿಕೆಯಂತೆ 'ಸಾಮಾಜಿಕ ಅಸಮಾನತೆಯು ಸಾಮಾಜಿಕ ಮರ್ಯಾದೆ, ಸಮಾಜದಲ್ಲಿ ದೊರೆಯುವ ಗೌರವ ಇದಕ್ಕೆ ಸೀಮಿತವಾದರೆ, ಆರ್ಥಿಕ ಅಸಮಾನತೆಯು ಆಸ್ತಿ ಮತ್ತು ಆದಾಯಕ್ಕೆ ಸಂಬಂಧಿಸಿದುದಾಗಿದೆ. ಆದರೂ ಇವೆರಡರ ನಡುವೆ ಬೇರ್ಪಡಿಸಲಾಗದಂತಹ ಅತ್ಯಂತ ನಿಕಟವಾದ ಸಂಬಂಧವಿದೆ. ಸಾಮಾಜಿಕ ಅಸಮಾನತೆ ಆರ್ಥಿಕ ಅಸಮಾನತೆಗೆ ಕಾರಣವಾದರೆ, ಆರ್ಥಿಕ ಅಸಮಾನತೆಯು ಸಾಮಾಜಿಕ ಅಸಮಾನತೆಯನ್ನು ಬೆಂಬಲಿಸುತ್ತದೆ.' ಮತ್ತು 'ವಂಶಪಾರಂಪರ್ಯವಾದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಯಾವುದೇ ಹಂತದಲ್ಲೂ ಬೆಂಬಲಿಸುವ ಪ್ರಚಂಡವಾದ ಸಾಮಾಜಿಕ ಚಲನಶಕ್ತಿಯಾಗುವುದೇ ಪದ್ಧತಿಯಲ್ಲಿರುವ ಧರ್ಮದ ಸಾಮಾನ್ಯ ಗುಣವಾಗಿದೆ.' (Myrdal,Gunnar :1970:59)

ಜಾತಿ ಧರ್ಮದ ಆಶ್ರಯದಲ್ಲಿ ಎಲ್ಲ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳು ಪ್ರಶ್ನಾತೀತವಾಗುತ್ತವೆ, ದೈವಕ್ಕೆ ಅಧೀನವಾಗುತ್ತವೆ. ಹಾಗಾಗಿ 'ವರ್ಗಗಳು ಪ್ರಜ್ಞಾವಂತ ವರ್ಗಗಳಾಗಿ ರೂಪುಗೊಂಡು ಪ್ರಗತಿಪರ ಚಾರಿತ್ರಿಕ ಹೋರಾಟ ನಡೆಸುವುದು ಇಂತಹ ಸಮಾಜಗಳಲ್ಲಿ ಅಸಾಧ್ಯ' ಎಂದು ಡಾ.ಡಿ.ಆರ್.ನಾಗರಾಜ್ ಅಭಿಪ್ರಾಯಪಡುತ್ತಾರೆ. (ಚಕ್ಕರೆ ಶಿವಶಂಕರ್:2004:350) ಆದರೂ ಕಾನೂರು ಹೆಗ್ಗಡಿತಿಯಲ್ಲಿ ಹೂವಯ್ಯ ಹಳೆಯ ಕಂದಾಚಾರ ಗೊಡ್ಡು ಸಂಪ್ರದಾಯಗಳನ್ನು, ಬ್ರಾಹ್ಮಣರ ರೀತಿ ನೀತಿಯನ್ನು ಪ್ರಶ್ನಿಸಿ ಪ್ರತಿಭಟನೆ ಸೂಚಿಸುತ್ತಾನೆ.

❒

## ಅಧ್ಯಾಯ : ೩

# ಲೇವಾದೇವಿ : ಕಾರಣಗಳು, ಸ್ವರೂಪ

## ಅಧ್ಯಾಯ : ೩

# ಲೇವಾದೇವಿ : ಕಾರಣಗಳು, ಸ್ವರೂಪ

### 3.1 ಪೀಠಿಕೆ :

ಕೃಷಿಯಾಧಾರಿತ ಸಮಾಜದಲ್ಲಿ ಒಕ್ಕಲು ಪ್ರಧಾನ ಆರ್ಥಿಕತೆಯಲ್ಲಿ ಸಾಲವನ್ನು ಉತ್ಪಾದಕ ಹಾಗು ಅನುತ್ಪಾದಕ ಕಾರಣಗಳಿಗಾಗಿ ಪಡೆಯಲಾಗುತ್ತಿತ್ತು. ಉತ್ಪಾದಕ ಸಾಲವನ್ನು ಸಾಗುವಳಿಗಾಗಿ ಉಪಯೋಗಿಸುತ್ತಿದ್ದರು. ಅನುತ್ಪಾದಕ ಸಾಲವನ್ನು ಮನೆಯ ಖರ್ಚಿಗಾಗಿ, ಮದುವೆ ಮುಂತಾದ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಉತ್ಪಾದಕ ಸಾಲದಿಂದ ಕೃಷಿ ಉತ್ಪಾದನೆ ಹೆಚ್ಚಿ ರೈತನ ವರಮಾನ ಮತ್ತು ಜೀವನ ಮಟ್ಟ ಸುಧಾರಿಸುವುದು. ಆದರೆ ಅನುತ್ಪಾದಕ ಸಾಲದಿಂದ ರೈತರ ಸಾಲದ ಭಾರ ಅಧಿಕವಾಗುವುದು. ಅಷ್ಟೇ ಅಲ್ಲದೆ ಅನುತ್ಪಾದಕ ಸಾಲವನ್ನು ಮರುಪಾವತಿ ಮಾಡುವುದು ಕಠಿಣವಾಗುತ್ತದೆ.

ಕುವೆಂಪು ಅವರ ಕಾದಂಬರಿಗಳಲ್ಲಿ ಕೇವಲ ಅನುತ್ಪಾದಕ ಕಾರಣಗಳಿಗೆ ಒಕ್ಕಲುಗಳು ಹಾಗು ಜೀತದಾಳುಗಳು, ಸಾಲ ಪಡೆಯುವುದನ್ನು ಮತ್ತು ಅದರ ಪರಿಣಾಮಗಳನ್ನು ಕಾಣುತ್ತೇವೆ. ಉತ್ಪಾದಕ ಕಾರಣಗಳಿಗೆ ಜಮೀನ್ದಾರರು ಸಹ ಸಾಲ ಪಡೆದ ಉದಾಹರಣೆ ಇಲ್ಲಿ ಸಿಗುವುದಿಲ್ಲ.

ಹಣಕಾಸಿನ ವ್ಯವಹಾರಕ್ಕೆ ಬ್ಯಾಂಕುಗಳಂತಹ ಸಾಂಸ್ಥಿಕ ಮೂಲಗಳು ಮಲೆನಾಡಿನ ಹಳ್ಳಿಗಳಲ್ಲಿ ಇರಲಿಲ್ಲ. ಅಸಂಘಟಿತ, ಸಾಂಸ್ಥಿಕೇತರ ಮೂಲಗಳೇ (Non-Institutional Sources) ಸಾಲ ಕೊಡುವ ವ್ಯವಹಾರದಲ್ಲಿ ತೊಡಗಿದ್ದವು.

(1) ಸಾಹುಕಾರರು,
(2) ವ್ಯಾಪಾರಸ್ಥರು ಮತ್ತು ದಲ್ಲಾಳಿಗಳು
(3) ಆಪ್ತರು
(4) ಜಮೀನುದಾರರು

ಇವರು ಮುಖ್ಯವಾದ ಸಾಂಸ್ಥಿಕೇತರ ಸ್ಥಳೀಯ ಮೂಲಗಳು. (ಬಸವ ಕೆ.ಡಿ.:1999:97)

ಆಪ್ತರು ಕೊಡುವ ಸಾಲ ನಗದು ಅಥವ ಧಾನ್ಯರೂಪದಲ್ಲಿರುತ್ತದೆ. ಇಂಥ ಸಾಲವು ಅನೌಪಚಾರಿಕವಾಗಿದ್ದು ಅದರ ಮೇಲೆ ಬಡ್ಡಿಯನ್ನು ಸಾಮಾನ್ಯವಾಗಿ ಆಕರಿಸುವುದಿಲ್ಲ. ಬಡ್ಡಿ ಇದ್ದರೂ ಬಹಳ ಕಡಿಮೆ ಇರುತ್ತದೆ. ವ್ಯಾಪಾರಸ್ಥರೂ ಬಡ್ಡಿಗೆ ಸಾಲ ಕೊಡುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಶ್ರೀಮಂತರು ಮತ್ತು ಜಮೀನ್ದಾರರು ಕೊಡುವ ಸಾಲ ಬಹು ಮುಖ್ಯವೆನಿಸಿವೆ. ಇವರು ಅತಿ ಹೆಚ್ಚಿನ ಬಡ್ಡಿಗೆ ಸಾಲ ನೀಡುತ್ತಿದ್ದರು. ಕುವೆಂಪು ಅವರ ಕಾದಂಬರಿಗಳಲ್ಲಿ ಇವರೇ ಸಾಲ ಕೊಡುವ ವರ್ಗಗಳು. ಜಮೀನ್ದಾರರಿಗೂ

ಸಾಲ ಕೊಡುತ್ತಿದ್ದ ಸಾಹುಕಾರ ಲೇವಾದೇವಿಗಾರರು ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ.

### 3.2 ಲೇವಾದೇವಿ ವ್ಯವಹಾರಸ್ಥರು ಅಥವ ಸಾಹುಕಾರರು :

ಇವರು ಗ್ರಾಮೀಣ ಪ್ರದೇಶದಲ್ಲಿ ಅನೇಕ ಶತಮಾನಗಳಿಂದ ಕಾರ್ಯನಿರ್ವಹಿಸುತ್ತ ಬಂದಿರುವರು ಇವರಲ್ಲಿ ಎರಡು ವರ್ಗಗಳಿವೆ. ಮೊದಲನೆಯದು ಕೇವಲ ಲೇವಾದೇವಿ ವ್ಯವಹಾರ ಮಾಡುವ ವೃತ್ತಿದಾರರ ವರ್ಗ. ಇವರಿಗೆ ಸಾಹುಕಾರ, ಬನಿಯಾ, ಮಹಾಜನ, ಶೆಟ್ಟಿ ಎಂದು ಮುಂತಾಗಿ ಕರೆಯುತ್ತಾರೆ. ಎರಡನೆಯದು ಲೇವಾದೇವಿ ವ್ಯವಹಾರ ಮಾಡುವ ರೈತ ವರ್ಗ. ಇವರು ಶ್ರೀಮಂತ ಜಮೀನುದಾರರು. ಇವರ ಮುಖ್ಯ ಕಸುಬು ಬೇಸಾಯ, ಉಪ ಕಸುಬು ಲೇವಾದೇವಿ ವ್ಯವಹಾರ. ಈ ಎರಡೂ ವರ್ಗಗಳು ಹಳ್ಳಿ ಜನರಿಗೆ ಸಾಲ ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

#### 3.2.1 ಲೇವಾದೇವಿ ಪದ್ಧತಿಯ ಅನುಕೂಲಗಳು :

ಸ್ವಾತಂತ್ರ್ಯ ದೊರೆತ ನಂತರದ ದಶಕಗಳಲ್ಲೂ ಗ್ರಾಮೀಣ ಸಾಲ ಸಾಂಸ್ಥಿಕೇತರ ಮೂಲಗಳನ್ನೇ ಅವಲಂಬಿಸಿದೆ. ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸಾಂಸ್ಥಿಕೇತರ ಮೂಲಗಳ ಮಹತ್ವ ಎಷ್ಟಿತ್ತೆಂದು ಈ ಮೂಲಕ ಅರಿಯಬಹುದು.

ಗ್ರಾಮೀಣ ಪ್ರದೇಶದ ಜನರು ಹೆಚ್ಚಿನ ಪ್ರಮಾಣದಲ್ಲಿ ಇವರ ಮೇಲೆಯೇ ಅವಲಂಬನವಾಗುವುದಕ್ಕೆ ಕೆಲವು ಪ್ರಮುಖ ಕಾರಣಗಳಿವೆ.

1. ಇವರು ಅನುಸರಿಸುವ ವಿಧಾನಗಳು ಸುಲಭ ಹಾಗು ಸಮಯಕ್ಕನುಗುಣವಾಗಿ ಹೊಂದಿಕೊಳ್ಳುವಂಥವು.
2. ಸಾಲ ಪಡೆಯುವ ಮೊದಲು ಯಾವುದೇ ರೀತಿಯ ವಿಧಿವತ್ತಾದ ಕ್ರಮಗಳಿರುವುದಿಲ್ಲ.
3. ಜನರಿಗೆ ಮತ್ತು ಲೇವಾದೇವಿಗಾರರಿಗೆ ಪರಸ್ಪರರ ಪರಿಚಯವಿರುತ್ತದೆ.
4. ರೈತರ ಜಮೀನಿನ ಆಧಾರದ ಮೇಲೆ ಅಥವ ವಾಗ್ದಾನ ಪತ್ರ (promissory notes)ಗಳ ಆಧಾರದ ಮೇಲೆ ಕೂಡಲೇ ಸಾಲ ಕೊಡುವರು.
5. ಉತ್ಪಾದಕ ಮತ್ತು ಅನುತ್ಪಾದಕ ಚಟುವಟಿಕೆಗಳಿಗೆ ಸಾಲ ಕೊಡುತ್ತಾರೆ. (ಬಸವಾ ಕೆ.ಡಿ:1999:98)

#### 3.2.2 ಲೇವಾದೇವಿ ಪದ್ಧತಿಯ ಅನಾನುಕೂಲತೆಗಳು :

ಕೆಲವು ಅನುಕೂಲತೆಗಳು ಇದ್ದರೂ ಲೇವಾದೇವಿ ವ್ಯಾಪಾರದಲ್ಲಿ ಅನೇಕ ದೋಷಗಳೂ ಇದ್ದವು.

1. ಗ್ರಾಮೀಣ ಜನರು ಅನಕ್ಷರಸ್ಥರಾದುದರಿಂದ ಬಿಳಿಯ ಕಾಗದದ ಮೇಲೆ ಜನರಿಂದ ಸಹಿ ಪಡೆದು, ಅನಂತರ ಕೊಟ್ಟ ಹಣಕ್ಕಿಂತಲೂ ಹೆಚ್ಚು ಹಣ ಅದರಲ್ಲಿ ನಮೂದಿಸುವುದು.

2. ಅತಿ ಹೆಚ್ಚಿನ ಬಡ್ಡಿ ದರ ನಿಗದಿ ಮಾಡುವುದು ಅಥವ ಕೆಲವೊಮ್ಮೆ ಚಕ್ರಬಡ್ಡಿಯನ್ನು ಆಕರಿಸುವುದು.

3. ಸಾಲದ ಹಣದ ಮರುಪಾವತಿ ಅಸಾಧ್ಯವೆಂದು ತೋರಿದಾಗ ಆಧಾರವಾಗಿಟ್ಟುಕೊಂಡ ಜಮೀನು, ಆಸ್ತಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು. (ಬಸವ ಕೆ.ಡಿ.:1999:97)

ಇನ್ನೂ ಮುಂತಾದ ದೋಷಯುಕ್ತ ವಿಧಾನಗಳನ್ನು ಲೇವಾದೇವಿಗಾರರು ಅನುಸರಿಸುತ್ತಿದ್ದರು.

ಕುವೆಂಪು ಅವರ ಕಾದಂಬರಿಗಳಲ್ಲಿ ಲೇವಾದೇವಿ ವ್ಯವಹಾರದಲ್ಲಿ ತೊಡಗಿಸಿಕೊಂಡವರೆಂದರೆ ಪುರೋಹಿತ ಮಂಜಭಟ್ಟ ಹಾಗು ಜಮೀನ್ದಾರರು. ವ್ಯಾಪಾರಸ್ಥರಾದ ಕರ್ಿೀನು ಸಾಬರ ಸಾಲದ ವ್ಯವಹಾರದ ಬಗ್ಗೆ ಒಂದು ದೃಷ್ಟಿ ಬೀರಿದ್ದಾರೆ. ಆದರೆ ಆಪ್ತ ವಲಯದ ಸಾಲದ ಬಗ್ಗೆ ಹೇಳಿಲ್ಲ. ಬಹುಶಃ ಅದು ಅನೌಪಚಾರಿಕವಾಗಿದುದರಿಂದಲೂ, ಅದರ ಪರಿಣಾಮ ಜೀವನದ ಮೇಲೆ ಗಣನೀಯವಾಗಿ ಆಗುತ್ತಿರಲ್ಲಿಲ್ಲವಾದ್ದರಿಂದಲೂ, ಅಥವಾ ಕಥಾ ಹಂದರಕ್ಕೆ ಸೂಕ್ತವಾಗುತ್ತಿರಲಿಲ್ಲವೆಂದೋ ಅದನ್ನು ಕೈಬಿಟ್ಟಿರಬೇಕು.

## 3.3 ಸ್ವಾತಂತ್ರ್ಯಪೂರ್ವದ ಹಳ್ಳಿಗಳ ಅಸಂಘಟಿತ ಹಣಕಾಸು ವ್ಯವಸ್ಥೆ :

ಕುವೆಂಪು ಅವರ ಕಾದಂಬರಿಗಳ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಪೂರ್ವದ ಹಳ್ಳಿಗಳಲ್ಲಿದ್ದ ಹಣಕಾಸಿನ ವ್ಯವಸ್ಥೆಯತ್ತ ಗಮನ ಹರಿಸೋಣ. ಹಳ್ಳಿಗಳು ಮೂಲತಃ ಕೃಷಿಯಾಧಾರಿತವಾದದ್ದರಿಂದ ಲೇವಾದೇವಿ ವ್ಯವಹಾರ ಮಾಡುವವರು ಬಹುಪಾಲು ದೊಡ್ಡ ಭೂಮಾಲಿಕರೇ ಆಗಿರುತ್ತಿದ್ದರು.

ಸ್ವಾತಂತ್ರ್ಯಪೂರ್ವ ಗ್ರಾಮೀಣ ಮಲೆನಾಡಿನಲ್ಲಿ ಬ್ಯಾಂಕುಗಳು ಇರಲಿಲ್ಲ. ಅದರ ಬದಲು ಸ್ಥಳೀಯ ಶ್ರೀಮಂತರು, ಭೂಮಾಲಿಕರು ಸಾಲವನ್ನು ನೀಡುತ್ತಿದ್ದರು. ಇಂತಹ ಅಸಂಘಟಿತ ಹಣಕಾಸಿನ ವ್ಯವಸ್ಥೆ ಆಂತರಿಕ ವ್ಯಾಪಾರವನ್ನು ಶೇಕಡ 90%ಅನ್ನು ನಿಯಂತ್ರಿಸುತ್ತಿತ್ತು ಎಂದು 1929ರಲ್ಲಿ ಸೆಂಟ್ರಲ್ ಬ್ಯಾಂಕಿಂಗ್ ಎನ್‌ಕ್ವೈರಿ ಕಮಿಟಿಯ ಸಮೀಕ್ಷೆಯಿಂದ ತಿಳಿದು ಬಂದಿದೆ. ಮದ್ರಾಸ್ ಬ್ಯಾಂಕಿಂಗ್ ಎನ್‌ಕ್ವೈರಿ ಕಮಿಟಿ ಪ್ರಕಾರ ಇಂತಹ ಲೇವಾದೇವಿಗಾರರಿಂದಲೇ ಶೇಕಡ 75%ರಷ್ಟು ದಕ್ಷಿಣ ಭಾರತದ ರೈತರು ಸಾಲ ಪಡೆಯುತ್ತಿದ್ದರು. (Dharma Kumar:1984:798). ಗ್ರಾಮೀಣ ಪ್ರದೇಶದಲ್ಲಿ ಸುಮಾರು 90%ರಷ್ಟು ಸಾಲ ಅಸಂಘಟಿತ ಲೇವಾದೇವಿಗಾರರಿಂದ ಪೂರೈಕೆಯಾಗುತ್ತಿತ್ತು.

ಇವರು ಹೆಚ್ಚಿನ ಬಡ್ಡಿದರ ನಿಗದಿಮಾಡುತ್ತಿದ್ದುದಲ್ಲದೆ ಅನೇಕ ಅವ್ಯವಹಾರ ಮೋಸಗಳನ್ನೂ ಮಾಡುತ್ತಿದ್ದುದು ಭಾರತೀಯ ಗ್ರಾಮೀಣ ಸಾಲ ವ್ಯವಸ್ಥೆಯ ವಿಶಿಷ್ಟ ಲಕ್ಷಣವಾಗಿದೆ. (Dharma Kumar: 1984:799). ಅನೇಕ ನಿಯಮಗಳನ್ನು ಜಾರಿಗೆ ತಂದು ಬಡ್ಡಿ ದರ ನಿಯಂತ್ರಣ ಮಾಡಲು ಪ್ರಯತ್ನಿಸಿದ ಬ್ರಿಟಿಷ್ ಸರ್ಕಾರ, ಗ್ರಾಮೀಣ ಸಾಂಸ್ಥಿಕೇತರ ಸಾಲದ ಬಡ್ಡಿ ದರ ನಿಯಂತ್ರಿಸುವಲ್ಲಿ ಮಾತ್ರ ವಿಫಲವಾಯಿತು. ಹಿಂದಿನಿಂದ ಹಾಗೇ ಉಳಿದುಕೊಂಡು ಬಂದ ವಂಶಪಾರಂಪರ್ಯವಾದ ಗ್ರಾಮೀಣ ಸಾಲ 1918ರ ಸಮಯದಲ್ಲಿ ಸುಮಾರು ತೊಂಬತ್ತು ಬಿಲಿಯನ್‌ರಷ್ಟಿತ್ತು, ಅಲ್ಲದೆ ಆರ್ಥಿಕ ಮುಗ್ಗಟ್ಟಿನ

ಸಮಯದಲ್ಲಿ ಕೃಷಿ ಮಾರುಕಟ್ಟೆಯ ಮೌಲ್ಯ ಇಳಿದು ಪರಿಸ್ಥಿತಿ ಇನ್ನೂ ವ್ಯತಿರಿಕ್ತವಾಯಿತು. ಹಾಗಾಗಿ ಬಡ್ಡಿದರಲ್ಲಿ ಸರ್ಕಾರವು ಜಾರಿಗೊಳಿಸಬೇಕೆಂದಿದ್ದ ಕಾನೂನು ಸಫಲವಾಗಲಿಲ್ಲ. ವೃತ್ತಿಪರ ಲೇವಾದೇವಿಗಾರರನ್ನು ಗುರುತಿಸುವುದೂ ಕಷ್ಟವಿತ್ತು. ಏಕೆಂದರೆ ಅನೇಕರು ತಮ್ಮ ಮೂಲ ವೃತ್ತಿಯೊಡನೆ ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮಂಜ ಭಟ್ಟರು ಪೌರೋಹಿತ್ಯದೊಂದಿಗೆ ಲೇವಾದೇವಿ ವ್ಯವಹಾರವನ್ನೂ ಮಾಡುತ್ತಿದ್ದ ಚಿತ್ರಣವನ್ನು ಕುವೆಂಪು ಕೊಡುತ್ತಾರೆ.

1950ರ ದಶಕದಲ್ಲಿ ಭಾರತದ ಆರ್ಥಿಕತೆಯಲ್ಲಿ ಅಸಂಘಟಿತ ಲೇವಾದೇವಿಗಾರರ ಪಾಲು ಸುಮಾರು ಶೇಕಡ 43%ರಷ್ಟು ಗ್ರಾಮೀಣ ಪ್ರದೇಶದಲ್ಲೂ ಶೇಕಡ 8% ರಿಂದ 11%ರಷ್ಟು ನಗರ ಪ್ರದೇಶದಲ್ಲಿಯೂ ಇತ್ತು ಎಂದು ನ್ಯಾಷನಲ್ ಸ್ಯಾಂಪಲ್ ಸರ್ವೆ ತಿಳಿಸುತ್ತದೆ. ಹಾಗಿದ್ದರೆ 1950 ದಶಕದ ಹಿಂದಿನ ಪಾಲು ಇದಕ್ಕಿಂತಲೂ ಹೆಚ್ಚು ಇದ್ದಿರಬೇಕೆಂದು ಊಹಿಸಬಹುದು.

### 3.4 ಲೇವಾದೇವಿಯ ಪ್ರಕಾರಗಳು :

ಕಡಿದಾಳು ರಾಮಪ್ಪಗೌಡರು ಮೂರು ವಿಧದ ಲೇವಾದೇವಿಯನ್ನು ದಾಖಲಿಸಿದ್ದಾರೆ.

1. **ಆಸ್ತಿಯನ್ನು ಆಧಾರವಾಗಿಡುವುದು :**
   ಜಮೀನಿರುವ ಕೃಷಿಕನು ಸಾಲ ತೆಗದುಕೊಂಡರೆ ಲೇವಾದೇವಿಗಾರನಿಂದ ತೆಗೆದುಕೊಂಡ ಸಾಲಕ್ಕೆ ತನ್ನ ಕೃಷಿ ಭೂಮಿ ಅಥವಾ ಯಾವುದೇ ಸ್ಥಿರಾಸ್ತಿಯನ್ನು ಲೇವಾದೇವಿಗಾರರಿಗೆ ಆಧಾರವಾಗಿ ಕೊಡಬೇಕಿತ್ತು.
2. **ಸಾಲಕ್ಕೆ ಅಡಕೆ, ಬತ್ತ ವಸೂಲಿ :**
   ಸಾಲ ತೆಗೆದುಕೊಂಡವನು ಸಾಲವನ್ನು ಅಡಕೆ ಅಥವಾ ಬತ್ತದ ಮೂಲಕ ಮರುಪಾವತಿ ಮಾಡಬೇಕಿತ್ತು.
3. **ಬೆಲೆ ಬಾಳುವ ಸಾಮಾನುಗಳನ್ನು ಅಡವಿಟ್ಟುಕೊಳ್ಳುವುದು :**
   ಬಂಗಾರ, ಬೆಳ್ಳಿ ಆಭರಣಗಳು, ತಾಮ್ರ, ಹಿತ್ತಾಳೆ, ಪಾತ್ರೆ ಪಗಡಸ್ನು ಸಾಲಕ್ಕೆ ಅಡವಿಡುವುದು.

ಹೀಗೆ ಸಾಲದ ಮರುಪಾವತಿ ಜಮೀನು, ಬತ್ತ, ಅಡಕೆ ಮೂಲಕ ಆಗುತ್ತಿತ್ತು.

ಸ್ವಾತಂತ್ರ್ಯಪೂರ್ವದ ಮಲೆನಾಡಿನಲ್ಲಿ ಗೌಡರು, ಪುರೋಹಿತರು ಲೇವಾದೇವಿ ವ್ಯವಹಾರ ಮಾಡುತ್ತಿದ್ದರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಲ್ಲೂರು ಪುರೋಹಿತರಾದ ಮಂಜಭಟ್ಟ ಪುರೋಹಿತನಾಗಿ ಮಲೆನಾಡಿಗೆ ಬಂದು ತನ್ನ ಪೌರೋಹಿತ್ಯದೊಂದಿಗೆ ಲೇವಾದೇವಿ ವ್ಯವಹಾರ ಮಾಡಿ ಶ್ರೀಮಂತನಾಗಿದ್ದ. ಇನ್ನೂ ಅನೇಕ ಗೌಡರು ಇದರಲ್ಲಿ ತೊಡಗಿಕೊಂಡು ಸಾಕಷ್ಟು ಜಮೀನು ಸಂಪಾದಿಸಿದ್ದರು.

### 3.4.1. ಆಸ್ತಿ / ಜಮೀನಿನ ಆಧಾರ :

ಇದು ಆಧುನಿಕ ಬ್ಯಾಂಕಿಂಗ್‌ನ ಸಾಲದ ರೀತಿಯಂತಿದ್ದು ಯಾರು ಲೇವಾದೇವಿಗಾರರಿಂದ ಸಾಲ ತೆಗೆದುಕೊಳ್ಳುತ್ತಾರೋ ಅವರು ತಮ್ಮ ಆಸ್ತಿಯನ್ನು ಅವರಿಗೇ ದೀಡುಮಾಡಿಕೊಡಬೇಕು, ಇಲ್ಲವೆ ಭೋಗ್ಯ ಮಾಡಿಕೊಡಬೇಕು ಅಥವಾ ನಂಬಿಕೆ ಕ್ರಯ ಮಾಡಬೇಕು.* ಸಾಲ ತೀರಿಸಲು ಒಪ್ಪಂದವಾದ ಅವಧಿಯೊಳಗೆ ಹಣವನ್ನು ಬಡ್ಡಿ ಸಮೇತ ಮರುಪಾವತಿಸದಿದ್ದಲ್ಲಿ, ಆಧಾರ ಮಾಡಿದ ಆಸ್ತಿ/ಜಮೀನು ಸಾಲ ಕೊಟ್ಟವರ ಪಾಲಾಗುತ್ತಿತ್ತು. ಕೆಲವು ಲೇವಾದೇವಿಗಾರರು ಸಾಲ ತೆಗದುಕೊಂಡ ಮುಗ್ಧರಿಂದ ರೆಜಿಸ್ಟರ್ ಕಾಲದಲ್ಲಿ ಎಷ್ಟು ಜಾಮೀನು ಬೇಕಾದರೂ ಬರೆಯಿಸಿ ಕೊಂಡು ರುಜುವಿಗೆ ಉದ್ದ ಅಥವಾ ಅಡ್ಡ ಎರಡು ಗೆರೆ ಹಾಕುವಂತೆ ಮಾಡುತ್ತಿದ್ದರು. (ಅನುಬಂಧ-ಹಾಲಪ್ಪ) ಇದರಿಂದಾಗಿ ಅನೇಕ ಖಾತೆದಾರರು ಇಂಥಾ ಲೇವಾದೇವಿ ಗಾರರಿಗೇ ಗೇಣಿದಾರರಾದರು.

ಈ ಲೇವಾದೇವಿಗಾರರಿಗೆ ಆಸ್ತಿ ಸಂಪಾದನೆಯೇ ಸಾಲ ಕೊಡುವ ಅಂತಿಮ ಗುರಿಯಾಗಿತ್ತು. ಹೀಗಾಗಿ ಜಮೀನು ಎಷ್ಟೇ ದೂರದಲ್ಲಿದ್ದರೂ ಅದನ್ನು ಅಡವಿಟ್ಟುಕೊಂಡು ಸಾಲ ಕೊಡುತ್ತಿದ್ದರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಸಿಂಬಾವಿ ಭರಮೈ ಹೆಗ್ಗಡೆ, ಕಲ್ಲೂರು ಮಂಜಭಟ್ಟರು, ಹಳೆಮನೆ ಸುಬ್ಬಣ್ಣ ಗೌಡರು ತಮ್ಮ ಊರಿಂದ ದೂರವಿದ್ದರೂ ಹೂವಳ್ಳಿ ವೆಂಕಟಣ್ಣನಿಂದ ಜಮೀನು ಬರೆಸಿಕೊಂಡು ಸಾಲ ಕೊಟ್ಟಿದ್ದರು. ಅಷ್ಟೊಂದು ಕೃಷಿ ಭೂಮಿಯ ಬಗ್ಗೆ ವ್ಯಾಮೋಹ!

ಸಾಲ ಮಾಡಿದವನು ಅದನ್ನು ತೀರಿಸಲಾಗದೆ ತನ್ನ ಆಸ್ತಿಯನ್ನು ಲೇವಾದೇವಿಗಾರನಿಗೇ ಕ್ರಯಕ್ಕೆ ಬರೆದು ಅವರ ಒಕ್ಕಲಾಗುತ್ತಿದ್ದ. ಅದೇ ಜಮೀನನ್ನು ಗೇಣಿ ಸಾಗುವಳಿಗೆ ಮಾಡುತ್ತಿದ್ದ. ಭೂಮಾಲಿಕರು ಎಷ್ಟೇ ದೂರದಲ್ಲಿದ್ದರೂ ಗೇಣಿ ಕೊಡುತ್ತಿದ್ದ ಅಥವಾ ಒಡೆಯರ ಸೇರೆಗಾರ ಗೇಣಿಯನ್ನು ಸಂಗ್ರಹಿಸುತ್ತಿದ್ದ. ಹೀಗೆ ಯಾವ ಖರ್ಚು ಶ್ರಮವಿಲ್ಲದೇ ಭೂಮಾಲಿಕರಿಗೆ ಗೇಣಿ ಬರುತ್ತಿತ್ತು. ಹೀಗೆ ಶ್ರೀಮಂತರಾದ ಅನೇಕ ಭೂಮಾಲಿಕರಿದ್ದರು.

ಈ ರೀತಿಯ ವ್ಯವಹಾರವನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೂವಳ್ಳಿ ವೆಂಕಟಣ್ಣನ ಸಂದರ್ಭದಲ್ಲಿ ನೋಡಬಹುದು. ಹೂವಳ್ಳಿ ವೆಂಕಟಣ್ಣ ಕಲ್ಲೂರ ಸಾಹುಕಾರ ಮಂಜಭಟ್ಟನ ಬಳಿ ಸಾಲ ಮಾಡಿದ್ದನು. ಆ ಸಾಲಕ್ಕೆ ತನ್ನ ಜಮೀನನ್ನು ನಂಬಿಕೆ ಕ್ರಯಕ್ಕೆ ಬರೆದುಕೊಟ್ಟಿದ್ದನು. ಮಾಡಿದ ಸಾಲವನ್ನು

---

ದೀಡು ಮಾಡುವುದು : ಎಂದರೆ ಬೆಲೆ ಬಾಳುವ ಆಭರಣಗಳನ್ನು ಅಥವಾ ಪಾತ್ರೆ ಮತ್ತು ಇತರ ಸಾಮಾನುಗಳನ್ನು ಇಂತಿಷ್ಟು ದಿನ ಎಂದು ಮಾತು ಮಾಡಿ, ಸಾಹುಕಾರನಲ್ಲಿ ಅಡವಿಟ್ಟು ವಾಯಿದೆಯ ದಿನದೊಳಗೆ ತಮ್ಮ ಸಾಮಾನನ್ನು ಬಿಡಿಸಿಕೊಳ್ಳುವುದು.

ನಂಬಿಕೆ ಕ್ರಯ : ಸಾಲಗಾರ ಹಾಗು ಸಾಹುಕಾರನ ಮಧ್ಯೆ ವಿಶ್ವಾಸವಿದ್ದಾಗ, ಕೇವಲ ಬಾಯಿ ಮಾತಿನಲ್ಲಿ ಸಾಲಗಾರ ಸಾಹುಕಾರನಿಗೆ ಸಾಲಕ್ಕೆ ಆಧಾರವಾಗಿ ತನ್ನ ಜಮೀನು ಕೊಡುವುದಾಗಿ ಹೇಳುತ್ತಾನೆ. ಇದಕ್ಕೆ ಪ್ರಾಮಿಸರಿ ನೋಟನ್ನು ಬರೆಸುವುದಿಲ್ಲ. ಗದ್ದೆಯಲ್ಲಿ ಕೆಲಸ ಮಾಡುವುದು, ಬೆಳೆಯ ಲಾಭ ಪಡೆಯುವುದು ರೈತನೇ ಹೊರತು ಸಾಹುಕಾರನಲ್ಲ. ಹೇಳಿದ ಸಮಯಕ್ಕೆ ಸಾಲ ಹಿಂದಿರುಗಿಸದಿದ್ದರೆ ಅವನ ಜಮೀನನ್ನು ವಶಪಡಿಸಿಕೊಳ್ಳಲು ಸಾಹುಕಾರನಿಗೆ ಹಕ್ಕಿತ್ತು.

ಭೋಗ್ಯಮಾಡು : ಸಾಲಗಾರ ಸಾಹುಕಾರನಿಂದ ಹಣ ಪಡೆದು ತನ್ನ ಜಮೀನನ್ನು ನಿರ್ದಿಷ್ಟ ಸಮಯಕ್ಕೆ ಅಂದರೆ ಸಾಲ ಮರುಪಾವತಿಸುವವರೆಗೆ ಸಾಹುಕಾರನಿಗೆ ಪ್ರಾಮಿಸರಿ ನೋಟಿನ ಮೇಲೆ ಬರೆದು ಕೊಡುತ್ತಾನೆ. ತನ್ನ ಜಮೀನಿನಲ್ಲಿ ತಾನೇ ದುಡಿದು, ಬೆಳೆಯನ್ನು ಒಪ್ಪಂದ ಮಾಡಿದ ಪರಿಮಾಣದಲ್ಲಿ ಸಾಹುಕಾರನಿಗೆ ಕೊಟ್ಟು ಉಳಿದುದನ್ನು ತಾನಿಟ್ಟುಕೊಳ್ಳುತ್ತಾರೆ.

ತೀರಿಸಲಿಲ್ಲ. ಹಾಗಾಗಿ ಮಂಜಭಟ್ಟರ ಕರಣಿಕನಾಗಿದ್ದ ಕಿಟ್ಟ ಐತಾಳರು ನೇಗಿಲುಗಳನ್ನು ಹೊತ್ತ ಹತ್ತಿಪ್ಪತ್ತು ಜನರೊಂದಿಗೆ ಬಂದು ವೆಂಕಟಣ್ಣನ ಗದ್ದೆಯನ್ನು ಊಳ ತೊಡಗಿದರು. ಇದನ್ನು ತಡೆಯಲು ಹೋದಾಗ ವೆಂಕಟಣ್ಣ ಅವನನ್ನು ಲುಂಗಿಸಾಬು, ಇಜಾರದಸಾಬು, ಅಜ್ಜಿಸಾಬು ಇತರ ಆಳುಗಳ ಬೆಂಬಲದೊಡನೆ ಹೊಡೆದು ಗದ್ದೆಯಿಂದಾಚೆ ನೂಕಿದರು.

ಕೋಣೂರು ರಂಗಪ್ಪಗೌಡರು ಬಂದು ವಿಚಾರಿಸಲಾಗಿ ಹೂವಳ್ಳಿ ವೆಂಕಟಪ್ಪನಾಯಕರು ತಮ್ಮ ಜಮೀನನ್ನೆಲ್ಲ ಕಲ್ಲೂರು ಸಾಹುಕಾರರಿಗೆ ಕ್ರಯಕ್ಕೆ ಬರೆದುಕೊಟ್ಟಿರುವುದರಿಂದ ಅವರಿಗೆ ಸೇರುವ ಜಮೀನಿನ ಬೇಸಾಯಕ್ಕೆ ಅವರು ಏರ್ಪಾಡು ಮಾಡಿರುವರೆಂದು ಕಿಟ್ಟ ಐತಾಳ ಹೇಳಿದ. (ಕುವೆಂಪು :2006ಬ:353)

ರಂಗಪ್ಪಗೌಡರು ಪಂಚಾಯಿತಿ ಮಾಡಿ ಕಿಟ್ಟ ಐತಾಳರು ಆಲು ಮತ್ತು ನೇಗಿಲುಗಳನ್ನೆಲ್ಲ ವಾಪಸ್ಸು ಕಳಿಸಿ, ಇನ್ನೊಂದು ವಾರದೊಳಗಾಗಿ ವೆಂಕಟ್ಟ ನಾಯಕರು ಸಾಹುಕಾರರಲ್ಲಿಗೆ ಬಂದು ಯಾವುದನ್ನೂ ಇತ್ಯರ್ಥ ಮಾಡಿಕೊಳ್ಳಬೇಕೆಂದೂ, ತಡಮಾಡಿದರೆ ಮಳೆ ಹಿಡಿಯುವುದರೊಳಗೆ ಗದ್ದೆಯ ಬೇಸಾಯಕ್ಕೆ ತೊಡಗುವುದಾಗಿ ತಿಳಿಸಿ ಹಿಂದಿರುಗಿದರು' (ಕುವೆಂಪು:2006ಬ:354)

''...ಹೂವಳ್ಳಿ ವೆಂಕಟಣ್ಣ ತನಗೆ ಭಟ್ಟರಲ್ಲಿದ್ದ ಸಾಲದ ಮೊತ್ತವನ್ನು ತಿಳಿಸಿ, ನಂಬಿಕೆ ಕ್ರಯ ಬರೆದುಕೊಟ್ಟಿದ್ದನ್ನು ನಿಜಕ್ರಯವೆಂದೇ ಮೋಸ ಮಾಡಿದ್ದಾರೆಂದು ಅವರನ್ನು ನಿಂದಿಸತೊಡಗಿದನು. ಭಟ್ಟರು ಸಾಹುಕಾರ ವಂಚನೆಯ ರೀತಿಗಳನ್ನು ವೆಂಕಟಣ್ಣನ ನೆನಪಿಗೆ ತಂದುಕೊಟ್ಟು 'ಅವರ ಹತ್ರ ಹೋದವರು ಅನೇಕರು ಹಾಳಾಗಿದ್ದಾರೆ. ನೀನು ಹೇಗಾದರು ಉಪಾಯದಿಂದ ಪಾರಾಗದಿದ್ದರೆ ನಿನ್ನ ಜಮೀನು ಉಳಿಯುವುದಿಲ್ಲ' ಎಂದು ರಂಗಪ್ಪಗೌಡರು ಎಚ್ಚರಿಕೆ ಹೇಳಿದ್ದಕ್ಕೆ ವೆಂಕಟಣ್ಣ ನರಿನಗೆ ನಗುತ್ತಾ ಕಣ್ಣು ಮಿಂಚಿಸಿ ಹೇಳಿದನು : 'ಕಾನೂನು ಪರ್ಕಾರ ಅವರು ನನ್ನ ಜಮೀನು ದಕ್ಕಿಸಿಕೊಳ್ಳಾದು ಅಷ್ಟೇನು ಸುಲಭ ಅಲ್ಲಾ! ಅವರಿಗೆ ಬರಕೊಡಾಕೆ ಮುಂಚೇನೆ ಆದರಲ್ಲಿ ಸುಮಾರು ಪಾಲು ಗದ್ದೆ ತೋಟಾನ ಬೆಟ್ಟಳ್ಳಿ ಗೌಡರಿಗೆ. ಹಳೇಮನೆ ಹೆಗ್ಗಡೇರಿಗೆ, ಸಿಂಬಾವಿ ಹೆಗ್ಗಡೇರಿಗೆ ಎಲ್ಲ ದೀಡು, ಭೋಗ್ಯ, ಕ್ರಯ ಎಲ್ಲಾ ಮಾಡಿಟ್ಟೇನ!... ಅವರಲ್ಲೂ ಒಬ್ಬೊಬ್ರ ಹತ್ರಾನೂ ಸುಮಾರು ಸಾಲ ಅದೆ ನನಗೆ!'' (ಕುವೆಂಪು :2006ಬ:354)

ಹೀಗೆ ಲೇವಾದೇವಿಗಾರರು ಸಾಲಗಾರರ ಜಮೀನನ್ನು ಪಡೆಯಲು ನಾನಾ ವಿಧವ ತಂತ್ರಗಳಿಂದ ಪ್ರಯತ್ನಿಸುತ್ತಿದ್ದರು ಹಾಗು ಸಫಲರೂ ಆಗಿ ಬಹು ಶ್ರೀಮಂತ ಜಮೀನ್ದಾರರಾಗಿದ್ದರು. ಮಂಜಭಟ್ಟರು ಇಂಥ ವ್ಯವಹಾರದಿಂದ ಆ ಭಾಗದ ದೊಡ್ಡ ಜಮೀನ್ದಾರರಿಗೇ ಸಾಲಕೊಡುವಷ್ಟು ಶ್ರೀಮಂತರಾಗಿದ್ದರು.

### 3.4.2 ಸಾಲಕ್ಕೆ ಅಡಕೆ ಬತ್ತ ವಸೂಲಿ :

ಕೆಲವೊಮ್ಮೆ ಸಾಲ ತೆಗೆದುಕೊಂಡ ಒಕ್ಕಲು ಸಾಲವನ್ನು ಅಡಕೆ ಬತ್ತದ ಮೂಲಕ ಮರುಪಾವತಿ ಮಾಡುತ್ತಿದ್ದ. ಇದಕ್ಕೆ ವರ್ಷಕ್ಕೆ ಒಂದು ವಿಶಿಷ್ಟ ದಿನದಂದು ಲೆಕ್ಕ ಮಾಡುತ್ತಿದ್ದರು. ಅಂದರೆ

ಭೂಮಾಲಿಕರು, ಸಾಹುಕಾರರು ಲೆಕ್ಕ ಮಾಡುವುದು ಆಶ್ವೀಜ ಬಹುಳ ಅಮವಾಸ್ಯೆ ದಿನದಂದು. ಇದು ಇವರ ಲೆಕ್ಕದ ವರ್ಷದ ಆಖೈರು ಅಥವ ಕೊನೆಯ ದಿನ. ಇಂದಿನ ಹಣಕಾಸು ವರ್ಷದ ಕೊನೆಯ ದಿನ ಮಾರ್ಚ್ 31 ಇದ್ದಂತೆ. ಆದರೆ ಅವರು ಸಾಲ ಕೊಟ್ಟು ಬಡ್ಡಿಯನ್ನು ಲೆಕ್ಕ ಮಾಡುತ್ತಿದ್ದ ರೀತಿ ವಿಚಿತ್ರವಾಗಿತ್ತು. ಸಾಲವಂದಿಗರನ್ನು ಸಾಹುಕಾರರು ಮನಸೋ ಇಚ್ಛೆ ಹೇಗೆ ಶೋಷಿಸುತ್ತಿದ್ದರು ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಆಶ್ವೀಜ ಬಹುಳ ಅಮವಾಸ್ಯೆಗೆ ಮೊದಲು ಸಾಲ ತೆಗೆದುಕೊಂಡರೆ ಆ ಹಣಕ್ಕೆ ಒಂದು ವರ್ಷವಾಗಿದ್ದರೆ ಅದಕ್ಕೆ ಒಂದು ವರ್ಷದ ಬಡ್ಡಿಯನ್ನು ಲೆಕ್ಕ ಹಾಕುತ್ತಿದ್ದರು. ಸಾಲದ ಬಡ್ಡಿಯನ್ನು ಆಶ್ವೀಜ ಬಹುಳ ಅಮವಾಸ್ಯೆಯ ದಿನವೇ ಬೆಲೆ ನಿರ್ಧರಿಸುತ್ತಿದ್ದರು. ಅದೂ 'ಸೀಮೆ ಧಾರಣೆ'ಯ ಆಧಾರದ ಮೇಲೆ.

'ಸೀಮೆ ಧಾರಣೆ' ಅಂದರೆ ಆ ಸೀಮೆಯಲ್ಲಿ ಇತರ ಲೇವಾದೇವಿಗಾರರು, ಅಡಕೆ ವ್ಯಾಪಾರಸ್ಥರು, ಆ ವರ್ಷ ಅಡಕೆ ಬತ್ತಕ್ಕೆ ಯಾವ ಬೆಲೆ ನಿಗದಿ ಮಾಡಿದ್ದಾರೆ, ಯಾವ ರೇಟು ನಡೆಯುತ್ತಿದೆ ಎಂಬುದನ್ನು ತಿಳಿದು ತುಲನೆ ಮಾಡಿ, ಅದರಲ್ಲಿ ಕಡಿಮೆ ದರ ಯಾವುದೆಂದು ನೋಡುತ್ತಿದ್ದರು. ಹೀಗೆ ಕಡಿಮೆ ದರವನ್ನು ಅಡಿಕಗೆ ಬತ್ತಕ್ಕೆ ಹಾಕಿ ಎಷ್ಟು ಹಣ ಆಗುತ್ತೋ ಅದನ್ನು ಅವನ ಲೆಕ್ಕಕ್ಕೆ ಜಮಾ ಮಾಡಿಕೊಳ್ಳುತ್ತಿದ್ದರು. ಆದರೆ ಇವನು ಅಡಿಕೆ ಬತ್ತ ಕೊಟ್ಟು ಹತ್ತು ತಿಂಗಳುಗಳಾಗಿದ್ದರೂ, ಅಂದೇ ಅವರು ಆತನ ಲೆಕ್ಕಕ್ಕೆ ಜಮಾ ತೆಗೆದುಕೊಳ್ಳುತ್ತಿರಲಿಲ್ಲ. ರೇಟು ನಿಗದಿಯಾಗದ್ದರಿಂದ ಅವನ ಹಣಕ್ಕೆ ಬಡ್ಡಿ ಇಲ್ಲ. ಲೇವಾದೇವಿಗಾರರ ಹಣಕ್ಕೆ ವರ್ಷವೆಲ್ಲ ಬಡ್ಡಿ. ಹೀಗಾಗಿ ಸೀಮೆಧಾರಣೆಯ ಪದ್ಧತಿ ಅತಾರ್ಕಿಕವಾಗಿತ್ತು. ಇದರಿಂದ ಸಾಹುಕಾರರ ಬಡ್ಡಿ ಏರುತ್ತಲೇ ಇತ್ತು. ಸಾಲುಗಾರ ಮರುಪಾವತಿಸಿದ್ದೆಲ್ಲ ಬಡ್ಡಿಗೆ ಆಗಿ ಅಸಲು ಹಣ ಬೆಳೆಯುತ್ತಾ ಬಂದು, ಆಸ್ತಿಗಳೆಲ್ಲಾ ಲೇವಾದೇವಿಗಾರರ ಪಾಲಾಗುತ್ತಿತ್ತು. ಹೀಗೆ ಒಕ್ಕಲುಗಳ ಸಂಖ್ಯೆ ಬೆಳೆಯುತ್ತ ಬಂತು. ಅಲ್ಲದೆ ಕೆಲವರು ಸಾಲ ಮಾಡಿ ಹೊಸದಾಗಿ ಆಸ್ತಿ ಸಂಪಾದಿಸಲು ಹೋಗಿ ಪಿತ್ರಾರ್ಜಿತ ಆಸ್ತಿಯನ್ನೂ ಕಳೆದುಕೊಂಡಿದ್ದರು. (ಕಡಿದಾಳು ರಾಮಪ್ಪಗೌಡ ಕೆ.ಎಸ್:1998:43)

### 3.4.3. ಬೆಲೆ ಬಾಳುವ ಸಾಮನುಗಳನ್ನು ಅಡವಿಡುವುದು :

ಈ ವಿಧದ ಲೇವಾದೇವಿ ಪದ್ಧತಿಯಲ್ಲಿ ಸಾಲಕ್ಕೆ ಆಧಾರವಾಗಿ ಬಂಗಾರ, ಬೆಳ್ಳಿ ಆಭರಣಗಳು, ತಾಮ್ರ, ಹಿತ್ತಾಳೆ ಪಾತ್ರೆ ಪಗಡವನ್ನು ಸಾಲಕ್ಕೆ ಅಡವಿಟ್ಟುಕೊಳ್ಳುತ್ತಿದ್ದರು.

ಇಟ್ಟ ಸಾಮಾನಿನ ಅರ್ಧ ಬೆಲೆಯಷ್ಟು ಸಾಲ ಕೊಡುತ್ತಿದ್ದರು. ಇಪ್ಪತ್ತು ರೂಪಾಯಿ ಬೆಲೆ ಬಾಳುವ ಪಾತ್ರೆಯನ್ನು ಅಡವಿಟ್ಟರೆ ಹತ್ತು ರೂಪಾಯಿ ಸಾಲ ಕೊಡುತ್ತಿದ್ದರು. (ಅನುಬಂಧ-ಹಾಲಪ್ಪ ). ಅಡಿಕೆ ಬತ್ತ ಸಾಲಕ್ಕೆ ಆಶ್ವೀಜ ಬಹುಳ ಅಮವಾಸ್ಯೆ ಮತ್ತು ಸೀಮೆಧಾರಣೆ ಲೆಕ್ಕದಿಂದ ಶ್ರೀಮಂತರು ಲಾಭ ಗಳಿಸಿದರೆ, ಇದರಲ್ಲಿ ವಸ್ತು ಬಿಡಿಸಿಕೊಳ್ಳಲು ಇರುವ ವಾಯಿದೆ ಮೂಲಕ ಲಾಭ ಗಳಿಸುತ್ತಿದ್ದರು. ಅಂದರೆ ಅಡವಿಟ್ಟ ಮಾಲನ್ನು ಇಷ್ಟು ದಿನಗಳ ಒಳಗೇ ಅಸಲು ಬಡ್ಡಿ ಕೊಟ್ಟು ಬಿಡಿಸಿಕೊಂಡು ಹೋಗಬೇಕೆಂಬ ಕರಾರು ಆಗಿರುತ್ತಿತ್ತು. ವಾಯಿದೆ ದಿನ ಸಾಲಗಾರರು ಸಾಮಾನನ್ನು ಬಿಡಿಸಿಕೊಳ್ಳದಿದ್ದರೆ, ಅದು ಶ್ರೀಮಂತರಿಗೇ ಸೇರುತ್ತಿತ್ತು. ವಾಯಿದೆಯ ದಿನವನ್ನು ಮುಂದೂಡುತ್ತಿರಲಿಲ್ಲ.

ಆದರೆ ಇಲ್ಲೂ ಸಹ ಶ್ರೀಮಂತರು ಲಾಭ ಗಳಿಸುವ ವಿಧಾನವನ್ನು ಕಂಡುಕೊಂಡಿದ್ದರು. ಆಭರಣ, ತಾಮ್ರ, ಹಿತ್ತಾಳೆಯ ಪಾತ್ರೆ ಪಗಡೆಯ ಆಸೆಗೆ ಒಳಗಾಗಿ ಅದನ್ನು ತಮ್ಮ ಕೈವಶಮಾಡಿಕೊಳ್ಳುತ್ತಿದ್ದರು.

ಮಾಲನ್ನು ಅಡ ಇಟ್ಟವನು ವಾಯಿದೆಗೆ ಸರಿಯಾಗಿ ಹಣವನ್ನು ಕೊಟ್ಟು ತನ್ನ ಮಾಲನ್ನು ಬಿಡಿಸಿ ಕೊಳ್ಳಲು ಬರುವುದು ಮುಂಚಿತವಾಗಿ ತಿಳಿದರೆ, ಆ ದಿನ ಸಾಲ ಕೊಟ್ಟ ಶ್ರೀಮಂತರು ಮನೆಯಲ್ಲಿ ಇರುತ್ತಲೇ ಇರಲಿಲ್ಲ, ಸಾಲಗಾರನು ಕಾದು ಕಾದು ಹಿಂದಿರುಗಬೇಕಿತ್ತು, ಮರುದಿನ ಬಂದರೆ ಕರಾರು ಆಗಿದ್ದ ವಾಯಿದೆ ದಿನ ಮುಗಿಯಿತೆಂದು ಹೇಳಿ ಮಾಲನ್ನು ಒಳಗೆ ಹಾಕಿಕೊಳ್ಳುತ್ತಿದ್ದರು. ಸಾಲಗಾರ ತಾನು ವಾಯಿದೆ ದಿನವೇ ಬಂದಿದ್ದೆ ಎಂದರೂ ಅವನ ಮಾತನ್ನು ಕೇಳುತ್ತಿರಲಿಲ್ಲ.

ಕೆಲವೊಮ್ಮೆ ಇದು ಗುಟ್ಟಾಗಿ ನಡೆಯುತ್ತಿತ್ತು. ವಸ್ತು ಅಡವಿಟ್ಟು ಸಾಲ ಪಡೆದಿರುವುದು ಇತರರಿಗೆ ತಿಳಿದರೆ ತನಗೆ ಅವಮಾನವೆಂದು ಬಗೆದು, ಸಾಲು ಪಡೆಯುವವರ ಹಾಗು ಕೊಡುವವರ ನಡುವೆ ರಹಸ್ಯವಾಗಿ ಈ ವ್ಯವಹಾರ ನಡೆಯುತ್ತಿತ್ತು. ಈ ಗೌಪ್ಯತೆಯ ಲಾಭವನ್ನು ಲೇವಾದೇವಿಗಾರ ಬಳಸಿ ಕೊಂಡು ಆ ಸಾಮಾನನ್ನು ಪಡೆಯಲು ವಾಯಿದೆಯ ನೆಪ ಹೇಳಿ ತನ್ನಲ್ಲೇ ಇರಿಸಿಕೊಳ್ಳುತ್ತಿದ್ದ. ಮರ್ಯಾದೆಯ ಪ್ರಶ್ನೆಯಿದ್ದರಿಂದ ಸಾಲ ಪಡೆದವನು ಶ್ರೀಮಂತನನ್ನು ಪ್ರಶ್ನಿಸುವಂತಿರಲಿಲ್ಲ.

### 3.4.4. ಹುಲಿಭತ್ತದ ವ್ಯವಹಾರ :

ಇನ್ನೊಂದು ರೀತಿ ವ್ಯವಹಾರವಿತ್ತು. ಅದಕ್ಕೆ ಹುಲಿಭತ್ತದ ವ್ಯವಹಾರವೆಂದು ಹೆಸರು. ಒಕ್ಕಲುಗಳಿಂದ ಬಂದ ಗೇಣಿ ಭತ್ತದ ದಾಸ್ತಾನು ಭೂಮಾಲಿಕರ ಬಳಿ ಇರುತ್ತಿತ್ತು. ಊಟಕ್ಕೆ ಭತ್ತ ಕಡಿಮೆಯಾದವರು ಭೂಮಾಲಿಕರಿಂದ ಭತ್ತವನ್ನು ಸಾಲವಾಗಿ ಪಡೆಯುತ್ತಿದ್ದರು. ಅನೇಕ ಗೇಣಿದಾರರ ಬಳಿ ಒಡೆಯರಿಗೆ ಸಲ್ಲಬೇಕಾದ ಗೇಣಿ ಕೊಟ್ಟ ನಂತರ ಕಡಿಮೆ ಭತ್ತ ಉಳಿಯುತ್ತಿತ್ತು. ಅದು ಮಳೆಗಾಲ ಮುಗಿಯುವುದ ರೊಳಗೇ ಖರ್ಚಾಗಿಬಿಡುತ್ತಿತ್ತು. ಆಗ ಅವರು ಒಡೆಯರಿಂದ ಭತ್ತವನ್ನು ಕಡವಾಗಿ ತಂದು, ಮುಂದೆ ಗದ್ದೆ ಕೊಯಿಲು ಮುಗಿದ ತಕ್ಷಣ ಒಡೆಯರಿಗೆ ಹಿಂದಿರುಗಿಸುತ್ತಿದ್ದರು. ಇದಕ್ಕೂ ಬಡ್ಡಿ ಸೇರಿಸಿ ಕೊಡ ಬೇಕಿತ್ತು. ಅಂದರೆ ಅವನು ಒಂದು ಕಂಡುಗ ಭತ್ತ ತಂದರೆ ಒಂದಕ್ಕೆ ಹೆಚ್ಚಿಗೆ ಹತ್ತು ಕೊಳಗದಿಂದ ಒಂದು ಕಂಡುಗದವರೆಗೆ ಸೇರಿಸಿ ಕೊಡಬೇಕಿತ್ತು. ಈ ಹೆಚ್ಚಿಗೆ ಕೊಡುವ ಭತ್ತಕ್ಕೆ ಹುಲಿಭತ್ತವೆಂದು ಹೆಸರು. ಈ ರೀತಿ ಅನೇಕ ಜನರು ತಮಗೆ ಬಂದ ಗೇಣಿ ಭತ್ತವನ್ನೆ ಹೋಗಿ ಕೊಡುತ್ತಿದ್ದರು. ಲೇವಾದೇವಿಗಾರರು ನೂರಾರು ಕಂಡುಗ ಭತ್ತವನ್ನು ಪುಕ್ಕಟ್ಟೆಯಾಗಿ ಸಂಪಾದಿಸುತ್ತಿದ್ದರು. (ಕಡಿದಾಳು ರಾಮಪ್ಪಗೌಡ ಕೆ.ಎಸ್. :1998:44)

### 3.5 ಸಾಲ ವಸೂಲಿ ಕ್ರಮ :

ಕುವೆಂಪು ಅವರು ಆಸ್ತಿಯನ್ನು ಅಡವಿಟ್ಟುಕೊಂಡು ಸಾಹುಕಾರರಾದ ಕಲ್ಲೂರು ದೇವಸ್ಥಾನದ ಬ್ರಾಹ್ಮಣ ಮಂಜಭಟ್ಟರ ಬಗ್ಗೆ ಮಲೆಗಳಲ್ಲಿ ಮದುಮಗಳಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಮಂಜಭಟ್ಟರು

ಅಜ್ಜರನ್ನು ಬಡಬಗ್ಗರನ್ನೂ ನಾನಾ ರೀತಿಯಿಂದ ಸುಲಿದು ಸಾಹುಕಾರರೆನಿಸಿಕೊಂಡಿದ್ದರು. ಅವರು ಸಾಲ ವಸೂಲಿ ಮಾಡಲು ಸಾಬರನ್ನು ನೇಮಿಸಿಕೊಂಡಿದ್ದರು.

'ಹೊನ್ನಳ್ಳಿ ಹೊಡೆತದ ಮೂಲ ಪ್ರಪಿತಾಮಹರೆಂದರೆ ಕಲ್ಲೂರು ಸಾಹುಕಾರ ಮಂಜಭಟ್ಟರು. ಗಟ್ಟದ ಕೆಳಗಣಿಂದ ಪಂಚಪಾತ್ರೆ ಪಾಣಿ ಪಂಚೆಯೊಡನೆ ಪೂಜಾರಿಯಾಗಿ ಮೇಲೆ ಬಂದವರು. ಸ್ವಸಾಮರ್ಥ್ಯದಿಂದಲೂ, ನೈಪುಣ್ಯದಿಂದಲೂ, 'ಪುಣ್ಯದಿಂದಲೂ, ಶ್ರೀಮಂತರೂ ಜಮೀನುದಾರರೂ ಆದರು. ಸಾಲ ಕೊಟ್ಟೂ, ಸಾಲ ಕೊಟ್ಟಂತೆ ಬರೆಯಿಸಿಕೊಂಡೋ ಅಕ್ಷರ ಬಂದವರಿಂದ ರುಜು ಹಾಕಿಸಿ ಕೊಂಡೋ, ಅಕ್ಷರ ಬಾರದವರಿಂದ ಹೆಬ್ಬೆಟೊತ್ತಿಸಿಕೊಂಡೋ ಎಲ್ಲರ ಭಯ ಗೌರವಗಳಿಗೆ ಪಾತ್ರರಾಗಿ ಸುಪ್ರಸಿದ್ಧರಾದರು. ಆದರೆ ದಂಡಶಕ್ತಿ ಇಲ್ಲದಿದ್ದರೆ ಲಕ್ಷ್ಮಿಯನ್ನುಳಿಸಿಕೊಳ್ಳುವುದು ಕಷ್ಟ ಎಂಬುದು ಅವರಿಗೆ ಬೇಗನೆ ಅನುಭವಕ್ಕೆ ಬಂತು.' **(ಕುವೆಂಪು:2006ಬ:235)**

ಕೊಟ್ಟ ಸಾಲ ವಸೂಲಿ ಮಾಡಲು ಮಂಜಭಟ್ಟರು ಹಿಂಸಾ ಮಾರ್ಗವನ್ನು ಕಂಡುಕೊಂಡರು. ತಾವು ದೈಹಿಕವಾಗಿ ಬಲಶಾಲಿಯಲ್ಲವಾದ್ದರಿಂದ ಹೊನ್ನಳ್ಳಿಯಿಂದ ಕೆಲವು ಉಂಡಾಡಿಗಳಾದ ಪುಂಡ ಸಾಬರನ್ನು ಮೇಗರವಳ್ಳಿಯ ಕರಿಮೀನು ಸಾಬು ಮತ್ತು ಅವನ ತಮ್ಮ ಪುಡೀ ಸಾಬು ಮುಖಾಂತರ ಕರೆಸಿ ಅವರನ್ನು 'ವಸೂಲಿ ಸಾಬ'ರನ್ನಾಗಿ ನೇಮಿಸಿಕೊಂಡರು.

ಈ ವ್ಯವಸ್ಥೆ ಇಂದಿನ ಬ್ಯಾಂಕುಗಳು ತಮ್ಮ ಸಾಲ ವಸೂಲಿಗೆ ನಿಯಮಿಸಿಕೊಳ್ಳುವ 'ರಿಕವರಿ ಆಫೀಸರ್' ನಂತೆ ಇರುವುದು. ಇದಕ್ಕೂ ಕೂಡ ಮಂಜಭಟ್ಟರು ಪ್ರಳಯಾಂತಕ ಬುದ್ಧಿವಂತಿಕೆಯನ್ನು ಉಪಯೋಗಿಸಿದ್ದರು; ಇದಕ್ಕೆ ತಮ್ಮದೇ ಆದ ಕಾರಣವಿತ್ತು.

'ಊರು ಮನೆಯವರನ್ನು ಆ ಕೆಲಸಕ್ಕೆ ಗೊತ್ತು ಮಾಡಿಕೊಂಡರೆ ಅವರು ನಿರ್ದಾಕ್ಷಿಣ್ಯವಾಗಿ ವರ್ತಿಸುವುದು ಸಾಧ್ಯವಿಲ್ಲ. ತಲತಲಾಂತರದಿಂದ ಗುರುತು ಪರಿಚಯ ಇರುವವರನ್ನೂ, ದೂರವೊ ಹತ್ತಿರವೊ ಆದ ಸಂಬಂಧಿಗಳನ್ನೂ, ಹಿಂದೆ ಪ್ರತಿಷ್ಠಿತರಾದ ತಮಗೆ ನೆರವಾಗಿದ್ದು ತಮ್ಮ ಗೌರವಕ್ಕೂ ಪಾತ್ರರಾಗಿದ್ದು ಈಗ ಅವನತಿಗಿಳಿದಿದ್ದವರನ್ನು ದಯೆ ದಾಕ್ಷಿಣ್ಯಗಳಿಲ್ಲದೆ, ಮುಖ ಮೋರೆ ನೋಡದೆ, ಸ್ಥಾನಮಾನಗಳೊಂದನ್ನೂ ಗಣನೆಗೆ ತರದೆ 'ವಸೂಲಿ' ಕೆಲಸ ಮಾಡಬೇಕಾದರೆ ಸ್ಥಲದಿಂದಲೂ ಜಾತಿಮತಗಳಿಂದಲೂ ದೂರವಾಗಿರುವ ಸಾಬರೆ ಅದಕ್ಕೆ ತಕ್ಕವರೆಂದು ನಿರ್ಣಯಿಸಿತ್ತು, ಭಟ್ಟರ ರಾಜಕೀಯ ಅರ್ಥಶಾಸ್ತ್ರ ಪ್ರತಿಭೆ! **(ಕುವೆಂಪು:2006ಬ:236)**

ಹೀಗೆ ಬಂದ ಸಾಬರ ನಿಷ್ಪಕ್ಷಪಾತ ಸೇವೆಯನ್ನು 'ಶ್ರೀಮಂತರಾಗಿದ್ದು ಒಕ್ಕಲುಗಳಿಗೂ ಇತರರಿಗೂ ಸಾಲ ಕೊಟ್ಟಿದ್ದ ಬೆಟ್ಟಳ್ಳಿ ಕಲ್ಲಯ್ಯಗೌಡರು, ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರು, ಸಿಂಬಾವಿ ಭರಮೈ ಹೆಗ್ಗಡೆಯವರು, ಲಕ್ಕುಂದದ ಹಳೆಪೈಕದ ಸೇಸ ನಾಯಕರು ಮೊದಲಾದವರೆಲ್ಲ ತಮ್ಮ ತಮ್ಮ ದಘೂತಿಗೆ ತಕ್ಕಂತೆ ದುಡ್ಡಿಗೋ ಬತ್ತಕ್ಕೋ ಅಡಕೆಗೋ ವಸೂಲಿ ಸಾಬರ ಸೇವೆಯನ್ನು ಪಡೆಯತೊಡಗಿದರು.' **(ಅದೇ).**

ಪುರೋಹಿತರಾಗಿದ್ದ ಮಂಜಭಟ್ಟರು ಶ್ರೀಮಂತರಾದ ಬಗ್ಗೆ ಕುವೆಂಪು ಹೀಗೆ ವರ್ಣಿಸುತ್ತಾರೆ.

'ದುರ್ಗದ ಪಾಳೆಗಾರರಲ್ಲಿ ದಂಡನಾಯಕರಾಗಿದ್ದವರ ವಂಶದವನು ಎಂಬ ಆ ಹಳೆಯ ನೆನಪಿಗೆ ಗೌರವಕ್ಕಾಗಿ ಅನೇಕರು (ಹೂವಳ್ಳಿ ವೆಂಕಟಪ್ಪನಾಯಕರಿಗೆ) ಸಾಲ ಕೊಟ್ಟದ್ದರು. ಇವತ್ತಲ್ಲಾ ನಾಳೆ ಅದನ್ನು ಬಡ್ಡಿಯೊಡನೆ ತೀರಿಸುತ್ತಾನೆ ಎಂಬ ಧೈರ್ಯದಿಂದ. ಆದರೆ ಕಲ್ಲೂರು ಸಾಹುಕಾರ ಮಂಜಭಟ್ಟರಂತಹ ಬುದ್ಧಿವಂತಹ ಬ್ರಾಹ್ಮಣರು ಜಮೀನನ್ನು ಲಪಟಾಯಿಸಿಕೊಳ್ಳುವುದಕ್ಕೆ ಒಂದು ನೆಪವಾದರೂ ಇರಲಿ ಎಂದೇ ಮಂದಬುದ್ಧಿಯ ಗೌಡರು, ನಾಯಕರು ಹೆಗ್ಗಡೆಗಳಿಗೆ ಸಾಲಕೊಡುತ್ತಿದ್ದರು. ಹಾಗಲ್ಲದಿದ್ದಲ್ಲಿ, ಕಲ್ಲೂರು ದೇವಸ್ಥಾನಕ್ಕೆ ಪೂಜಾರಿಯಾಗಿ ಕನ್ನಡ ಜಿಲ್ಲೆಯಿಂದ ಬಂದಾತನು ಕೆಲವು ವರ್ಷದಲ್ಲಿಯೆ ನಾಡಿನಲ್ಲೆಲ್ಲ ದೊಡ್ಡ ಜಮೀನುದಾರನೂ ಶ್ರೀಮಂತನೂ ಎಂದು ಹೆಸರು ಪಡೆಯಲು ಹೇಗೆ ಸಾಧ್ಯವಾಗುತ್ತಿತ್ತು? ತೊಟ್ಟ ಜನಿವಾರ, ಉಟ್ಟ ಪಾಣಿಪಂಚೆ, ಬಹುಶಃ ಕೈಲೊಂದು ಪಂಚಪಾತ್ರೆ ಇಷ್ಟೆ ಆಸ್ತಿಯಾಗಿ ಬಂದಿದ್ದ ಬಡ ಹಾರುವನು, ಈಗ ದೊಡ್ಡ ಚೌಕಿ ಮನೆಯ ಯಜಮಾನನಿಗೆ ದರ್ಬಾರು ನಡೆಸಲು ಹೇಗೆ ಸಾಧ್ಯವಾಗುತ್ತಿತ್ತು? ಗೌಡ ಹೆಗ್ಗಡೆ ನಾಯಕರುಗಳ ಮನೆ ಮನೆಗೆ ಅಲೆದು, ದೇಶಾವರ ನಡೆಸಿ, ಸಂಭಾವನೆ ಬೇಡಿ ಅಡಕೆ ಅಕ್ಕಿ ಕಾಯಿಪಲ್ಯಗಳನ್ನು ಒಟ್ಟು ಮಾಡಿ ಜೀವನಯಾಪನೆ ಮಾಡುತ್ತಿದ್ದವನು ಈಗ ಗೌಡ ಹೆಗ್ಗಡೆ ನಾಯಕರುಗಳನ್ನೆಲ್ಲ ತನ್ನ ಮನೆಯ ಅಂಗಳದ ಕೆಳಜಗಲಿಯಲ್ಲಿ ನಿಲ್ಲಿಸಿಯೋ ಆಜ್ಞೆ ಮಾಡಿ, ತಪ್ಪಿದರೆ ಶಿಕ್ಷೆ ವಿಧಿಸುತ್ತೇನೆ ಎಂದು ಗರ್ಜಿಸಲು ಹೇಗೆ ಸಾಧ್ಯವಾಗುತ್ತಿತ್ತು? ಮೊದ ಮೊದಲು 'ಏನು ವೆಂಕಟಪ್ಪನಾಯಕರೆ?' ಎಂದು ಸಂಬೋಧಿಸುತ್ತಿದ್ದವನು ಬರಬರುತ್ತಾ 'ಏನು ವೆಂಕಟಣ್ಣ?' ಎಂದು ಸಲಿಗೆಯಿಂದ ಕರೆಯುವಂತಾಗಿ ಈಗ 'ಏನು ಬಂದೆಯೊ, ಎಂಕ್ಟ?' ಎಂದು ಪ್ರಶ್ನಿಸಲು ಹೇಗೆ ಸಾಧ್ಯವಾಗುತ್ತಿತ್ತು?' (ಕುವೆಂಪು:2006ಬ:187)

ಮಂಜಭಟ್ಟರು ಪುರೋಹಿತರಾಗಿದ್ದರಿಂದ ಬೇರೆ ಜಾತಿಯವರಿಗಿಲ್ಲದ ಒಂದು ವಿಶೇಷ ಉಪಯೋಗ ಅವರಿಗಿತ್ತು.

''ದೇವರು ಅವರೊಡನೆ ಗೃಹಕೃತ್ಯದ ಸಮಸ್ಯೆಗಳ ವಿಚಾರವಾಗಿ ಒಮ್ಮೊಮ್ಮೆ ಸಂವಾದ ನಡೆಸುತ್ತಿದ್ದನೆಂದೂ ಜನರು ಹೇಳುತ್ತಿದ್ದರು! ವಿವಾದಗಳನ್ನು ಮಂಜಭಟ್ಟರ ಮುಖೇನ ಇತ್ಯರ್ಥಪಡೆಸುತ್ತಿದ್ದನಂತೆ! ಹಾಗೆ ಇತ್ಯರ್ಥವಾಗಿದ್ದ ಎಷ್ಟೊ ವಿವಾದಗಳು ಮಂಜಭಟ್ಟರಿಗೇ ಸಂಬಂಧಪಟ್ಟವುಗಳಾಗಿ ಇರುತ್ತಿದ್ದುದ್ದರಿಂದ ಅವರು ಬಹುಬೇಗನೆ ಪುಣ್ಯವಂತರಾಗಿದ್ದರು!'' (ಕುವೆಂಪು:2006ಬ:431)

ಹೀಗೆ ಜನರ ಮುಗ್ಧತೆಯನ್ನು ಶೋಷಿಸಿ ಪ್ರಭಾವಿಗಳಾಗಿದ್ದರು ಮಂಜಭಟ್ಟರಂಥ ಶ್ರೀಮಂತರು. ಇವರ ಬಳಿ ಜಮೀನು ಅಡ ಇಟ್ಟು ಸಾಲ ಪಡೆದ ಒಕ್ಕಲುಗಳಿಗೆ ಜಾಮೀನಾಗಲು ಯಾರೂ ಒಪ್ಪುತ್ತಿರಲಿಲ್ಲ.

ಮಂಜಭಟ್ಟರ ಸಾಲಕ್ಕೆ ರಂಗಪ್ಪಗೌಡರು ಜಾಮೀನು ನಿಂತು ತನ್ನ ನಂಬಿಕೆಯ ಕ್ರಯಪತ್ರವನ್ನು ಬಿಡಿಸಿಕೊಡಬೇಕೆಂದು ವೆಂಕಟಣ್ಣ ಕೇಳಿದಾಗ ಕೋಣೂರು ರಂಗಪ್ಪಗೌಡರು ಮತ್ತು ಮುಕುಂದಯ್ಯ ನಿರಾಕರಿಸಿದರು.

ಕುವೆಂಪು ಅವರ ಆತ್ಮಕಥೆಯಲ್ಲಿ ಹಿರಿಕೊಡುಗೆಯವರಿಗೆ ಜಾಮೀನಾಗಿದ್ದ ಕುಪ್ಪಳ್ಳಿ ಮನೆತನ 1931 ಸಮಯದಲ್ಲಿ ಪಟ್ಟ ಪಾಡು ಹೀಗೆ ದಾಖಲಾಗಿದೆ.

''...ನನ್ನ ತಾಯಿಯ ಅಣ್ಣ ಹಿರಿಕೊಡಿಗೆ ಸುಬ್ಬಯ್ಯನಾಯಕರು ಕಡಿದಾಳು ಸುಬ್ಬಯ್ಯಗೌಡರು ಎಂಬುವರ ಕೈಯಲ್ಲಿ ಸಾಲ ಮಾಡಿದ್ದರಂತೆ... ಆ ಸಾಲಕ್ಕೆ ಅವರ ಮೇಲೇ ದಾವಾಹಾಕಿ ಜಪ್ತಿಗೆ ಬಂದಾಗ ಅವರು ಕುಪ್ಪಳ್ಳಿ ರಾಮಣ್ಣಗೌಡ್ರ ಮೊರೆ ಹೊಕ್ಕರಂತೆ. ಕುಪ್ಪಳಿ ರಾಮಣ್ಣಗೌಡರು ತೀರಿ ಹೋದ ಮೇಲೆ ಹಿರಿಕೊಡಿಗೆಯ ಸುಬ್ಬಯ್ಯ ನಾಯಕರೂ ತೀರಿ ಹೋದರಂತೆ. ಇವರ ಮಧ್ಯೆ ಕುಪ್ಪಳಿಯ ಮನೆಯ ಕೆಲವು ಜಮೀನುಗಳನ್ನೆಲ್ಲ ದೇವಂಗಿ ಮಂಡಿಗೆ ಸಾಲಕ್ಕಾಗಿ ಬರೆದು ಕೊಟ್ಟ ಮೇಲೆ ಬಹುಶಃ ಕಡಿದಾಳು ಸುಬ್ಬಯ್ಯಗೌಡರಿಗೆ ತನ್ನ ಸಾಲ ಹಿರಿಕೊಡಿಗೆಯವರಿಂದ ಬರುವುದಿಲ್ಲ ಎಂದು ಗೊತ್ತಾಗಿ, ಕುಪ್ಪಳಿಯವರೂ ತಮ್ಮ ಜಮೀನುಗಳನ್ನೆಲ್ಲ ಬರೆದುಕೊಟ್ಟ ಮೇಲೆ ಜಾಮೀನಾಗಿದ್ದ ಅವರಿಂದಲೂ ತನಗೆ ಸಾಲದ ಹಣ ಬರುವುದಿಲ್ಲವೆಂದು ಹೆದರಿ ಜಾಮೀನು ನಿಂತವರ ಮೇಲೆ ದಾವಾ ಹಾಕಿ ಕುಪ್ಪಳಿ ಮನೆ ಜಪ್ತಿ ಆರ್ಡರ್ ತಂದಿರಬೇಕು'' (ಕುವೆಂಪು:2005ಬ:945)

ಅಡಕೆ ಬೆಳೆಗಾರರು ತಮಗೆ ಬೇಕಾದಾಗ, ಎಂದರೆ ಮನೆ ಸಂಸಾರದ ಖರ್ಚಿಗೂ ಹೊಸ ಜಮೀನು ಕೊಳ್ಳುವುದಕ್ಕೂ, ಮದುವೆ ಮುಂತಾದವುಗಳಿಗೆ ಲೇವಾದೇವಿಗಾರರಿಂದ ಸಾಲ ಪಡೆಯುತ್ತಿದ್ದರು. ಕೆಲವು ಸಂಸಾರಗಳಲ್ಲಿ ಮದುವೆ, ಹರಕೆ ಇತ್ಯಾದಿಗಳಿಂದ ಖರ್ಚು ಹೆಚ್ಚಾಗಿ ಬಡ್ಡಿ ಕಟ್ಟುವುದು ಸಾಧ್ಯವಾಗದೆ ತಂದ ಸಾಲ ಒಂದಕ್ಕೆ ನಾಲ್ಕರಷ್ಟಾಗಿ ಹೊಸದಾಗಿ ಕೊಂಡ ಜಮೀನು ಮತ್ತು ಹಿಂದಿದ್ದ ಜಮೀನು ಎಲ್ಲವೂ ಸಾಲಕೊಟ್ಟ ಲೇವಾದೇವಿಗಾರರ ಪಾಲಾಗುತ್ತಿತ್ತು. ಹೀಗಾಗಿ ಅನೇಕ ಲೇವಾದೇವಿಗಾರರು ಭೂಮಾಲಿಕರಾದರು. ಭೂಮಾಲಿಕರು ಇವರಿಗೆ ಗೇಣಿ ಒಕ್ಕಲಾಗಬೇಕಾದ ಸ್ಥಿತಿ ಒದಗಿತು.

ಪುರೋಹಿತಶಾಹಿಗಳು ತಮ್ಮ ಸಾಲ ವಸೂಲಿಗೆ ನಾನಾ ವಿಧದ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದರೆ, ಒಕ್ಕಲಿಗ ಜಮೀನ್ದಾರರು ಬೇರೆ ಮಾರ್ಗವನ್ನು ಕಂಡುಕೊಂಡಿದ್ದರು.

### 3.5.1. ಜಮೀನ್ದಾರರ ಸಾಲ ವಸೂಲಿ :

ಜಮೀನ್ದಾರರೂ ಸಾಮಾನ್ಯ ಪದ್ಧತಿಯಂತೆಯೆ ಸಾಲ ವಸೂಲಿ ಮಾಡುತ್ತಿದ್ದರೂ, ಕೆಲವು ವಿಶೇಷ ಸಂದರ್ಭಗಳಲ್ಲಿ ಕೊಟ್ಟ ಸಾಲ ಬೇರೆ ರೀತಿಯಲ್ಲಿ ಬಳಕೆಯಾಗುತ್ತಿತ್ತು. ಅಂದಿನ ಹೆಂಗಸರು ಹೆರಿಗೆ, ಬಾಣಂತನದಲ್ಲಿ ಸರಿಯಾದ ಚಿಕಿತ್ಸೆಯಿಲ್ಲದೆ ಬಹುಬೇಗ ಮರಣವನ್ನಪ್ಪುತ್ತಿದ್ದರು. ಆಗ ಜಮೀನ್ದಾರರು ಮರು ಮದುವೆಯಾಗುತ್ತಿದ್ದರು. ಹೀಗೆ ಒಕ್ಕಲಿಗ ಜಮೀನ್ದಾರರು ಮೂರು ನಾಲ್ಕು ಮದುವೆಗಳನ್ನು ಆಗುತ್ತಿದ್ದರು. ತಮ್ಮ ಒಬ್ಬ ಹೆಂಡತಿಯಿಂದ ಸಂತಾನ ಅಥವಾ ಗಂಡು ಸಂತಾನ ಪ್ರಾಪ್ತಿಯಾಗಲಿಲ್ಲ ವೆಂದರೂ ಮರು ಮದುವೆಯಾಗುತ್ತಿದ್ದರು. ಸಿಂಬಾವಿ ಭರಮೈ ಹೆಗ್ಗಡೆ ತನ್ನ ಮೊದಲ ಹೆಂಡತಿ

ಜಟ್ಟಮ್ಮನಿಂದ ಸಂತಾನ ಪ್ರಾಪ್ತಿಯಾಗಲಿಲ್ಲವೆಂದು ಹೂವಳ್ಳಿ ವೆಂಕಟಪ್ಪನ ಮಗಳು ಚಿನ್ನಮ್ಮನನ್ನು ತೆರ ಕೊಟ್ಟು ಮದುವೆಯಾಗಲು ಪ್ರಯತ್ನಿಸುತ್ತಿದ್ದನು.

ಈ ಸಂದರ್ಭದಲ್ಲಿ ಅವರು ತಾವು ಸಾಲ ಕೊಟ್ಟ ಒಕ್ಕಲಿನ ಹೆಣ್ಣುಮಗಳನ್ನು ವಿವಾಹವಾಗುತ್ತಿದ್ದರು. ಇದರಿಂದ 'ತೆರ'ದ ಹಣದಿಂದ ಒಕ್ಕಲಿನ ಸಾಲವೂ ತೀರುತ್ತಿತ್ತು, ಗೌಡರಿಗೆ ಒಬ್ಬ ಹೆಂಡತಿಯೂ ದೊರೆತಂತಾಗುತ್ತಿತ್ತು.

ಸ್ವಾತಂತ್ರ್ಯಪೂರ್ವ ಮಲೆನಾಡಿನ ಘಟನೆಗಳನ್ನು ದಾಖಲಿಸಿರುವ ಕಡಿದಾಳು ರಾಮಪ್ಪಗೌಡರು ಸಹ ಈ ವಿಷಯದ ಬಗ್ಗೆ ಬರೆಯುತ್ತಾರೆ.

ಕಾಸರ್ಕನಹಳ್ಳಿ ಕೇಶವಯ್ಯ ಗೌಡರ ತಂಗಿ ಅಂದರೆ ಕುಂಬ್ರಿಕೋಡು ನಾಗಪ್ಪಗೌಡರ ಹೆಂಡತಿ ತೀರಿ ಕೊಂಡಿದ್ದಳು. ಹಾಗಾಗಿ ಕುಂಬ್ರಿಕೋಡು ನಾಗಪ್ಪಗೌಡರಿಗೆ ಮರು ಮದುವೆ ಮಾಡುವ ವಿಚಾರ ಮಾಡಿ ದರು. ಇದಕ್ಕಾಗಿ ತಮ್ಮ ಒಕ್ಕಲಾಗಿದ್ದ ಲಿಂಗಣ್ಣಗೌಡರ ಮಗಳನ್ನು ಕೊಡಲು ಕೇಳಿದರು. ಆಗ ಲಿಂಗಣ್ಣಗೌಡ ಮದುವೆಯಾಗುವ ಅರವತ್ತು ವರ್ಷದ ನಾಗಪ್ಪಗೌಡರಿಗೆ 'ಒಂದು ಸಾವಿರ ರೂಪಾಯಿ ತೆರ, ಐದು ನೂರು ಕಡಾಚ, ನಾಕು ಕಂಡಗ ಬತ್ತ ಎಲ್ಡು ಬೆಲ್ಲದ ಡಬ್ಬಿ ಕೇಳಿ 18 ವರ್ಷದ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿದರು. (ರಾಮಪ್ಪಗೌಡ, ಕೆ.ಎಸ್:1995:14)

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹೂವಳ್ಳಿ ವೆಂಕಟಪ್ಪ ಮಂಜಭಟ್ಟರಲ್ಲಿ ಸಾಲ ಮಾಡಿದ್ದರು. ಮಂಜಪ್ಪ ಭಟ್ಟರ ಸಾಲ ತೀರಿಸದೆ ಇರಲು ಕಿಟ್ಟ ಐತಾಳ್ ಜನರನ್ನು ಕರೆದುಕೊಂಡು ಬಂದು ಹೂವಳ್ಳಿ ಜಮೀನನ್ನು ಉಳಲು ಶುರುಮಾಡಿದ. ಜಾಮೀನಾಗಲು ಯಾರೂ ಒಪ್ಪಲಿಲ್ಲ. ಈ ಸಾಲಕ್ಕೆ ಸಿಂಬಾವಿ ಭರಮೈ ಹೆಗ್ಗಡೆಯವರು ಜಾಮೀನಾಗಿ ನಿಲ್ಲಲು ಒಪ್ಪಿಕೊಂಡಿದ್ದರು. ಆಗ ವೆಂಕಟಪ್ಪ ಯೋಚಿಸಿ, ಸಿಂಬಾವಿ ಭರಮೈ ಹೆಗ್ಗಡೆಯಿಂದ ಭಾರಿ ಮೊತ್ತದ 'ತೆರ'ದ ಹಣ ಪಡೆದು ಮಂಜಭಟ್ಟರ ಸಾಲದಿಂದ ಮುಕ್ತನಾಗಲು ಯೋಚಿಸಿ, ಚಿನ್ನಮ್ಮನ ಮದುವೆಯನ್ನು ಭರಮೈ ಹೆಗ್ಗಡೆ ಯೊಡನೆ ಮಾಡಲು ತಯಾರಿ ಮಾಡುವನು.

'ಕಾನೂರು ಹೆಗ್ಗಡತಿ'ಯಲ್ಲಿ ಕಾನೂರು ಚಂದ್ರಯ್ಯಗೌಡರಿಗೆ ಸಾವಿರಾರು ರೂಪಾಯಿಗಳ ಸಾಲವನ್ನು ಮುತ್ತಳ್ಳಿ ಶ್ಯಾಮಯ್ಯಗೌಡರು ಕೊಟ್ಟಿದ್ದರು. ಅದನ್ನು ಪಡೆಯುವುದಕ್ಕಾಗಿ ಕೋರ್ಟುಮನೆ ಹತ್ತುವುದು ಅಲೆಯುವುದು ಶ್ಯಾಮಯ್ಯನವರಿಗೆ ಇಷ್ಟವಾಗುತ್ತಿರಲಿಲ್ಲ. ಚಂದ್ರಯ್ಯ ಗೌಡರಿಗೆ ಹಿತವಾಗಿದ್ದುಕೊಂಡೆ ತಮ್ಮ ಸಾಲ ಹಿಂದಕ್ಕೆ ಪಡೆಯಬೇಕೆಂಬುದು ಅವರ ಯೋಚನೆಯಾಗಿತ್ತು. ಹಾಗಾಗಿ ಕಾನೂರಿನ ರಾಮಯ್ಯನಿಗೆ ತನ್ನ ಮಗಳು ಸೀತೆಯನ್ನು ಮದುವೆ ಮಾಡಿಕೊಡಲು ಒಪ್ಪಿದನು.

ಅಂದರೆ ಸಾಲದ ಹಣದ ಬದಲು ಮಗಳನ್ನು ಸಾಲ ಪಡೆದ ಜಮೀನ್ದಾರನೊಂದಿಗೆ ಮದುವೆ ಮಾಡುತ್ತಿದ್ದರು. ಹೆಣ್ಣನ್ನು ಸಾಲ ವ್ಯವಹಾರದ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರು! ವರ ತನ್ನ

ತಂದೆಯ ಅಥವಾ ಅಜ್ಜನ ವಯಸ್ಸಿನವನಾದರೂ ಸಾಲವಂದಿಗರ ಹೆಣ್ಣು ಮಕ್ಕಳು ಈ ಮದುವೆಗೆ ಒಪ್ಪಲೇ ಬೇಕಿತ್ತು. ವಿದುರ ಭೂಮಾಲಿಕನ ಮರುಮದುವೆಗೆ ಸಾಲ ಒಂದು ನೆಪವಾದಂತೆ ಕೆಲವೊಮ್ಮೆ ತೋರುತ್ತದೆ.

### 3.6 ಸಾಲಕ್ಕೆ ಕಾರಣಗಳು :

ಮಲೆನಾಡಿನಲ್ಲಿ ಅನುತ್ಪಾದಕ ಕಾರಣಗಳಿಗೆ ಜನರು ಸಾಲವಂದಿಗರಾಗುತ್ತಿದ್ದುದನ್ನು ಕಾದಂಬರಿಗಳ ಮೂಲಕ ಕಾಣಬಹುದು. ಮಲೆನಾಡಿಗರು ಸಾಲ ಮಾಡಲು ಕೆಲವು ಮುಖ್ಯ ಕಾರಣಗಳನ್ನು ಗುರುತಿಸ ಬಹುದು.

1. ಮದುವೆಯ ತೆರ
2. ಕಳ್ಳು
3. ಮೂಢನಂಬಿಕೆ

ಇಂಥ ಸಾಲಗಳಿಂದ ಅಧೋಗತಿಗಿಳಿದ ಕುಟುಂಬಗಳು ಭೂಮಾಲಿಕರ ಒಕ್ಕಲುಗಳೋ ಅಥವಾ ಜೀತದಾಳುಗಳೋ ಆಗಿ ಬದುಕು ಸಾಗಿಸಬೇಕಿತ್ತು.

### 3.6.1 ಹೆಣ್ಣಿಗೆ ತೆರ :

ಮಲೆನಾಡಿನಲ್ಲಿ ಒಂದು ಪದ್ಧತಿ ಇತ್ತು. ಮದುವೆಯಾಗುವ ಗಂಡು ಮದುವೆಯಾಗುವ ಹೆಣ್ಣಿನ ತಂದೆ ತಾಯಿಗೆ ತೆರ ಕೊಟ್ಟು ಅನಂತರ ಅವರ ಮಗಳನ್ನು ಮದುವೆಯಾಗಬೇಕಿತ್ತು.

ಅಂದಿನ ಕಾಲದಲ್ಲಿ ಮಲೆನಾಡಿನಲ್ಲಿ ಮಲೇರಿಯಾ ರೋಗಕ್ಕೆ ತುತ್ತಾಗಿ ಅನೇಕ ಹೆಣ್ಣು ಮಕ್ಕಳು ಮರಣವನ್ನಪ್ಪುತ್ತಿದ್ದರು. ಅಲ್ಲದೆ ಹೆರಿಗೆ ಸಮಯದಲ್ಲಿ ಸೂಕ್ತ ಚಿಕಿತ್ಸೆ ಮೇಲ್ವಿಚಾರಣೆ ಇಲ್ಲದೆ ಮಹಿಳೆಯರು ಸಾವನ್ನಪ್ಪುತ್ತಿದ್ದರು. ಆ ಕಾರಣಕ್ಕಾಗಿ ಒಬ್ಬ ಗಂಡಸು ಮೂರು ನಾಲ್ಕು ಮದುವೆ ಮಾಡಿಕೊಳ್ಳುತ್ತಿದ್ದನು. ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಕಡಿಮೆ ಇದ್ದುದರಿಂದ ಹೆಚ್ಚು ತೆರ ಕೊಡುವವನು ಮದುವೆಯಾಗಬಹುದಿತ್ತು.

ತೆರೆ ಅಂದರೆ ಇಂದಿನ ವರದಕ್ಷಿಣೆಯಂತೆ ಹೆಣ್ಣಿಗೆ ಕೊಡುವ ವಧುದಕ್ಷಿಣೆ. (ಮದುವೆಯಾಗುವ ಗಂಡನ ಮೊದಲ ಹೆಂಡತಿ ಅಥವಾ ಹೆಂಡತಿಯರು ತೀರಿಕೊಂಡಿದ್ದರೆ ತೆರದ ಮೊತ್ತ ಹೆಚ್ಚಾಗುತ್ತಿತ್ತು. ಕೈ ತುಂಬ ತೆರ ಕೊಟ್ಟರೆ ಹೆಣ್ಣನ್ನು ಮದುವೆ ಮಾಡಿಕೊಡುತ್ತಿದ್ದರು.) ಮದುವೆಯಾಗುವ ಗಂಡು ಹುಡುಗಿಯ ತಂದೆಯ ಅಥವಾ ಅಜ್ಜನ ವಯಸ್ಸಿನವನಿದ್ದರೂ ತೆರದ ಮೊತ್ತದ ಎದುರು ಅವೆಲ್ಲ ಗೌಣ ವಾಗುತ್ತಿತ್ತು. ಹೆಣ್ಣಿಗೆ ತನ್ನ ಇಚ್ಛೆ ವ್ಯಕ್ತಪಡಿಸಲು ಸ್ವಾತಂತ್ರ್ಯವಿರಲಿಲ್ಲ. ಅಲ್ಲದೆ ದುಡಿಯುವ 'ಹೆಣ್ಣಾಳು' ಹೋಗುವುದರಿಂದ ಆಗುವ ಆರ್ಥಿಕ ಹಾನಿಯನ್ನು ತುಂಬಿಕೊಡುವ ಪರಿಹಾರ ನಿಧಿಯಂತೆ 'ತೆರ ಪದ್ದತಿ' ಇತ್ತೆಂದು ತೋರುತ್ತದೆ. ಇದು ಜೀತದಾಳುಗಳ ಮದುವೆ ವಿಷಯದಲ್ಲಿ ಸ್ಪಷ್ಟವಾಗುತ್ತದೆ.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಕಾನೂರು ಚಂದ್ರಯ್ಯಗೌಡನ ಒಕ್ಕಲು ಅಣ್ಣಯ್ಯಗೌಡರು. 'ಒಕ್ಕಲತನದಲ್ಲಿ ಮೊದಲು ನೆಮ್ಮದಿಯಾಗಿದ್ದವರು ಹೆಣ್ಣುಗಳಿಗಾಗಿ ತೆರವನ್ನು ತೆತ್ತೂ ತೆತ್ತೂ... ದರಿದ್ರಾವಸ್ಥೆಗೆ ಇಳಿದಿದ್ದರು. ಅವರ ಗ್ರಹಚಾರಕ್ಕೆ ತಕ್ಕಂತೆ ಮೂವರು ಹೆಂಡರೂ ಸತ್ತು ನಾಲ್ಕನೇ ಹೆಂಡತಿಯೂ ರೋಗದಿಂದ ನರಳುತ್ತಿದ್ದಳು'. (ಕುವೆಂಪು:2006ಅ:63)

ಅವರಿಗೆ ಇಬ್ಬರು ಮಕ್ಕಳು-ದ್ವಿತೀಯ ಪತ್ನಿಯಲ್ಲಿ ಹುಟ್ಟಿದ್ದ ಓಬಯ್ಯನೆಂಬ ಇಪ್ಪತ್ತೈದು ವರ್ಷದ ಮಗ ಮತ್ತು ತೃತೀಯ ಪತ್ನಿಯಲ್ಲಿ ಹುಟ್ಟಿದ ಏಳೆಂಟು ವರುಷದ ಹುಡುಗಿ ಇದ್ದರು. ಓಬಯ್ಯನ ಬಳಿ ಮದುವೆಯಾಗುವ ಹೆಣ್ಣಿಗೆ ತೆರ ಕೊಡಲು ಹಣವಿರಲಿಲ್ಲ. ಆದ್ದರಿಂದ, ಅವನಿಗೆ ಇನ್ನೂ ಮದುವೆಯಾಗಿ ರಲಿಲ್ಲ. ಅಲ್ಲದೆ ಓಬಯ್ಯನದು ಮೊದಲ ಮದುವೆಯಾದ್ದರಿಂದ ಅವನಿಗೆ ಕಡಿಮೆ ತೆರಕ್ಕೆ ಹೆಣ್ಣು ದೊರೆಯುತ್ತಿತ್ತು! ಕಾದಂಬರಿಯಲ್ಲಿ ಅವನು ಅವಿವಾಹಿತನಾಗಿಯೇ ಉಳಿಯುವನು. ಅಣ್ಣಯ್ಯಗೌಡರು ಈಗಾಗಲೇ ತಮ್ಮ ನಾಲ್ಕು ಮದುವೆಗಳಿಗೆ ತೆರದ ಹಣ ಕೊಡಲು ಕಾನೂರು ಚಂದ್ರಯ್ಯಗೌಡರ ಬಳಿ ಸಾಕಷ್ಟು ಸಾಲ ಮಾಡಿ, 'ಬಡ್ಡಿ ಕೂಡಿ ಸಾವಿರದ ಇನ್ನೂರು ಮುಕ್ಕಾಲು ಮೂರು ವೀಸ ಬೇಲೆ ಆರು ಪೈ' ಬಾಕಿ ಇತ್ತು.

ತೆರದ ಹಣ ಕೊಡುವುದಲ್ಲದೇ ಬತ್ತ ಬೆಲ್ಲದ ಡಬ್ಬಿ ಇವನ್ನೂ ಕೂಡ ವಧುವಿನ ತಾಯಿ ತಂದೆಗೆ ಕೊಡಬೇಕಿತ್ತು.

ಹಾಲಪ್ಪ ತಮ್ಮ ಮದುವೆಗೆ ಆಲೆಮನೆ ಶಿದ್ದಪ್ಪನಾಯಕರ ತಂದೆಯ ಬಳಿ 'ತೆರ'ದ ಹಣ ಕೊಡಲು ಆರೂನೂರು ರೂಪಾಯಿ ಸಾಲ ಮಾಡಿದ್ದಲ್ಲದೆ ಒಡೆಯರಿಂದ ಐವತ್ತು ಸೇರು ಅಕ್ಕಿ ಪಡೆದು ಹೆಣ್ಣಿನ ಕಡೆಯವರಿಗೆ ಕೊಟ್ಟಿದ್ದರು ಎಂದು ಸ್ಮರಿಸುತ್ತಾರೆ. ಅಲ್ಲದೆ ಒಡೆಯರಿಂದ ವಧುವಿಗೆ ಒಂದು ತಾಳಿ, ನಾಲ್ಕು ಗುಂಡು ಪಡೆದುಕೊಂಡಿದ್ದರು. ಇದೂ ಸಹ ಮದುವೆ ಸಾಲದ (ಅನುಬಂಧ-ಹಾಲಪ್ಪ) ಲೆಕ್ಕದಲ್ಲಿರುತ್ತಿತ್ತು.

ಹೀಗೆ 'ತೆರ' ಕೊಟ್ಟರೇ ಮಾತ್ರ ಮದುವೆ ಮಾಡುವ ಸಂಪ್ರದಾಯ ಅಂದಿನ ಒಕ್ಕಲುಗಳು ಹಾಗು ಆಳುಗಳಲ್ಲಿ ಇತ್ತು. 'ತೆರ'ದ ಹಣ ಕೊಡಲಾಗದ ಓಬಯ್ಯ ಅವಿವಾಹಿತನಾಗಿಯೇ ಉಳಿಯುವನು. ಓಬಯ್ಯನ ತಂದೆ ಈಗಾಗಲೇ ಹೆಣ್ಣುಗಳಿಗೆ ತೆರವನ್ನು ಸಾಕಷ್ಟು ಕೊಟ್ಟಿದ್ದರಿಂದ ಅವರು ಸಾಲುಗಾರರಾಗಿ ದ್ದರು. ಎಷ್ಟೆಂದರೆ ಆ ಸಾಲವನ್ನು ತೀರಿಸಲಾಗದೇ ರಾತ್ರೋರಾತ್ರಿ ಕೆಳಕಾನೂರಿನಿಂದ ಓಡಿ ಹೋಗು ವಷ್ಟು.

ಹೀಗೆ ಸಾಸುಕಾರರು, ಜಮೀನ್ದಾರರು ಮದುವೆಯ 'ತೆರ'ಕ್ಕೆ ಸಾಲ ಕೊಟ್ಟು ನಿಮ್ನ ಜಾತಿಯ ಜನರನ್ನು ಸಾಲವಂದಿಗರನ್ನಾಗಿ ಮಾಡಿ ಜೀತಾಳುಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. ಸಾಮಾಜಿಕ ರೀತಿ ರಿವಾಜು ಅವರನ್ನು ಆರ್ಥಿಕವಾಗಿ ದುರ್ಬಲರನ್ನಾಗಿ ಮಾಡಿ ಅವರ ಸ್ವಾತಂತ್ರ್ಯಹರಣ ಮಾಡುತ್ತಿತ್ತು. ಜೀವನ ಪರ್ಯಂತ ಮತ್ತು ವಂಶಪಾರಂಪರ್ಯವಾಗಿ ದಾಸ್ಯಕ್ಕೆ ನೂಕುತ್ತಿತ್ತು.

### 3.6.2 ಕಳ್ಳು :

ಮಲೆನಾಡಿಗರಲ್ಲಿ ಕಳ್ಳು ಕುಡಿಯುವ ಅಭ್ಯಾಸ ಸಾಮಾನ್ಯವಾಗಿ ಎಲ್ಲರಿಗಿತ್ತು. ಒಕ್ಕಲುಗಳು ಜೀತದಾಳು ಗಳು ಹಾಗು ಗಟ್ಟುದಾಳುಗಳು ಕಳ್ಳಂಗಡಿಯಲ್ಲಿ ಸಾಲ ಮಾಡಿ ಕಳ್ಳು ಕುಡಿಯುತ್ತಿದ್ದರು.

ಹಾಲಪ್ಪ ನೆನಪಿಸಿಕೊಳ್ಳುವಂತೆ ಒಂದು ಮೊಗೆ ಕಳ್ಳಿನ ಬೆಲೆ ನಾಕಾಣೆ ಇತ್ತು. ಅವರ ಸಂಬಳ ಒಂದು ರೂಪಾಯಿ. ಜನರು ಕೇವಲ ಒಂದೇ ಮೊಗೆ ಕುಡಿಯುತ್ತಿರಲಿಲ್ಲ. ಚೆನ್ನಾಗಿ ಮತ್ತೇರುವವರೆಗೂ ಕುಡಿಯುತ್ತಿದ್ದರು. (ಅನುಬಂಧ-ಹಾಲಪ್ಪ) ಅವರ ಸಂಬಳ ಕಳ್ಳು ಕುಡಿಯಲು ಸಾಲುತ್ತಿರಲಿಲ್ಲ. ಹಾಗಾಗಿ ಕಳ್ಳಂಗಡಿಯಲ್ಲಿ ಅವರ ಸಾಲ ಬೆಳೆಯುತ್ತಿತ್ತು.

ಕೆಲಸದ ಜನರು ಹಣ ಕೊಟ್ಟು ತಾವು ಕುಡಿಯುವ ಕಳ್ಳಿನ ಸಾಲ ತೀರಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಕೋಳಿ, ಕುರಿ, ಕೃಷಿ ಸಲಕರಣೆಗಳು, ಬಾಳೆಗೊನೆ, ತರಕಾರಿ, ಹಲಸಿನ ಹಣ್ಣು ಮುಂತಾದ ಕೈಗೆಟಕುವ ಸಾಮಾನುಗಳನ್ನು ಕೊಟ್ಟು ತಮ್ಮ ಲೆಕ್ಕ ಚುಕ್ತ ಮಾಡಿಕೊಳ್ಳುತ್ತಿದ್ದರು.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಕಳ್ಳಂಗಡಿಗೆ ಬಾಡುಗಳ್ಳ ಸೋಮ, ಬೇಲರ ಬೈರ, ಅವನ ಹೆಂಡತಿ ಸೇಸಿ, ಅವರ ಮಗ ಗಂಗ ಹುಡುಗ, ಬೇಲರ ಸಿದ್ಧ, ಗಾಡಿ ಹೊಡೆಯುವ ನಿಂಗ, ಸೇರೆಗಾರ ರಂಗಪ್ಪಸೆಟ್ಟರ ಕಡೆಯ ಗಟ್ಟದಾಳುಗಳು ಸಾಲಗಾರರಾಗಿದ್ದರು.

ಬಾಡುಗಳ್ಳ ಸೋಮ, ತಿಮ್ಮನ ಕೋಳಿ ಕದ್ದು ಕಳ್ಳಂಗಡಿಯ ಚಿಕ್ಕಣ್ಣನಿಗೆ ಕೊಟ್ಟನು. ಬೈರ ತಾನು ಬಗನಿ ಕಟ್ಟಿ ಕಳ್ಳು ಮಾರಿ ಸಾಲತೀರಿಸುವುದಾಗಿ ಮಾತುಕೊಟ್ಟನು. ಅವನ ಹೆಂಡತಿ ಸೇಸಿ ಒಂದೆರಡು ಹೇಂಟೆಗಳ ಮರಿಗಳನ್ನು ದೊಡ್ಡದು ಮಾಡಿ ಕೊಡುವುದಾಗಿ ಹೇಳಿದಳು. ಗಂಗ ಹುಡುಗ ಗಾಡಿ ನಿಂಗನು ಹೂತಿಟ್ಟಿದ್ದ ತನ್ನ ಪಾಲಿನ ಕೃಷಿ ಸಾಲಕರಣೆಗಳಾದ ಕೆಲಸದ ಕತ್ತಿ, ಹಿತ್ತಾಳೆ ಚೊಂಬು, ಹಾರೆ, ಗುದ್ದಲಿ ನೇಗಿಲ ಕುಳಗಳನ್ನು ಕೊಟ್ಟು ಸಾಲ ತೀರಿಸುತ್ತಾನೆ. ಓಬಯ್ಯ ತನ್ನ ತಂಗಿಯ ಕೈಯ ಬೆಳ್ಳಿ ಕಡಗವನ್ನು ಕೊಡುತ್ತಾನೆ.

### 3.6.3 ಮೂಢನಂಬಿಕೆ :

'ದೈಯದ ಹರಕೆ' ಎಂಬುದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದ ಮಲೆನಾಡಿನ ಆಚರಣೆಯಾಗಿತ್ತು. ಒಕ್ಕಲುಗಳು ತಮ್ಮ ಜಮೀನಿನಲ್ಲಿ ಜಕ್ಕಿಣಿ, ಭೂತ ಮುಂತಾದವು ನೆಲಸಿ, ಕಳ್ಳತನವಾಗದಂತೆ ಜಮೀನನ್ನು ಕಾಪಾಡುತ್ತವೆ ಎಂದು ನಂಬಿದ್ದರು. ಜನರಿಗೆ ದೆವ್ವ ಭೂತ ದೇವತೆಗಳೆಂಬ ಅಪ್ರಾಪಂಚಿಕವಾದ ಪೋಲೀಸಿನಲ್ಲಿ ಅತಿ ಭೀತಿ ಇತ್ತು ಎಂದು ಕುವೆಂಪು ಹೇಳುತ್ತಾರೆ. ಹೀಗಾಗಿ ವರ್ಷದಲ್ಲಿ ಒಮ್ಮೆ ದೈಯದ ಹರಕೆ ಮಾಡುತ್ತಿದ್ದರು. ಇದಕ್ಕಾಗಿ ಕುರಿ ಕೋಳಿಗಳನ್ನು ತಂದು, ಬಲಿ ಕೊಟ್ಟು, ನೆರೆದ ನೆಂಟರಿಷ್ಟರಿಗೂ ಊಟ ಹಾಕಿಸುತ್ತಿದ್ದರು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೂವಳ್ಳಿ ವೆಂಕಟಪ್ಪ ಹಳೆಮನೆ ಸುಬ್ಬಣ್ಣ ಹೆಗ್ಗಡೆಯುವರಿಂದ ಒಂದು ಹಂದಿಯನ್ನು ಸಾಲವಾಗಿ ತೆಗೆದುಕೊಂಡು ಬರುತ್ತಾನೆ. ದೆಯ್ಯದ ಹರಕೆಗೆ ಬರುವ ನೆಂಟತಿಯರಿಗೆ ಉಡುಗೊರೆಯಾಗಿ ಕೊಡಲು ಸೀರೆಗಳನ್ನು ಸಹ ತಂದಿರುತ್ತಾನೆ.

ದಯ್ಯದ ಹರಕೆಯ ಗಲಾಟೆ ಸಂಭ್ರಮ ಕಾನೂರು ಹೆಗ್ಗಡಿತಿಯಲ್ಲೂ ವರ್ಣಿಸಲ್ಪಟ್ಟಿದೆ. ಕಾನೂರು ಮನೆಯಲ್ಲಿ 'ದೆಯ್ಯದ ಹರಕೆ'ಯಲ್ಲಿ ನೆಂಟರಿಷ್ಟರು, ಒಕ್ಕಲು, ಕನ್ನಡ ಜಿಲ್ಲೆಯ ಘಟ್ಟದ ಆಳುಗಳು ಎಲ್ಲರೂ ಭಾಗಿಗಳಾಗುತ್ತಿದ್ದರು. ಎಲ್ಲರೂ ಸೇರಿಕೊಂಡು ಹರಕೆಯ ಅನೇಕ ಕಾರ್ಯಗಳನ್ನು ವಹಿಸಿಕೊಂಡು ಮಾಡುತ್ತಿದ್ದರು. ಕೆಲವು ಕುರಿಗಳು, ಅನೇಕ ಕುಕ್ಕುಟಗಳೂ ಆ ದಿನ ಭೂತ, ರಣ, ಬೇಟೆರಣ ಚಡಿ, ಪಂಜ್ರೊಳ್ಳಿ ಮುಂತಾದ 'ದೆಯ್ಯ ದ್ಯಾವರು'ಗಳಿಗೆ ಬಲಿಯಾಗುತ್ತಿದ್ದವು.

ನಿಂಗ ಹೂತಿಟ್ಟ ಕೃಷಿ ಸಲಕರಣೆಗಳನ್ನು ಕದ್ದ ಗಂಗ ಹುಡುಗ, ನಿಂಗನ ತೆಂಗಿನಕಾಯಿ ಮುಟ್ಟಿ ರಕ್ತಕಾರಿ ಸಾವನಪ್ಪಿದನು. ಇದರಿಂದ ಆ ಜನರಿಗೆ ದೆಯ್ಯದ ಬಗ್ಗೆ ಇದ್ದ ಭಯ ಎಷ್ಟು ಪ್ರಬಲವಾಗಿತ್ತು ಎಂದು ತಿಳಿಯುತ್ತದೆ. ಜನರ ಸುಪ್ತ ಮನಸ್ಸನ್ನು ಸಹ ದೇವ ದೆಯ್ಯದ ಭಯ ಆವರಿಸಿತ್ತು. ಹಾಗಾಗಿ ಯಾರೂ ದಯ್ಯದ ಹರಕೆ ಮಾಡದೆ ಇರುತ್ತಿರಲಿಲ್ಲ. ಸಾಲ ಮಾಡಿ ಯಾದರೂ ಸರಿ ದಯ್ಯಗಳಿಗೆ ಹರಕೆ ಕೊಡಲೇಬೇಕಿತ್ತು.

ಅಲ್ಲದೇ ಮಲೆನಾಡಿನ ಜನರು ಆರೋಗ್ಯ ಕೆಟ್ಟರೆ ಚಿಕಿತ್ಸೆ ಮಾಡಿಸದೆ ಅಂತ್ರ, ತಾಯಿತ ಕಟ್ಟಿಸುವುದು, ನಿಮಿತ್ತ ಕೇಳುವುದು, ಚೀಟು ವಿಭೂತಿ ಹಾಕಿಸುವುದು ಮುಂತಾದವುಗಳನ್ನು ಹಣ ತೆತ್ತು ಮಾಡಿಸುತ್ತಿದ್ದರು.

ಆಚರಣೆಗಳಿಗೆ ಮಾಡುವ ಹಣದ ವ್ಯಯವನ್ನು ಕುವೆಂಪು ಅವರು 'ಶೂನ್ಯ ಖಾತೆಯ ಖರ್ಚು' ಎಂದು ಕರೆಯುತ್ತಾರೆ. ಭೂತ ಪಿಶಾಚಿಗಳ ಆರಾಧನೆಗೆ ಸಾಕಷ್ಟು ಖರ್ಚಾಗುವುದು. ದುಡ್ಡಿರುವವರಿಗೆ ಇದು ಮಹಾಭೋಗದ ವಿಷಯ. ಆದರೆ ಅದನ್ನು ಅನುಸರಿಸುವ ಬಡವರು ಮನೆಯ ದುರವಸ್ಥೆಯನ್ನು ಗಣನೆಗೆ ತಾರದೆ ಸಾಲ ಮಾಡಿ 'ಸುಳ್ಳು ಭಯದಿಂದ ಪ್ರೇರಿತರಾಗಿ ವರ್ಷ ವರ್ಷವೂ ಮರಗಳ ಬುಡದಲ್ಲಿರುವ ಕಲ್ಲುಗಳಿಗೆ ಕುರಿ ಕೋಳಿಗಳನ್ನು ಬಲಿ ಇತ್ತು ಸರ್ವನಾಶಾಗುತ್ತಿದ್ದಾರೆ' ಎಂದು ಕುವೆಂಪುನೊಂದು ನುಡಿದಿದ್ದಾರೆ. **(ಕುವೆಂಪು :1998:18)**

ಹೀಗೆ ಮತದ ಹೆಸರಿನಲ್ಲಿ, ದೆವ್ವ ಪಿಶಾಚಿ ಗ್ರಹಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹೆಚ್ಚು ಅವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರವಾಗಿರುವ ಜೀವನ ಪಥಗಳಲ್ಲಿ ವಿನಿಯೋಗಿಸಬೇಕೆಂದು ಕುವೆಂಪು ಮಲೆನಾಡಿಗರಲ್ಲಿ ಹೇಳುತ್ತಾರೆ.

ಅಲ್ಲದೆ ಒಡವೆಗಳನ್ನು ಮಾಡಿಸಲು ಜನ ಸಾಲ ಮಾಡುತ್ತಿದ್ದರು. ಮೊದಲೇ ಸಾಲವಂದಿಗನಾದ ಹೂವಳ್ಳಿ ವೆಂಕಟಪ್ಪ ಅದನ್ನು ಪರಿಗಣಿಸದೇ ತನ್ನ ಮಗಳು ಚಿನ್ನಮ್ಮ ಹಾಗು ನಾಗಕ್ಕನಿಗೆ ಸಾಕಷ್ಟು ಒಡವೆಗಳನ್ನು ಮಾಡಿಸಿರುತ್ತಾನೆ. ಕಾನೂರಿನಲ್ಲೂ ಹೂವಯ್ಯನ ತಾಯಿ ನಾಗಮ್ಮ ಚಂದ್ರಯ್ಯಗೌಡರು ತಮ್ಮ

ಹೊಸ ಹೆಂಡಿತಿಗೆ ಜರತಾರಿ ಸೀರೆ, ಉಂಗುರ, ಅಡ್ಡಿಗೆ, ಡಾಬು, ಕಾಸಿನಸರ, ಕಟ್ಟಾಣಿ ಹೊಂಬಳೆ ಇವನ್ನು ಮಾಡಿಸಿ ಸಾಲ ಆಗಿದೆ ಎಂದು ಹೇಳುವರು.

ಹೀಗೆ ಅನೇಕ ಕಾರಣಗಳಿಂದ ಒಕ್ಕಲುಗಳು ಆಳುಗಳು ಸಾಲಗಾರರಾಗುತ್ತಿದ್ದರು. ಅಲ್ಲದೆ ಶ್ರೀಮಂತ ಜಮೀನ್ದಾರರೇ ಸಾಲ ಮಾಡಿ ಅದನ್ನು ತೀರಿಸಲು ತಮ್ಮ ಜಮೀನನ್ನು ಮಾರುತ್ತಿದ್ದರು. ಹೊರಗಿನ ಪ್ರಪಂಚದಿಂದ ದೂರವಿದ್ದ ಮಲೆನಾಡು ಯಾವ ಬಡ್ಡಿದರ ನಿಯಂತ್ರಣದ ಕಾಯಿದೆಗೆ ಒಳಗಾಗಲಿಲ್ಲ. ಹೀಗಾಗಿ ಲೇವಾದೇವಿಗಾರರು ಹೆಚ್ಚಿನ ಬಡ್ಡಿಗೆ ಸಾಲ ಕೊಟ್ಟು ಸಾಲವಂದಿಗರನ್ನು ಶೋಷಿಸುತ್ತಿದ್ದರು. ಇದರಿಂದಾಗಿ ಆರ್ಥಿಕ ಅಸಮಾನತೆಯ ಕಂದರ ಹೆಚ್ಚುತ್ತಲಿತ್ತು.

❒

## ಅಧ್ಯಾಯ : ೪

# ಜೀತದಾಳು

ಅಧ್ಯಾಯ : ೪

# ಜೀತದಾಳು

## 4.1. ಪೀಠಿಕೆ :

ಜೀತಪದ್ಧತಿ ಎಲ್ಲಾ ನಾಗರಿಕತೆಗಳ ಸಾಮಾಜಿಕ ಮತ್ತು ಆರ್ಥಿಕತೆಯ ಅಂಗವಾಗಿದೆ. ಭಾರತದಲ್ಲಿ ಪರಂಪರೆ, ಧರ್ಮ, ಸಂಪ್ರದಾಯಗಳಿಂದ ಅನುಮೋದಿತವಾಗಿ ಅನಾದಿಕಾಲದಿಂದಲೂ ಅಸ್ತಿತ್ವದಲ್ಲಿದೆ.

ಜೀತಪದ್ಧತಿಯ ಮೂಲವನ್ನು ಶ್ರೇಣೀಕೃತ ಜಾತಿಪದ್ಧತಿಯಲ್ಲಿ ಕಾಣಬಹುದು. ನಾಲ್ಕು ಜಾತಿಗಳಿಗೆ ಸೇರದ ಮತ್ತೊಂದು ನಿಮ್ನ ವರ್ಗವೊಂದಿತ್ತು. ಮೇಲ್ಜಾತಿಯ ಜನರಾರೂ ಮಾಡಲು ಒಪ್ಪದ ಇತರೇ ತುಚ್ಛ ಕೆಲಸಗಳನ್ನು ಇವರು ಮಾಡಬೇಕಿತ್ತು. ಉಚ್ಛ ಜಾತಿಗಳ ಸೇವೆಯನ್ನು ಮಾಡಬೇಕಿತ್ತು. ಇದಲ್ಲದೆ ಅವರಿಗೆ ಇವರ ನಾಗರಿಕತೆಯಲ್ಲಿ ಸಮಾಜದಲ್ಲಿ ಬೆರೆಯುವ ಅವಕಾಶವಿರಲಿಲ್ಲ. ಊರಿನಿಂದ ಹೊರಗೆ ಇವರ ಗುಡಿಸಲುಗಳಿರುತ್ತಿದ್ದವು.

ಕೃಷಿಯಾಧಾರಿತ ಆರ್ಥಿಕತೆಯು ಉಳಿಗಮಾನ್ಯ ಪದ್ಧತಿಯ ಆಧಾರದ ಮೇಲೆ ಅಭಿವೃದ್ಧಿ ಆಗಿರುವಂಥದ್ದು. ಸಾಮಾಜಿಕ ಅಂತಸ್ತು ಹಾಗು ಪದವಿಗಳು ಜನ್ಮದ ಆಧಾರದ ಮೇಲೆ ನಿರ್ಧಾರಿತ ವಾಗಿದ್ದವು. ಇಂತಹ ಶೋಷಣಾ ಮತ್ತು ಒತ್ತಡದ ಹಿನ್ನೆಲೆಯಲ್ಲಿ ಜೀತಪದ್ಧತಿಯು ಸಾಮಾನ್ಯವಾಗಿತ್ತು. (Tripathy :1989:5)

'ಕೃಷಿಯೇ ಸಂಸ್ಕೃತಿಯ ಅತಿ ಪ್ರಾಚೀನ ರೂಪ', ಎಂದಿರುವ ವಿಲ್ ಡ್ಯುರ್ಯಾಂಟ್, 'ಕೃಷಿಯು ನಾಗರಿಕತೆಯನ್ನು ಸೃಷ್ಟಿಸುವುದರ ಜೊತೆಗೆ ಖಾಸಗಿ ಆಸ್ತಿಯನ್ನೂ ಹುಟ್ಟು ಹಾಕಿ ಗುಲಾಮಗಿರಿಯ ಸೃಷ್ಟಿಗೂ ಕಾರಣವಾಯಿತು', ಎಂದಿದ್ದಾನೆ. 'ಕೃಷಿಯ ಆರಂಭದಿಂದಲೇ ಸಾಮಾಜಿಕವಾಗಿ ದುರ್ಬಲರಾದ ವರನ್ನು ಸಬಲರು ದುಡಿಸಿಕೊಳ್ಳುವ ಅಸಮಾನತೆಯ ಪರಿಪಾಠವೂ ಮೊದಲಾಯಿತು' (ಸೂರ್ಯನಾಥ ಕಾಮತ್:2006:73) ಆದ್ದರಿಂದ ದಾಸ್ಯವು ಕೃಷಿಯ ಅವಿಭಾಜ್ಯ ಅಂಗವಾಗಿದೆ ಎಂದು ಸೂರ್ಯನಾಥ ಕಾಮತ್ ಅಭಿಪ್ರಾಯ ಪಡುತ್ತಾರೆ.

ರೋಮ್, ಗ್ರೀಸ್ ಹಾಗು ಭಾರತದಲ್ಲೂ ಸಹ ದಾಸ್ಯ ಪದ್ಧತಿಯು ಅಸಮಾನ ಸಮಾಜೋ ಆರ್ಥಿಕ ಪದ್ಧತಿಯ ಫಲವಾಗಿತ್ತು. ಈ ವ್ಯವಸ್ಥೆಯಡಿ ಸಾಲಗಾರ-ಲೇವಾದೇವಿಗಾರ ಸಂಬಂಧವು ದಾಸ-ಒಡೆಯ ಸಂಬಂಧವಾಗಿ ಪರಿವರ್ತಿತವಾಯಿತು. (ಸೂರ್ಯನಾಥ ಕಾಮತ್:2006 :8)

ಸಾಲಗಾರ ದಾಸನೂ/ಆಳೂ ಆಗಿರುವುದರಿಂದ ತನ್ನ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಕೇಳಲಾಗುವುದಿಲ್ಲ. ಕಡಿಮೆ ಕೂಲಿಗೆ ತೃಪ್ತವಾಗಿರಬೇಕಿತ್ತು. ಇದರಿಂದ ಅವನು ಮತ್ತೂ ಸಾಲ ಪಡೆದುಕೊಳ್ಳುತ್ತ ನಿರಂತರ ಸಾಲಗಾರನಾಗುತ್ತಾನೆ. ಅವರ ಸಾಲವು ಅವನ ಜೀವನಪರ್ಯಂತ ಮರುಪಾವತಿಯಾಗುವುದಿಲ್ಲ. ಅವನೊಡನೆ ಅವನ ಕುಟುಂಬದ ಜನರೂ ಒಡೆಯರ ಮನೆಯಲ್ಲಿ ಅತಿ ಕಡಿಮೆ ಕೂಲಿಗೆ ಕೆಲಸ ಮಾಡಬೇಕಾಗುತ್ತದೆ.

ಆರ್ಥಿಕ ಅವಲಂಬನೆ ಬಡತನ ಹಾಗು ಕೃಷಿ ಪ್ರಧಾನ ಸಮಾಜವು ಜನರನ್ನು ಸಾಲಗಾರರನ್ನಾಗಿಸಿ ದಾಸರಾಗುವಂತೆ ಮಾಡಿವೆ. ಅಶಿಕ್ಷಿತ ಜನರ ಸರಳತೆ ಅಜ್ಞಾನ ಈ ದಾಸ್ಯವನ್ನು ಸುಲಭವಾಗಿಸಿತು.

ಬೇರೆ ಪ್ರದೇಶದಲ್ಲಿ ಇರುವ ಜೀತಪದ್ಧತಿಗೂ ಮಲೆನಾಡಿನ ಜೀತ ಪದ್ಧತಿಗೂ ವ್ಯತ್ಯಾಸವುಂಟು. ಈ ವ್ಯತ್ಯಾಸದಿಂದ ಮಲೆನಾಡಿನ ಜೀತ ಪದ್ಧತಿ ವಿಶಿಷ್ಟವಾಗಿದೆ.

ಮಲೆನಾಡು ಮಲೆಗಳಿಂದ ತುಂಬಿದ ದುರ್ಗಮವಾದ ಪ್ರದೇಶವಾಗಿದ್ದು, ಜನರು ನೆಲೆಸಲು ಸ್ವಲ್ಪ ಕಷ್ಟವೇ. ಜೋರಾಗಿ ಸುರಿಯುವ ಮಳೆ, ಗುಡ್ಡಗಾಡು ಪ್ರದೇಶ, ಕಾಡುಪ್ರಾಣಿಗಳು- ಈ ಕಾರಣಗಳಿಂದ ಜನರು ಅಲ್ಲಿ ನೆಲೆಸಿದ್ದು ಕಡಿಮೆ ಎನ್ನಬಹುದು. ಬಯಲುಸೀಮೆಗೆ ಇರುವ ಅನುಕೂಲಗಳು, ಸಮತಟ್ಟಾದ ನೆಲ ಮಲೆನಾಡಿಗೆ ಸಹಜವಾಗೇ ಇಲ್ಲ.

ಹೀಗಿರುವಲ್ಲಿ ಕುವೆಂಪು ಚಿತ್ರಿಸಿದ ಮಲೆನಾಡಿನ ಪ್ರದೇಶಗಳಲ್ಲಿ ಜನಸಂಖ್ಯೆ ಬಹಳವೇ ಕಡಿಮೆ ಇತ್ತು. ಕುವೆಂಪು ಅವರೇ ಹೇಳುವಂತೆ 'ಊರೆಂದರೆ ಒಂದೇ ಮನೆ' ಎಂಬಂತೆ. ಈ ಒಂದೇ ಮನೆಯಲ್ಲಿರುವ ಜಮೀನ್ದಾರರು ತಮ್ಮ ಮನೆಯ ಸುತ್ತ ಮುತ್ತಲು ಕಾಡಿನ ಪ್ರದೇಶಗಳನ್ನು ಸವರಿ ಗದ್ದೆ ಹಾಗೂ ಅಡಿಕೆ ತೋಟಗಳನ್ನು ಮಾಡಿಕೊಂಡಿದ್ದರು. ಕಾಡಿನಲ್ಲಿ ಭೂಮಿ ಸಾಕಷ್ಟು ಇರುವುದರಿಂದ ಹಾಗು ಕಾಡನ್ನು ಗದ್ದೆ ತೋಟಗಳನ್ನಾಗಿ ಪರಿವರ್ತನೆ ಮಾಡಿಕೊಳ್ಳಲು ಬಹುಶಃ ಆಗ ಯಾರ ಕಟ್ಟುಪಾಡು ಇರಲಿಲ್ಲವಾದ್ದರಿಂದ, ಸೂಕ್ತವಾದ ಜಾಗಗಳಲ್ಲಿ ಗದ್ದೆ ತೋಟಗಳನ್ನು ಸಾಕಷ್ಟು ಮಾಡಿದ್ದರು.

ಒಬ್ಬ ಜಮೀನ್ದಾರನ ಮನೆಯ ಸಮೀಪ ಅವರ ಗದ್ದೆ ತೋಟದಲ್ಲಿ ಕೆಲಸ ಮಾಡುವ ಆಳುಗಳ ಬಿಡಾರ ಇರುತ್ತಿತ್ತು. ಇವರು ಒಂದಲ್ಲ ಒಂದು ಕಾರಣಕ್ಕೆ ಜಮೀನ್ದಾರರಲ್ಲಿ ಸಾಲ ಮಾಡಿ ಅವರ ಜೀತದಾಳುಗಳಾಗಿದ್ದರು. ಜೀತದಾಳುಗಳ ನಿವಾಸಕ್ಕೆ ಬಿಡಾರ ಅಥವಾ ಗುಡಿ ಎಂದು ಕರೆಯುತ್ತಿದ್ದರು. ಶ್ರೀಮಂತರ ನಿವಾಸಕ್ಕೆ ಮಾತ್ರ 'ಮನೆ' ಎಂದು ಕರೆಯುತ್ತಿದ್ದರು.

## 4.2. ಸಾಮಾನ್ಯ ಜೀತ ಪದ್ಧತಿ :

ಜೀತಪದ್ಧತಿಯು ಒಪ್ಪಂದದ ಕರಾರಿನ ಊಳಿಗವಾಗಿದೆ. ಅದರಡಿ ಬಡಮನುಷ್ಯನು ಸಾಹುಕಾರನ ಸೇವೆಯನ್ನು ಒಂದರಿಂದ ಮೂರು ವರ್ಷದವರೆಗೆ ಮಾಡುವುದಾಗಿ ಒಪ್ಪಂದ ಮಾಡಿಕೊಳ್ಳುವನು. ಕರಾರಿನ ಪ್ರಕಾರ ಸೇವೆಗೆ ಒಡೆಯನು ಕೂಲಿಯನ್ನು ಕೊಟ್ಟು ಅದನ್ನು ಬರೆದಿಟ್ಟುಕೊಳ್ಳುತ್ತಿದ್ದನು. ಆರಂಭದಲ್ಲಿ ಒಡೆಯನು ಒಂದಿಷ್ಟು ಹಣವನ್ನು ಆಳಿಗೆ ಅಥವಾ ಆಳಿನ ಕಡೆಯವರಿಗೆ ಕೊಡುವನು.

ಇದನ್ನು ಸೇವಕನು ದುಡಿದು ತೀರಿಸಬೇಕು. ಸಾಮಾನ್ಯವಾಗಿ ಇದಕ್ಕೆ ಬಡ್ಡಿಯನ್ನು ಹಾಕುತ್ತಿರಲಿಲ್ಲ. ಆದರೆ ಸೇವಕನು ಓಡಿ ಹೋಗುವ ಪ್ರಯತ್ನ ಮಾಡಿದರೆ ಅಥವಾ ಕರಾರನ್ನು ಮುರಿದರೆ ಕೊಟ್ಟ ಹಣಕ್ಕೆ ಬಡ್ಡಿ ಹೇರಲಾಗುತ್ತಿತ್ತು. ಸೇವಕನ ಬಟ್ಟೆ ಬರೆ ಮತ್ತು ಊಟವನ್ನು ಒದಗಿಸುವುದು ಒಡೆಯನ ಕರ್ತವ್ಯವಾಗಿತ್ತು. ಇದರ ಲೆಕ್ಕ ಇಡುತ್ತಿರಲಿಲ್ಲ.

ಮೊದಲ ಸಾಲವನ್ನು ಪೂರೈಸುವುದರೊಳಗಾಗಿ ಸೇವಕ ಅಥವ ಅವನ ಪೋಷಕ ಮತ್ತೊಮ್ಮೆ ಸಾಲ ಪಡೆಯುತ್ತಿದ್ದು, ಸೇವೆಯ ಅವಧಿಯು ಮತ್ತೆ ಮುಂದುವರಿಯುತ್ತಿತ್ತು. ಒಬ್ಬ ಮನುಷ್ಯ ತನ್ನ ಇಡೀ ಜೀವಿತಾವಧಿಯ ಅಂದರೆ ಹತ್ತರಿಂದ ಎಪ್ಪತ್ತು ವರ್ಷಗಳವರೆಗೆ ಜೀತದಾಳಾಗಿಯೇ ದುಡಿಯುತ್ತಿರಲಿಲ್ಲ. (Srinivas M.N.:1967:27). ಸಾಲ ಚುಕ್ತ ಆಗಿ ಅವರು ಸ್ವತಂತ್ರರಾಗುತ್ತಿದ್ದರು.

ಇಂತಹ ಜೀತಪದ್ಧತಿಯಲ್ಲಿ ಸಾಲ ತೀರುವ ಭರವಸೆಯಿತ್ತು. ಇಲ್ಲ ಸಾಲ ಪಡೆದ ಕುಟುಂಬದ ಒಬ್ಬ ವ್ಯಕ್ತಿ ಆ ಸಾಲ ತೀರಿಸಲು ಭಾದ್ಯಸ್ಥನಾಗುತ್ತಾನೆ. ಮಲೆನಾಡಿನ ಜೀತದಾಳುಗಳ ಸ್ಥಿತಿ ಹೀಗಿರಲಿಲ್ಲ.

## 4.3. ಮಲೆನಾಡಿನ ಜೀತ ಪದ್ಧತಿ :

ಅಂದು ಮಲೆನಾಡಿನ ಶ್ರೀಮಂತರು ಜಮೀನುದಾರರಾದ ಗೌಡರು, ಪುರೋಹಿತ ವರ್ಗದವರು ತಮ್ಮ ಜಮೀನು ಮತ್ತು ಇತರೆ ಕೆಲಸಕ್ಕೆ ಖಾಯಂ ಆಗಿ ಆಳುಗಳನ್ನು ಇಟ್ಟುಕೊಳ್ಳುತ್ತಿದ್ದರು. ಇವರು ಹೆಚ್ಚಾಗಿ ಅಸ್ಪೃಶ್ಯರು/ದಲಿತರೇ ಆಗಿರುತ್ತಿದ್ದರು.

ಅಂದಿನ ಪದ್ಧತಿಯಂತೆ ಮದುವೆಯಲ್ಲಿ ಮದುಮಗನು ಮದುಮಗಳ ಪೋಷಕರಿಗೆ ತೆರ-ವಧೂದಕ್ಷಿಣೆ ಕೊಡಬೇಕಿತ್ತು. 'ತೆರ' ಕೊಡದೆ ಮದುವೆಯಾಗುವುದು ಸಾಧ್ಯವಿರಲಿಲ್ಲ.

ಒಬ್ಬನಿಗೆ ಮದುವೆ- 'ಕುಹಲುಮೊರೆ' ಮಾಡಿಸಿದರೆ ಅವನು, ಅವನ ಹೆಂಡತಿ ಮಕ್ಕಳೂ ಎಲ್ಲರೂ ಒಡೆಯರ ಮನೆಯಲ್ಲಿ ಖಾಯಂ ಆಗಿ ದುಡಿಯಬೇಕು. ಇವರಿಗೆ ಕೂಲಿ ಹಣರೂಪದಲ್ಲಿ ಇರಲಿಲ್ಲವಾದ್ದರಿಂದ ಇವರು ತೆಗೆದುಕೊಂಡ ಸಾಲ ತೀರುವ ಪ್ರಮೇಯವೇ ಇರುತ್ತಿರಲಿಲ್ಲ. ಹೀಗೆ ಮದುವೆಗೆ ಸಾಲ ಕೊಟ್ಟರೆ, ಇಡೀ ಕುಟುಂಬದವರು ಖಾಯಂ ಆಳುಗಳಾಗಿ ಒಡೆಯರ ಮನೆಯಲ್ಲಿ ದುಡಿಯುತ್ತಿದ್ದರು. ಸಂಬಳ ಕೊಟ್ಟು ಕೆಲಸಕ್ಕೆ ಇಟ್ಟುಕೊಳ್ಳುವುದಕ್ಕಿಂತ ಸಾಲ ಕೊಟ್ಟು ಇಡೀ ಕುಟುಂಬವನ್ನು ದುಡಿಯಲು ಇಟ್ಟುಕೊಳ್ಳುವುದು ಒಡೆಯರಿಗೆ ಅಗ್ಗ ಹಾಗು ಸುಲಭವಾಗಿತ್ತು. ಕೊಟ್ಟ ಹಣಕ್ಕೆ ಬಡ್ಡಿಯನ್ನು ಹಾಕುತ್ತಿದ್ದರಾದ್ದರಿಂದ ಸಾಲಕ್ಕಿಂತ ಬಡ್ಡಿಯೇ ಹೆಚ್ಚಾಗಿ ಜೀತ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿತ್ತು.

'ಮಲೆಗಳಲ್ಲಿ ಮದುಮಗಳು' ಕಾದಂಬರಿ ಶುರುವಾಗುವುದೇ ಇಂತಹ ಒಬ್ಬ ಜೀತದಾಳಿನಿಂದ. ಗುತ್ತಿಯ ತಂದೆ ತಾಯಿ ಸಹ ಸಿಂಬಾವಿ ಭರಮೈ ಹೆಗ್ಗಡೆಯವರ ಬಳಿ ಕೆಲಸ ಮಾಡುತ್ತಿದ್ದರು. ಗುತ್ತಿಯೂ ಸಹ ಅವರಲ್ಲೆ ಕೆಲಸಕ್ಕಿದ್ದ. ಆದರೆ ಅವರ ಸಂಬಳ ಧವಸಧಾನ್ಯಗಳ ರೂಪದಲ್ಲಿದ್ದವು. ಇದಕ್ಕೆ 'ಪಡಿ' ಎಂದು ಹೆಸರು.

ತಮ್ಮ ಮನೆಯಲ್ಲಿದ್ದ ಜೀತದಾಳುಗಳ ಯೋಗಕ್ಷೇಮ ಎಲ್ಲವೂ ಆ ಒಡೆಯರದಾಗಿತ್ತು. ವರ್ಷದ ಯುಗಾದಿ ಹಬ್ಬದಲ್ಲಿ ಜೀತದಾಳುಗಳಿಗೆ ಒಡೆಯರು ಬಟ್ಟೆಯನ್ನು ಕೊಡುತ್ತಿದ್ದರು.

'ಗಂಡಸರಿಗೆ ಒಂದು ಅಂಗಿ ನಾಲ್ಕು ಮೊಳ ಉದ್ದ ಒಂದು ಬಾರ ಘರದಿ ಪಂಚೆ, ತಲೇಗೆ ಕಟ್ಟುವುದಕ್ಕೆ ನಾಲ್ಕು ಮೊಳ ಉದ್ದದ ಎಲೆವಸ್ತ್ರ, ಮಳೆಗಾಲಕ್ಕೆ ಸೂಡಲು ಒಂದು ಕಂಬಳಿ; ಹೆಂಗಸರಿಗೆ ಹದಿನೆಂಟು ಮೊಳ ಉದ್ದದ ಜಿಡ್ಡು ಸೀರೆ; ಗಂಡು ಮಕ್ಕಳಿಗೆ ಒಂದು ಅಂಗಿ, ಹೆಣ್ಣು ಮಕ್ಕಳಿಗೆ ಒಂದು ಪರಿಕಾರ (ಲಂಗ) ಇಷ್ಟನ್ನು ಕೊಡುತ್ತಿದ್ದರು. (ಕಡಿದಾಳು ರಾಮಪ್ಪಗೌಡ ಎಸ್.:1998:48) ನಗದಿನ ಕೂಲಿ ಜೀತದಾಳುಗಳಿಗೆ ಕೊಡುತ್ತಿರಲಿಲ್ಲ. ಅದರ ಬದಲಾಗಿ ಅವರಿಗೆ 'ಪಡಿ'ಯನ್ನು ನಿಗದಿಪಡಿಸುತ್ತಿದ್ದರು. ಅಂದರೆ ಒಂದು ಕೊಳಗ ಭತ್ತ, ಒಂದು ಮುಷ್ಟಿ ಉಪ್ಪು, ಒಂದು ಮುಷ್ಟಿ ಮೆಣಸಿನಕಾಯಿ ಹಾಗು 'ಬಾಯಿ'ಗೆ ಎಲೆ ಅಡಿಕೆ, ಹೊಗೆಸೊಪ್ಪು ಇತ್ಯದಿಗಳನ್ನು ಕೊಡುತ್ತಿದ್ದರು.

## 4.4. ಶಿಕ್ಷೆ :

ಒಂದು ವೇಳೆ ಅಚಾತುರ್ಯ ನಡೆದು ಜೀತದಾಳು ಏನಾದರು ತಪ್ಪೆಸಗಿದರೆ ಅವನಿಗೆ 'ಪಡಿ'ಯನ್ನು ಕೊಡುತ್ತಿರಲಿಲ್ಲ.

'ಕಾನೂರು ಹೆಗ್ಗಡಿತಿ'ಯ ಸಿದ್ದ, ಬೈರ, ರಾಮಯ್ಯ, ಹೂವಯ್ಯರಿಗೆ ನೇಗಿಲು ಕೊಟ್ಟರು. ನೆಲವನ್ನು ಉಳುತ್ತಿದ್ದಂತೆ ಹೂವಯ್ಯನ ಎತ್ತುಗಳು ಕ್ರಮ ತಪ್ಪಿ ಗದ್ದೆಯಲ್ಲಿ ಸಿಕ್ಕಿದ ಕಡೆಗೆ ನುಗ್ಗ ತೊಡಗಿದವು. ನಡೆದ ಗಲಾಟೆಯಲ್ಲಿ ಒಂದು ಎತ್ತಿನ ಕಾಲಿಗೆ ಕತ್ತಿಯಿಂದ ಕಡಿದಂತೆ ಗಾಯ ಆಗಿ ನೆತ್ತರು ಹರಿಯಿತು. ಅಷ್ಟೇ ಅಲ್ಲದೆ ಒಂದು ನೇಗಿಲು ಮುರಿಯಿತು.

ನಡೆದ ವಿಷಯವನ್ನು ಗೌಡರಿಗೆ ಹೇಳಲು ಬೈರನ ಕಪಾಳಿಗೆ ಚಂದ್ರಯ್ಯಗೌಡರು ಹೊಡೆದು ಅವರ ಕೂಲಿ ಭತ್ತ ವಜಾ ಮಾಡಲು ಸೇರೆಗಾರರಿಗೆ ಆಜ್ಞೆ ಮಾಡಿದರು.

ಅಂದಿನ ದುಡಿತಕ್ಕೆ ಅಂದೇ ಪಡಿ ಸಾಮಗ್ರಿಯನ್ನು ಜೀತದಾಳುಗಳು ಪಡೆಯುತ್ತಿದ್ದರು. ಒಂದು ದಿನ ಪಡಿ ಪಡೆಯಲಿಲ್ಲವೆಂದರೆ ಅವರ ಗುಡಿಸಲುಗಳಲ್ಲಿ ಆಗುತ್ತಿದ್ದ ಘಟನೆ ದಯನೀಯವಾದದ್ದು.

ಬೈರ ಪಡಿ ಪಡೆಯದೆ ಇದ್ದ ದಿನವೇ ಅವನ ಹೆಂಡತಿ ಸೇಸಿ ಆರೋಗ್ಯ ಸರಿಯಿಲ್ಲದೆ ಕೆಲಸಕ್ಕೆ ಹೋಗದೆ ಮನೆಯಲ್ಲಿದ್ದಳು. ಹಾಗಾಗಿ ಅಂದು ಬೈರನ 'ಪಡಿ'ಯಿಂದಲೇ ಅವರು ಗಂಜಿ ಮಾಡಿ ಉಣ್ಣಬೇಕಿತ್ತು. ಗುಡಿಸಿಲಲ್ಲಿ ಯಾರಿಗೂ ಪಡಿ ದೊರೆಯಲಿಲ್ಲವೆಂದರೆ ಅಂದು ಅವರಿಗೆ ಉಪವಾಸವೇ ಗತಿ.

ಸಾಲ ಪಡೆದು ಜೀತದಾಳುಗಳು ಕೇವಲ ತಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಮಾತ್ರ ಬಲಿಗೊಡದೆ ತಮ್ಮ ಖಾಸಗಿ ಸ್ವಾತಂತ್ರ್ಯವನ್ನೂ ಒಡೆಯರ ಅಧೀನಮಾಡಿದ್ದರು.

'ಪ್ರತಿ ಗೌಡರ ಮನೆಗೂ ಸಂಬಂಧಿಸಿದಂತೆ, ಉಪಗ್ರಹಗಳ ಪರವಾಲಂಬಿ ಬದುಕು ಸಾಗಿಸುವ ನಿಮ್ನ ಜಾತಿಯ ಹಾಗೇ ನಿಮ್ನ ವರ್ಗದ ಜೀತದಾಳುಗಳೂ-ಆಯಾಯಾ 'ಮನೆ'ಗೇ ಸೇರಿದವರು. ಇವರ

ಸುಖ-ದುಃಖ ಮಾನ-ಅವಮಾನ, ಸತಿಪತ್ನಿ ಸಂಬಂಧದಂತೆ ಅತಿ ಖಾಸಗಿ ಸಂಬಂಧಗಳನ್ನೂ ನಿರ್ಧರಿಸುವವರು ಧನಿ ಗೌಡರು. (ಶಿವರುದ್ರಪ್ಪ ಜಿ.ಎಸ್. :1971:117) ಸಾಲ ಪಡೆದುಕೊಂಡ ಜೀತದಾಳುಗಳು ಗೌಡರ ಆಸ್ತಿಯಾಗಿದ್ದರು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬೆಟ್ಟಳ್ಳಿಯ ಕಲ್ಲಯ್ಯಗೌಡರ ಮನೆಯ ಜೀತದಾಳದ ಸೇಸಿ ತನ್ನ ಮಗಳ ಮದುವೆಯನ್ನು ತನ್ನ ಅಣ್ಣನ ಮಗನಾದ ಗುತ್ತಿಯೊಂದಿಗೆ ಮಾಡುವ ಆಸೆ. ಆದರೆ ಬೆಟ್ಟಳ್ಳಿ ಗೌಡರು ತಿಮ್ಮಿಯನ್ನು ಬಚ್ಚನೊಂದಿಗೆ ಲಗ್ನ ಮಾಡಲು ಆಜ್ಞಾಪಿಸಿದರು.

''ಒಡೆಯರ ಆಸ್ತಿಯಾಗಿದ್ದ ಅವರನ್ನು ಯಾರಿಗೆ ಕೊಡಬೇಕು? ಎಲ್ಲಿಗೆ ಕೊಡಬೇಕು? ಎಂಬುದನ್ನು ತಂದೆ ತಾಯಿಗಳು ನಿರ್ಧರಿಸಲು ಸಾಧ್ಯವೇ? ತಮ್ಮ ಜಾನುವಾರುಗಳನ್ನು ಬಿಕರಿ ಮಾಡುವ ಹಕ್ಕು ಎಂತೋ ಅಂತೆ ಬೇಲರು, ಹೊಲೆಯರು ಮಾದಿಗರು ಮೊದಲಾದ ಹೆಣ್ಣು ಗಂಡು ಜೀತಾಳುಗಳನ್ನು ಇಡುವ ಕೊಡುವ ಬಿಡುವ ಹಕ್ಕು ಅವರದ್ದೆ ತಾನೆ?'' (ಕುವೆಂಪು :2006ಬ:344)

ದುಡಿಮೆಯ ಘಟಕಗಳಾಗಿ ಪ್ರತಿಯೊಬ್ಬ ಜೀತದಾಳು ಭೂಮಾಲಿಕನಿಗೆ ಅವಶ್ಯಕವಾಗಿದ್ದನು. ಹಾಗಿದ್ದಲ್ಲಿ ಒಂದು ಕೇರಿಯ ಹೆಣ್ಣು ಇನ್ನೊಂದು ಕೇರಿಯವನೊಡನೆ ಮದುವೆಯಾಗುವುದು ಅಕ್ಷಮ್ಯ ಅಪರಾಧ ವಾಗಿತ್ತು. ಇದರಿಂದ ದುಡಿಯುವ ಒಂದಾಳು ಕಡಿಮೆಯಾಗುತ್ತಿತ್ತು. ತಿಮ್ಮಿಯ ತಂದೆ ದೊಡ್ಡ ಬೀರ ತನ್ನ ಒಡೆಯನ ಆಸೆಯಂತೆ ಅವಳನ್ನು ಬಚ್ಚನಿಗೆ ಮದುವೆ ಮಾಡಿಕೊಡಲು ಸಿದ್ಧನಾಗಿದ್ದನು. 'ಗೌಡರ ಜೀತದಾಳಾಗಿ, ಅವರಲ್ಲಿ ಸಾಲ ಮಾಡಿ, ಅವರಿಗೆ ತನ್ನನ್ನು ಸಂಪೂರ್ಣವಾಗಿ ಮಾರಿಕೊಂಡಿದ್ದ ದೊಡ್ಡ ಬೀರ ಆ ವಿಚಾರದಲ್ಲಿ ನಿರುಪಾಯನಾಗಿ ಒಡೆಯರ ಆಜ್ಞೆಗೆ ತಲೆಬಾಗಿದ್ದನು. (ಕುವೆಂಪು:2006ಬ:163)

ಒಡೆಯರ ಈ ನಿರ್ಧಾರಕ್ಕೆ ಅವರ ಹಿಂದಿದ್ದ ಸ್ವಾರ್ಥ ಮನೋಧರ್ಮದ ಪರಿಚಯವನ್ನು ಕುವೆಂಪು ಹೀಗೆ ಮಾಡಿ ಕೊಡುತ್ತಾರೆ.

'ಒಡೆಯರಿಗೆ ಬೇಕಾಗಿದ್ದುದು ಜೀತ ಮಾಡಲು ಒಂದು ಆಳು- ತಮ್ಮ ಹೊಲಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತ ಬೀಳುತ್ತದೆ. ಆದ್ದರಿಂದ ಕೇರಿಯ ಹೆಣ್ಣನ್ನು ಕೇರಿಯ ಗಂಡೇ ಮದುವೆಯಾಗಬೇಕು ಎಂಬುದು ಅವರ ಕಟ್ಟುಪ್ಪಣೆ. ಬೇರೆ ರೀತಿಯಿಂದ ವರ್ತಿಸಿದರೆ, ಆ ಹೆಣ್ಣು ಇನ್ನೊಬ್ಬ ಬೇರೆ ಹಳ್ಳಿಯ ಕೇರಿಯವನಿಂದ ತಾಳಿಕಟ್ಟಿಸಿಕೊಂಡಿದ್ದರೂ ಸರಿ. ಅವಳನ್ನು ಎಳೆದು ತರಿಸಿ, ತಾಳಿ ಕೀಳಿಸಿ, ತಮ್ಮ ಕೇರಿಯವನಿಗೇ ಮದುವೆ ಮಾಡಿಸುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅಪ್ಪಿ ತಪ್ಪಿ ಒಡೆಯರ ಇಚ್ಛೆಗೆ ವಿರೋಧವಾಗಿ ನಡೆದವರಿಗೆ ಹಿಂದೆ ಅಂತಹ ಗತಿಯೇ ಒದಗಿತ್ತು. ಕೀಳು ಜಾತಿಯವರಿಗೆ ಅವರ ಇಚ್ಛಾನುಸಾರ ಒಲವು ಅಕ್ಕರೆ ಇರುವುದೆಂದರೇನು? ಒಲವು ಅಕ್ಕರೆ ಏನಿದ್ದರೂ ಎಲ್ಲ ಒಡೆಯರ ಲಾಭದ ವಲಯದೊಳಗಿದ್ದು, ಅವರ ಇಚ್ಛಾಧೀನವಾಗಿರಬೇಕು. ಅವರ ಆಜ್ಞೆಯ ಗೆರೆ ದಾಟುವಂತಿರಲಿಲ್ಲ. (ಕುವೆಂಪು :2006ಬ:163)

ಸಿಂಬಾವಿ ಭರಮೈ ಹೆಗ್ಗಡೆ ಗುತ್ತಿಯೊಡನೆ ಓಡಿ ಬಂದ ತಿಮ್ಮಿಯನ್ನು ಅಂದರೆ ಒಂದು ದುಡಿಯುವ ಆಳನ್ನು ಕಳೆದುಕೊಳ್ಳಲು ಇಚ್ಛಿಸದೇ ಬೆಟ್ಟಳ್ಳಿ ಗೌಡರ ಕಡೆಯಿಂದ ಕಾಗದ ಅಥವಾ ಜನರು ಬರುವ

ಮೊದಲೇ ಗುತ್ತಿ ತಿಮ್ಮಿಯರ ಲಗ್ನ ನೆರವೇರಿದರೆ ತಮ್ಮ ಕೇರಿಗೆ ಒಂದು ಹೆಣ್ಣಾಳನ್ನು ಹೆಚ್ಚಿಸಿಕೊಂಡಂತಾಗುವುದಲ್ಲದೇ ಬೆಟ್ಟಳ್ಳಿ ಮನೆತನದ ಮೇಲೆ ಸಿಂಬಾವಿ ಮನೆತನ ಒಂದು ವಿಜಯ ಸಾಧಿಸದಂತಾಗುತ್ತದೆ ಎಂದು ಅಂದಿನ ರಾತ್ರಿಯೇ ಲಗ್ನ ಮಾಡಲು ಬೇಕಾದ ಸಾಮಾನು, ಅಕ್ಕಿ, ಬೆಲ್ಲ, ಹೆಣ್ಣಿಗೆ ಗಂಡಿಗೆ ಉಡಲು ತೊಡಲು ಬೇಕಾದ ಸಾಮಾನುಗಳನ್ನು ಕೊಟ್ಟು ಅವಸರದಲ್ಲಿ ಮದುವೆ ಮಾಡಿಸಿದನು.

ಕಾದಂಬರಿಯಲ್ಲಿ ಗುತ್ತಿ ತಿಮ್ಮಿಯ ಮದುವೆ ನಡೆಯುವುದು. ಆಗ ಬೆಟ್ಟಳ್ಳಿಯ ಕಲ್ಲಯ್ಯಗೌಡರು ಉಪಾಯದಿಂದಾಗಲಿ ಅಥವಾ ಬಲಪ್ರಯೋಗದಿಂದಾಗಲಿ ತಮ್ಮ ಜೀತದವಳಾಗಿ ತಮಗೆ ಸೇರಿರುವ ತಮ್ಮ ಕೇರಿಯ ಹುಡುಗಿಯನ್ನು ಕರೆತಂದೋ ಎಳೆತಂದೋ ಬಚ್ಚನಿಗೆ ಮದುವೆ ಮಾಡಿಸಿಯೇ ತೀರಬೇಕೆಂದು ನಿರ್ಧರಿಸಿದರು. (ಕುವೆಂಪು:2006ಬ:349)

ಇನ್ನೊಂದು ಉಪಾಯ, ಆಳಿಗೆ ಆಳನ್ನು ಬದಲು ತರುವುದು ಅದರಂತೆ ಬೆಟ್ಟಳ್ಳಿ ಗೌಡರು ಸಿಂಬಾವಿ ಹೆಗ್ಗಡೆಯವರಿಗೆ ಕಾಗದ ಬರೆದರು.

"... ಆದರೆ ನಮ್ಮ ಹೊಲಿಗೇರಿಯ ಹೆಣ್ಣಿಗೆ ಬದಲಾಗಿ ನಿಮ್ಮ ಹೊಲಗೇರಿಯಿಂದ ಒಂದು ಹೆಣ್ಣನ್ನು ನಮ್ಮ ಕೇರಿಯ ಆಳು ಹುಡುಗನೊಬ್ಬನಿಗೆ ತಂದುಕೊಳ್ಳುವ ಇಚ್ಛೆ ಇದೆ. ನಿಮ್ಮ ಆಳು ಹುಡುಗ ಹಾರಿಸಿಕೊಂಡು ಹೋದ ದೊಡ್ಡಬೀರನ ಮಗಳನ್ನು ಈ ಹುಡುಗನಿಗೆ ಲಗ್ನ ಮಾಡಲು ಏರ್ಪಾಡೂ ಆಗಿತ್ತು..." (ಕುವೆಂಪು:2006ಬ:369)

ಒಲಿದ ಜೀವಗಳು ತಮ್ಮ ಗೌಡರು ಒಪ್ಪಿಗೆ ತೆಗೆದುಕೊಂಡು ಮದುವೆಯಾಗಲು ತೆರ, ಸಾಲದ ಅಡಚಣೆಯಿತ್ತು.

ಗುತ್ತಿ ತನ್ನ ಒಡೆಯ ಸಿಂಬಾವಿ ಭರಮೈ ಹೆಗ್ಗಡೆಯರ ಬಳಿ ಬೆಟ್ಟಳ್ಳಿಯ ತಿಮ್ಮಿಯೊಡನೆ ಮದುವೆ ಯಾಗುವ ವಿಷಯ ತಿಳಿದಾಗ, ಅವರು ಕೋಪಗೊಂಡು,

'...ಅವರ ಸಾಲಾನೆಲ್ಲ ತೀರಿಸಿ, ಅವಳಿಗೆ ಅಷ್ಟೊಂದು ತೆರಾ ಕೊಟ್ಟು, ನಾ ನಿನಗೆ ಮದೇ ಮಾಡ್ಸಿ ನನ್ನ ಮನೇ ಹಾಳು ಮಾಡಿಕೊಳ್ಳಲೇನೋ? ನಿನಗೆ, ನಿನ್ನ ಅಪ್ಪಗೆ ಕೊಟ್ಟ ಸಾಲಾನೇ ಕುತ್ತರೆ ಬೆಳದ್ಹಾಂಗೆ ಬೆಳೆದು ನಿಂತದೆ! ಅದನ್ನೇ ನೀವು ತೀರಿಸಾದು ಯಾವಾಗಲೋ... ಹೇಳ್ತೀನಿ, ನೋಡು. ನಿಂಗೆ ಅವಳನ್ನ ಮದೇ ಮಾಡಿಕೊಳ್ಳೇಬೇಕು ಅಂತಾ ಅಷ್ಟೊಂದು ತೆವಲು ಹತ್ತಿದ್ರೆ, ಬೆಟ್ಟಳ್ಳಿ ಗೌಡ್ರಿಂದಲೆ ಸಾಲಾ ತಗೊಂಡು, ನನ್ನ ಸಾಲಾನೆಲ್ಲ ತೀರ್ಸಿ, ಅವರ ಕೇರಿಗೇ ಹೋಗಿ ಅವಳನ್ನೇ ಮದೇ ಮಾಡಿಕೊಂಡು ಸುಕಾಗಿರು!...' ಎಂದು ಕೋಪದಿಂದ ಹೇಳುತ್ತಾನೆ. (ಕುವೆಂಪು:2006ಬ:326)

ಈ ಹಿಂದೆ ಗುತ್ತಿಯ ತಂದೆ ಕರಿಸಿದ್ದಗೆ ಬೆಟ್ಟಳ್ಳಿ ಕೇರಿಯ ದೊಡ್ಡಬೀರನ ತಂಗಿ ಗಿಡ್ಡಿಯನ್ನು ತಂದಾಗಲೆ ಬೆಟ್ಟಳ್ಳಿ ಕಲ್ಲಯ್ಯಗೌಡರಿಗೂ ಭರಮೈ ಹೆಗ್ಗಡೆಯ ತಂದೆ ಸಿಂಬಾವಿ ದಿವಂಗತ ಗುಡ್ಡಣ್ಣ ಹೆಗ್ಗಡೆಯವರಿಗೂ ಹೊಡೆದಾಟವಾಗುವುದರಲ್ಲಿತ್ತು, ಆಗ ಕಲ್ಲೂರು ಸಾಹುಕಾರ ಮಂಜಭಟ್ಟರ ಮಧ್ಯಸ್ಥಿಕೆಯಲ್ಲಿ ಕರಿಸಿದ್ದನ ತಂಗಿ ಸೇಸಿಯನ್ನು ಬೆಟ್ಟಳ್ಳಿ ಕೇರಿಯ ತಿಮ್ಮಿಯ ಅಪ್ಪ ದೊಡ್ಡಬೀರನಿಗೆ ಮದುವೆ ಮಾಡಿಸಿ, ಆಳಿಗೆ ಆಳು

ಬದಲು ಬಂದು ತುಂಬಿಕೊಳ್ಳುವಂತೆ ಮಾಡಿದ್ದರು. ಹೀಗೆ ಆಳುಗಳ ವಿಷಯದಲ್ಲಿ ಸಾಹುಕಾರಗೌಡರ ನಡುವೆ ಪರಸ್ಪರ ಸ್ಪರ್ಧಾಭಾವವೂ ಪ್ರತಿಷ್ಠೆಯ ಪೈಪೋಟಿಯೂ ನಡೆಯುತ್ತಿತ್ತು.

ಜೀತದಾಳುಗಳು ತಪ್ಪು ಮಾಡಿದಾಗ ಜಮೀನ್ದಾರರಿಂದ ಸಿಗುತ್ತಿದ್ದ ಶಿಕ್ಷೆ ಘೋರವಾಗಿರುತ್ತಿತ್ತು. ಒಮ್ಮೆ ಜೀತದಾಳು ಹೊಲೆಯನೊಬ್ಬನ ಎದೆಯ ಮೇಲೆ ಹಲಗೆ ಹಾಕಿಸಿ ಮೆಟ್ಟಿಸಿ, ಅವನು ರಕ್ತಕಾರಿಕೊಂಡು ತರುವಾಯ ಮೃತನಾಗಿದ್ದ ಎಂದು ಕುವೆಂಪುರವರು ಕಾದಂಬರಿಯಲ್ಲಿ ಬರೆಯುತ್ತಾರೆ.

ತಿಮ್ಮಿ ಗುತ್ತಿಯೊಂದಿಗೆ ಓಡಿ ಹೋದಾಗ ಬೆಟ್ಟಳ್ಳಿ ಕಲ್ಲಯ್ಯ ಗೌಡರು ಅವಳ ಅಣ್ಣ ಸಣ್ಣಬೀರನನ್ನು ಕಂಬಕ್ಕೆ ಕಟ್ಟಿಸಿ ಇಜಾರಸಾಬಿಯಿಂದ ಚೆನ್ನಾಗಿ ಹೊಡೆಸಿದರು. ಅದರ ವರ್ಣನೆಯನ್ನು ಕುವೆಂಪು ಹೀಗೆ ಕೊಡುತ್ತಾರೆ.

''ಇಜಾರದ ಸಾಬು ತನ್ನ ಕೈಯಿಂದ ಉಗ್ರಸನ್ನೆ ಮಾಡಿ ತಲೆಯಾಡಿಸಿ ಕರೆದೊಡನೆಯ, ಗಾಡಿಯ ನೊಗಕ್ಕೆ ಹೆಗಲು ಕೊಟ್ಟೂ ಕೊಟ್ಟೂ ಅಭ್ಯಾಸವಿದ್ದ ಗಾಡಿಯೆತ್ತು ಗಾಡಿ ಹೊಡೆಯುವವನು ಮೂಕಿಗೆ ಕೈಹಾಕಿ ಎತ್ತಿ ಲೊಚಗುಟ್ಟಿದೊಡನೆಯ ನೊಗಕ್ಕೆ ವಿಧೇಯತೆಯಿಂದ ಹೆಗಲು ಕೊಡುವಂತೆ, ಸಣ್ಣಬೀರ ನಡು ನಡುಗುತ್ತಲೆ, ನಾಲಗೆ ಬಿದ್ದು ಹೋಗಿ ಮಾತು ಸತ್ತವನಂತೆ, ಮೂಕ ಪಶುವಿನಂತೆ... ಶಿಕ್ಷಾಸ್ತಂಭದ ಕಡೆ ಮುಂದುವರಿದನು. ಅವನು ಹೋದ ರೀತಿ, ಆ ಕಂಬವನ್ನು ತಬ್ಬಿ ನಿಂತ ರೀತಿ, ಎರಡು ಕೈಗಳನ್ನು ಜೋಡಿಸಿ ಹಗ್ಗ ಬಿಗಿಸಿಕೊಂಡ ರೀತಿ, ಹೇಗಿತ್ತು ಎಂದರೆ ಆ ಯೂಪಸ್ತಂಬಕ್ಕೆ ಬಲಿ ಕಟ್ಟಿಸಿಕೊಳ್ಳುವ ಯಜ್ಞ ವಿಧಾನ ಅವನಿಗೆ ಪೂರ್ವ ಪರಿಚಿತವಾದದ್ದು ಎಂಬುದು ಚೆನ್ನಾಗಿ ಗೊತ್ತಾಗುವಂತಿತ್ತು. ತಾನು ಮಾತ್ರವೆ ಅಲ್ಲದೆ ಇತರ ಅಪರಾಧಿಗಳೂ ಗೌಡರ ಕ್ರೋಧಕ್ಕೆ ಪಾತ್ರರಾಗಿ ಆ ಯೂಪಸ್ತಂಬಕ್ಕೆ ಯಜ್ಞ ಪಶುಗಳಾಗಿದ್ದುದನ್ನು ಅವನು ಹಿಂದೆ ಎಷ್ಟೋ ಸಾರಿ ಕಂಡೂ ಇದ್ದನು, ಅನುಭವಿಸಿಯೂ ಇದ್ದನು. ಆಜ್ಞೆಯಾದೊಡನೆಯೆ ಹೋಗಿ, ನೊಗಕ್ಕೆ ಹೆಗಲು ಕೊಡುವಂತೆ ಕಂಬವನ್ನು ತಬ್ಬಿ ನಿಂತು ಕೈ ಕಟ್ಟಿಸಿ ಕೊಳ್ಳಲು ಒಪ್ಪದೆ ಪ್ರತಿಭಟಿಸಿದವರಿಗೆ ಏನು ಯಮಶಿಕ್ಷೆ ಒದಗುತ್ತಿತ್ತು ಎಂಬುದೂ ಅವನಿಗೆ ಗೊತ್ತಿದ್ದ ವಿಷಯವೇ ಆಗಿತ್ತು. ಆದ್ದರಿಂದಲೆ ಅವನು ಚಕಾರವೆತ್ತದೆ ಬೇಗ ಬೇಗ ಹೋಗಿ ಕಂಬವನ್ನಪ್ಪಿ ಕೈ ಕಟ್ಟಿಸಿ ಕೊಂಡದ್ದು'' (ಕುವೆಂಪು :2006ಬ:335)

ಲುಂಗಿಸಾಬನ ಏಟಿಗೆ ಮೈಮೇಲೆ ಬಾಸುಂಡೆಗಳೆದ್ದು, ನೆತ್ತರು ಚಿಮ್ಮಿ ಸಣ್ಣಬೀರನ ಕೂಗು ನಿಂತು, ತಲೆ ಕತ್ತಿನ ಮೇಲೆ ನಿಲ್ಲದ ಜೋಲಿತು!

ಆಳುಗಳು ಹಾಗು ಜೀತದಾಳುಗಳು ತಮ್ಮ ಒಡೆಯರನ್ನು ಬಿಟ್ಟು ಹೋಗುತ್ತಿರಲಿಲ್ಲ, ಅದು ಸುಲಭವೂ ಆಗಿರಲಿಲ್ಲ. ಒಂದು ಕೇರಿಯ ಜೀತದಾಳು ಬೇರೆ ಕೇರಿಯ ಭೂಮಾಲಿಕರ ಬಳಿ ಕೆಲಸಕ್ಕೆ ಸೇರಬೇಕೆಂದರೆ ಅವರು ಪೂರ್ವದ ಒಡೆಯರ ಬಳಿ ಇದ್ದ ಅವನ ಸಾಲವನ್ನೆಲ್ಲ ತೀರಿಸಬೇಕಿತ್ತು. ಆಗ ಆಳು ಹೊಸ ಒಡೆಯರ ಬಳಿ ಮತ್ತೆ ಜೀತದಾಳಾಗಿಯೇ ಇರುತ್ತಿದ್ದ. ಮಧ್ಯೆ ಮತ್ತೆ ಮತ್ತೆ ಒಡೆಯರಿಂದ ಸಾಲ ಪಡೆಯುತ್ತಿದ್ದುದರಿಂದ ಜೀತದಿಂದ ಅವರಿಗೆ ಮುಕ್ತಿಯೇ ಇರಲಿಲ್ಲ. ಜೀತ ವಂಶಪಾರಂಪರ್ಯವಾಗಿತ್ತು.

'ದೇವಯ್ಯನಿಗೆ ಸೈಕಲ್ ಕಲಿಸುವಾಗ ದೊಡ್ಡಬೀರ ಮತ್ತು ಬಚ್ಚರು ಎತ್ತಿನ ಗಾಡಿಯ ಥರ ಮಾಡಿದ ನೊಗಕ್ಕೆ ಹೆಗಲು ಕೊಟ್ಟು ತಿರುಗುವ ಪ್ರಸಂಗ ಜೀತದ ಹಾಗೂ ಶೋಷಣೆಯ ಕ್ರೌರ್ಯದ ಪರಮಾವಧಿ ಎಷ್ಟು ಭೀಕರ' ಎಂದು ಕರೀಗೌಡ ಬೀಚನಹಳ್ಳಿ ಅವರು ಅಭಿಪ್ರಾಯ ಪಡುತ್ತಾರೆ. (2004:23)

ಜೀತದಿಂದ ತಪ್ಪಿಸಿಕೊಳ್ಳಬೇಕೆಂದರೆ ಬೇರೆ ಸೀಮೆಗೆ ಓಡಿಹೋಗುವುದೊಂದೇ ಉಪಾಯ. ಕೆಲಸ ದಾಳುಗಳಿಗೆ ಒಬ್ಬ ಭೂಮಾಲಿಕನಿಂದ ಮತ್ತೊಬ್ಬನಲ್ಲಿ ಹೋಗುವುದು ಅತಿ ದೈನ್ಯತೆಯೆಡೆಗೆ ಸಾಗು ವಂಥದಾಗಿತ್ತು.

ಜೀತದಾಳುಗಳ ಸುಖದುಃಖಕ್ಕೆ ಒಡೆಯರು ಸಹಾಯ ಮಾಡುತ್ತಿದ್ದರು. ಪಿಜಿಣ ಸತ್ತಾಗ ಅವನ ಕರ್ಮ ಕ್ರಿಯೆಯನ್ನು ಮಾಡಲು ಕೋಣೂರು ರಂಗಪ್ಪಗೌಡರು ಸಹಾಯ ಮಾಡಿದರು.

ಗುತ್ತಿ ತಿಮ್ಮಿಯರ ಮದುವೆ ನಂತರ ಸಾಬರೊಡನೆ ನಡೆದ ಜಗಳದ ವಿಷಯದಲ್ಲಿ ಪೋಲಿಸಿನವರು ಗುತ್ತಿಯನ್ನು ಸೆರೆ ಹಿಡಿದರು. ಆಗ ಭರಮೈ ಪೋಲಿಸರಿಗೆ 'ಕಪ್ಪ ಕಾಣಿಕೆ'ಯನ್ನು ಅರ್ಪಿಸಿದನು. ಅಲ್ಲದೆ ಗುತ್ತಿ ಪೋಲಿಸರಿಂದ ತಪ್ಪಿಸಿಕೊಂಡು ಬಂದಾಗ ಅವನಿಗೆ ಕೊಪ್ಪದ ಸೀಮೆ, ಮುತ್ತೂರು ಸೀಮೆ ಕಡೆ ಓಡಿ ಹೋಗಲು ಸಲಹೆ ಕೊಡುತ್ತಾರೆ.

ಕುವೆಂಪು ಅವರ 'ಯಾರೂ ಅರಿಯದ ವೀರ' ಮತ್ತು 'ಸಾಲದ ಮಗು' ಈ ಕಥೆಗಳಲ್ಲಿ ಆಳುಗಳನ್ನು ಜಮೀನ್ದಾರರು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಚಿತ್ರಿಸಿದ್ದಾರೆ.

'ಸಾಲದ ಮಗು' ಜೀತ ಪದ್ಧತಿಯ ಕ್ರೌರ್ಯ ಹೇಳುವ ಕಥೆ. ಎಂಟ್ಹತ್ತು ವರ್ಷದ ಎಳೆಯ ಹುಡುಗ ಸುಬ್ಬ, ತಂದೆತಾಯಿಯರನ್ನು ಕಳೆದುಕೊಂಡ ತಬ್ಬಲಿ ತನ್ನ ತಂದೆ ಮಾಡಿದ್ದ ಮುನ್ನೂರು ರೂಪಾಯಿ ಸಾಲಕ್ಕೆ ರಂಗಪ್ಪಗೌಡರಲ್ಲಿ ಜೀತದಾಳಾಗಿ ಇರಬೇಕಾಗುತ್ತದೆ.

ಅವನ ಪರಿಸ್ಥಿತಿ ದಾರುಣವಾಗುತ್ತದೆ. ಮಳೆಗಾಲದಲ್ಲಿ ಸರಿಯಾಗಿ ಹೊದೆಯಲೂ ಕಂಬಳಿ ಇರುವುದಿಲ್ಲ. ನಿರ್ದಯಿಯಾದ ರಂಗಪ್ಪಗೌಡ ಆ ಸಣ್ಣ ಹುಡುಗನ್ನು ಹೊಡೆದೆಬ್ಬಿಸಿ ಮಳೆ, ಗಾಳಿ, ಗುಡುಗು, ಸಿಡಿಲುಗಳ ನಡುವೆ ಗದ್ದೆಯಲ್ಲಿ ಹಾಕಿದ ಕೂಣೆಯನ್ನು ನೋಡಿಕೊಂಡು ಬರಲು ಕಳಿಸುತ್ತಾನೆ.

ಚಳಿಮಳೆಯಿಂದ ಭೋರ್ಗರೆಯುವ ರಾತ್ರಿಯಲ್ಲಿ ಮೀನಿನ್ನು ಹಿಡಿಯಲು ಹಾಕಿದ್ದ ಕೂಣಿ ಬಳಿ ಹೋಗಿ, ಕೂಣೆಯಲ್ಲಿದ್ದ ಕೃಷ್ಣಸರ್ಪ ಕಚ್ಚಿ ಸಾವನ್ನಪ್ಪುತ್ತಾನೆ. ಸುಬ್ಬ ಸತ್ತು ಬಿದ್ದಿರುವುದನ್ನು ಕಂಡು ರಂಗಪ್ಪಗೌಡ ತನ್ನ ಮುನ್ನೂರು ರೂಪಾಯಿ ಮನೆಗೆ ಬಂತು ಎಂದು ವ್ಯಂಗ್ಯದಿಂದ ಹೇಳುತ್ತಾರೆ. ಅವರಿಗೆ ತಮ್ಮ ಹಣದ ಬಗ್ಗೆಯೇ ಯೋಚನೆ ಹೊರತು ಸಣ್ಣ ಹುಡುಗನ ಬಗ್ಗೆ ಕರುಣೆಯಿಲ್ಲ.

'ಯಾರೂ ಅರಿಯದ ವೀರ' ಕಥೆಯಲ್ಲಿ ಮಲೆನಾಡಿಗೆ ಜಡಿಮಳೆ ಬಂದು ತುಂಗಾ ನದಿಯಲ್ಲಿ ಪ್ರವಾಹ ಉಕ್ಕೇರುತ್ತದೆ. ಶಿವನೂರಿನ ಸುಬ್ಬಣ್ಣನ ಮನೆ ಪ್ರವಾಹದ ದಾಳಿಗೆ ಒಳಗಾಗುವ ಸೂಚನೆ ಕಂಡಾಗ ಸಂಸಾರ ಸಮೇತ ದೋಣಿಯಲ್ಲಿ ಹೊರಡುತ್ತಾರೆ. ಪ್ರವಾಹದ ರಭಸಕ್ಕೆ ನದಿಯ ಮಧ್ಯದಲ್ಲಿ ಭಾರವಾದಂತಾಗಿ ದೋಣಿ ಮುಳುಗಿ, ಸುಬ್ಬಣ್ಣನ ಇಡೀ ಸಂಸಾರವೇ ನೀರು ಪಾಲಾಗುವ

ಸ್ಥಿತಿಯಲ್ಲಿರುತ್ತದೆ. ಆಗ ಅವರು ಆಶ್ರಯ ಕೊಟ್ಟ ಆಳು ಲಿಂಗ ಅವರ ರಕ್ಷಣೆಗೆ ಬರುತ್ತಾನೆ. ತಾನೇ ಯಾರಿಗೂ ತಿಳಿಯದಂತೆ ಪ್ರವಾಹದ ನದಿಗೆ ಹಾರಿ, ದೋಣಿ ಸರಾಗವಾಗಿ ಮುಂದೆ ಹೋಗುವಂತೆ ಮಾಡುತ್ತಾನೆ. ದಡ ತಲುಪಿದ ಸುಬ್ಬಣ್ಣಗೌಡರು ಲಿಂಗನಿಲ್ಲವೆಂದು ತಿಳಿದು 'ನಮ್ಮ ಮನೆಯ ಒಂದು ಬೆಳಕೇ ಹೋಯಿತು' ಎಂದು ಪ್ರಾಮಾಣಿಕವಾಗಿ ಪ್ರಲಾಪಿಸುತ್ತಾರೆ.

ಹೀಗೆ ಗೌಡರು ಮತ್ತು ಆಳಿನ ಸಂಬಂಧ ಕೆಲವೊಮ್ಮೆ ಕ್ರೌರ್ಯದಿಂದಿದ್ದರೆ ಕೆಲವೊಮ್ಮೆ ಮಾನವೀಯ ಸಂಬಂಧಗಳ ಔದಾರ್ಯತೆಯನ್ನು ಹೊಂದಿತ್ತು.

### 4.5. ಜೀತದಾಳು:

ಇದಕ್ಕೆ ಉದಾಹರಣೆ ಕೆಳ ಕಾನೂರಿನ ಅಣ್ಣಯ್ಯಗೌಡರು. ಇವರು ತಮ್ಮ ಮಗ ಓಬಯ್ಯ ಹಾಗು ಏಳೆಂಟು ವರ್ಷದ ಮಗಳೊಡನೆ ಕಾನೂರನ್ನು ಬಿಟ್ಟು ಬೇರೆ ಕಡೆಗೆ ಕೆಲಸ ಮಾಡಲು ಹೋದರು. ಅವರ ಅನುಭವವು ಕಾದಂಬರಿಯಲ್ಲಿ ಈ ರೀತಿಯಲ್ಲಿದೆ.

'(ಅಣ್ಣಯ್ಯಗೌಡರು ಆಶ್ರಯವೊಂದನ್ನು ಹುಡುಕುತ್ತ ಮುಂದುವರಿದರು)... ಆಶ್ರಯ ದೊರೆಯುವುದಂತಿರಲಿ, ಹೊಟ್ಟೆಗೆ ಸಿಕ್ಕುವುದೂ ಒಮ್ಮೊಮ್ಮೆ ಬಹು ಪ್ರಯಾಸವಾಯಿತು. ಅಲ್ಲಿ ಇಲ್ಲಿ ಅಲೆದು ಒಂದು ತಿಂಗಳ ಮೇಲೆ ಮೇಗರವಳ್ಳಿಗೆ ಹೋಗಿ, ಅಲ್ಲಿ ಒಬ್ಬ ಹೆಗ್ಗಡೆಯವರ ಮನೆಯಲ್ಲಿ ಸಂಬಳಕ್ಕೆ ನಿಂತರು. ಜಿಪುಣರೆಂದು ಪ್ರಸಿದ್ಧರಾಗಿದ್ದರೂ ಅವರು ಓಬಯ್ಯನನ್ನು ತಿಂಗಳಿಗೆ ಒಂದು ರೂಪಾಯಿನ ಸಂಬಳದಂತೆ ಕೆಲಸಕ್ಕೆ ನೇಮಿಸಿಕೊಂಡರು. ಅಣ್ಣಯ್ಯಗೌಡರಿಗೆ ಕೆಲಸಕ್ಕೆ ಬಂದ ದಿನ ಪಡಿ ಕೊಡಲು ಮಾತ್ರ ಒಪ್ಪಿದರು. ಅಂತೂ ಅಲ್ಲಿ ಮಳೆಗಾಲ ಕಳೆಯುವುದೇ ಕಷ್ಟವಾಯಿತು. ಆ ಹೆಗ್ಗಡೆಯವರು ಸಂಬಳ ಕೊಡುವ ವಿಚಾರದಲ್ಲಿ ಬಹಳ ಜಿಪುಣರಾಗಿದ್ದರೂ ಕೆಲಸ ತೆಗೆದುಕೊಳ್ಳುವುದರಲ್ಲಿ ಅತ್ಯಂತ ಉದಾರಿಯಾಗಿದ್ದರು. ಹುಡುಗರು ಮುದುಕರು ಎಂಬ ಪಕ್ಷಪಾತವಿಲ್ಲದೆ ಎಲ್ಲರಿಂದಲೂ ಬೆನ್ನು ಮುರಿದು ಕೆಲಸ ಮಾಡಿಸುತ್ತಿದ್ದರು. ಅಷ್ಟು ಮಾಡಿದರೂ ಪ್ರತಿ ಸಾಯಂಕಾಲವೂ ಬೈಗುಳ ತಪ್ಪುತ್ತಿರಲಿಲ್ಲ, ಕುಡಿಯುವುದರಲ್ಲಿ ಹೆಗ್ಗಡೆಯವರ ಮುಂದೆ ಚಂದ್ರಯ್ಯಗೌಡರು ಯಃಕಶ್ಚಿತರಾಗಿದ್ದರು.' (ಕುವೆಂಪು:2006ಬ:502)

ಮತ್ತೊಂದು ಕಡೆ ಬ್ರಾಹ್ಮಣ ಸಾಹುಕಾರರಲ್ಲಿ ಕೆಲಸಕ್ಕೆ ಸೇರಿದಾಗ ಇಡಿ ಊರಿಗೆ ಮಾರಿ ಖಾಯಿಲೆ ಬಂದು ಅದಕ್ಕೆ ಕೆಳಕಾನೂರಿನ ಅಣ್ಣಯ್ಯಗೌಡರೂ ಬಲಿಯಾದರು. ಅನಂತರ ಓಬಯ್ಯನಿಗೂ ಮೈಲಿಯಾಗಿ, ಅವರ ದೆಸೆಯಿಂದ ಒಕ್ಕಣ್ಣಾಯಿತು. ಅನಂತರ ಅವನು ಸಂತೋಷದಿಂದ ಮರಳಿ ಕಾನೂರಿಗೆ ಬರಲು ಒಪ್ಪಿದನು.

ಕುಟುಂಬದ ಆಸ್ತಿ ಹಂಚಿಕೆಯ ಸಂದರ್ಭದಲ್ಲಿ ಜೀತದಾಳುಗಳನ್ನು ಸಹ ಪಾಲು/ಹಿಸ್ಸೆ ಮಾಡಿಕೊಳ್ಳುತ್ತಿದ್ದರು. ಜೀತದಾಳುಗಳು ಯಾರ ಪರ ವಹಿಸುವರೋ ಅವರ ಜೊತೆ ಹೋಗಬಹುದಾಗಿತ್ತು.

ಜೀತದಾಳುಗಳ ದಯನೀಯ ಸ್ಥಿತಿಯನ್ನು ಅವರ ವೇಷಭೂಷಣಗಳೂ ಪ್ರತಿಫಲಿಸುತ್ತವೆ. ವರ್ಷಕ್ಕೆ ಒಮ್ಮೆ ಯುಗಾದಿ ಹಬ್ಬದಲ್ಲಿ ಮಾತ್ರ ಒಡೆಯರಿಂದ ಇವರಿಗೆ ಬಟ್ಟೆ ದೊರಕುತ್ತಿತ್ತು. 'ಕಾನೂರು ಹೆಗ್ಗಡಿತಿ'ಯ ಕಾನೂರಿನ ಜೀತದಾಳು ಬೇಲರ ಬೈರನ ಚಿತ್ರಣ ಹೀಗಿದೆ.

"... ಅವನ ಕೊಳಕಾಗಿದ್ದ ಕರಿಯ ದೇಹದಲ್ಲಿ ಮೊಳಕಾಲಿನವರೆಗಿದ್ದ ಸೊಂಟದ ಪಂಚೆಯೊಂದಲ್ಲದೆ ಬೇರೆ ನೂಲು ಎಂಬ ಪದಾರ್ಥನೆ ಇರಲಿಲ್ಲ. ಮುಂದೆಲೆಯಲ್ಲಿ ಕೂದಲು ಹುಟ್ಟಿದ್ದರೂ ಲಾಳದಾಕಾರ ವಾಗಿ ಕೆತ್ತಿದ್ದ ಚೌರದ ಗುರುತು ಕಾಣುತ್ತಿತ್ತು. ಅವನ ಜುಟ್ಟು ಕಟ್ಟಿದ್ದರೂ ಕಾಲಾಂತರದಿಂದ ಎಣ್ಣೆ ಕಾಣದೆ ಒರಟಾಗಿ ಸಿಕ್ಕು ಸಿಕ್ಕಾಗಿ ಕೆದರಿಕೊಂಡಿತ್ತು. ಗಡ್ಡ ಮೀಸೆಗಳು ಅಂಗುಲ ಅಂಗುಲ ಬೆಳೆದಿದ್ದವು. ಕಿವಿಯಲ್ಲಿ ಒಂಟಿಗಳೂ, ತೋಳಿನಲ್ಲಿ ಕರಿಯ ದಾರದಿಂದ ಬಿಗಿದು ಕಟ್ಟಿದ್ದ ತಾಮ್ರದ ತಾತಿಯೂ ಇದ್ದುವು. ಮಲೇರಿಯಾದ ಪ್ರಭಾವ ಹೊಟ್ಟೆಯ ಗಾತ್ರದಲ್ಲಿ ಮೈದೋರಿದ್ದರೂ ಅವನು ಆಳುತನದಲ್ಲೇನೂ ಕಡಿಮೆಯಾಗಿರಲಿಲ್ಲ. ಅವನ ಮೈ ಮೇಲಿದ್ದ ಸುಟ್ಟ ಗಾಯದ ಕಲೆಗಳು ಹಳ್ಳಿಯ ವೈದ್ಯದ ರಾಕ್ಷಸೀ ಪ್ರಭಾವಕ್ಕೆ ಪ್ರಮಾಣವಾಗಿದ್ದುವು." **(ಕುವೆಂಪು:2006ಅ:44)**

### 4.4.1. ಕಾರಣಗಳು :

ಇಂತಹ ವಿಶಿಷ್ಟ ಜೀತ ಪದ್ಧತಿಗೆ ಕಾರಣಗಳ ಬಗ್ಗೆ ಯೋಚಿಸಿದಾಗ ಕೆಲವು ಮುಖ್ಯ ಕಾರಣಗಳು ಕಾಣುತ್ತವೆ :

1. ಜನಸಂಖ್ಯೆ
2. ಆರೋಗ್ಯ
3. ಮಹಿಳೆ ಮತ್ತು ಶಿಶು ಮರಣ ಪ್ರಮಾಣ.
4. ಮೌಢ್ಯ/ಅಜ್ಞಾನ
5. ಮಲೆನಾಡಿನ ಪರಿಸರ

### 4.4.2. ಜನಸಂಖ್ಯೆ :

ಸುಧಾರಿತ ಸಾರಿಗೆ ಸಂಪರ್ಕ, ತೀರ ಪ್ರದೇಶ, ಬಂದರುಗಳು, ವ್ಯಾಪಾರ ಸ್ಥಳ, ಮಾರುಕಟ್ಟೆಯ ಸೌಲಭ್ಯ, ನಗರಗಳು, ಬಯಲು ಪ್ರದೇಶಗಳು, ಜೀವನೋಪಾಯಕ್ಕೆ ಸುಲಭ ಸೌಕಾರ್ಯಗಳುಳ್ಳ ಪ್ರದೇಶ ಗಳು ವಿವಿಧ ಆರ್ಥಿಕ ಚಟುವಟಿಕೆಗಳು ಇವೇ ಮುಂತಾದ ಅಂಶಗಳು ಜನಸಾಂದ್ರತೆಯ ಮೇಲೆ ಪ್ರಭಾವ ಬೀರುತ್ತವೆ. ಹೀಗೆ ಅನುಕೂಲಕರವಾದ ಭೌಗೋಳಿಕ ಹಿನ್ನೆಲೆ ಒಂದು ಪ್ರದೇಶದ ಜನಸಾಂದ್ರತೆಗೆ ಕಾರಣ ವಾಗುತ್ತದೆ. ಮಲೆನಾಡು ಈ ಎಲ್ಲ ಅಂಶಗಳಿಂದಲೂ ವಂಚಿತವಾಗಿತ್ತು. ಅಲ್ಲದೆ ವಾಯುಗುಣವೂ ಅಷ್ಟು ಹಿತಕರವಾಗಿರಲಿಲ್ಲ. ವಿಪರೀತ ಮಳೆಯಿಂದ ಬೆಳಗೂ ಹಾನಿಯಾಗುವುದಲ್ಲದೆ, ಜನರು ಬೇರೆಡೆಯಿಂದ ಬಂದು ವಾಸಿಸುವುದೂ ದುಸಾಧ್ಯವನ್ನಾಗಿ ಮಾಡಿತ್ತು.

ಜಮೀನ್ದಾರಿ ವ್ಯವಸ್ಥೆ ಪ್ರಧಾನವಾಗಿದ್ದ ಮಲೆನಾಡಿನಲ್ಲಿ ಗದ್ದೆ ತೋಟದ ಕೆಲಸಕ್ಕೆ ಜನರ ಅವಶ್ಯಕತೆ ಬಹಳ ಇತ್ತು. ಆದರೆ ದಟ್ಟ ಕಾಡಿನ ಮಧ್ಯೆ ಇದ್ದ ಈ ಪ್ರದೇಶಗಳಲ್ಲಿ ಮಲೇರಿಯದಂತಹ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದವು. ಕಾಡಿನ ನಡುವೆ ಇದ್ದ ಹಳ್ಳಿಗಳಿಗೆ ನಗರ ಪಟ್ಟಣಗಳಲ್ಲಿರುವ ವೈದ್ಯಕೀಯ ಸೌಲಭ್ಯ

ದೊರಕುತ್ತಿರಲಿಲ್ಲ. ಹಾಗಾಗಿ ಸರಿಯಾದ ಚಿಕಿತ್ಸೆ ಇಲ್ಲದೆ ಜನರು ಎಳೆಯ ವಯಸ್ಸಿನಲ್ಲೋ, ಯೌವ್ವನಾವಸ್ಥೆಯಲ್ಲೋ ಸಾವನ್ನಪ್ಪುತ್ತಿದ್ದರು. ದುಡಿಯುವ ಜನರ ಸಂಖ್ಯೆಯಲ್ಲಿ ಯಾವಾಗಲೂ ಇಳಿಮುಖವಿರುತ್ತಿತ್ತು.

ಇದು ಕೇವಲ ಕೆಳವರ್ಗದ ಜನರಲ್ಲಿರುತ್ತಿದ್ದ ತೊಂದರೆ ಅಲ್ಲ. ಭೂಮಾಲಿಕರಿಗೂ ಇದು ಅನ್ವಯಿಸುತ್ತಿತ್ತು. ಕುವೆಂಪು ಅವರು ತಮ್ಮ ಆತ್ಮಕತೆ 'ನೆನಪಿನ ದೋಣಿಯಲ್ಲಿ' ದಾಖಲಿಸಿದ ಕೆಲವು ಘಟನೆಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ.

''ನಾನು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದಂದಿನಿಂದ ಪ್ರತಿ ದಸರಾ ಮತ್ತು ಬೇಸಿಗೆ ರಜೆಯಲ್ಲಿ ಮನೆಗೆ ಹೋದಾಗೆಲ್ಲ ಯಾರಾದರೊಬ್ಬರು ಮನೆಯವರು ತೀರಿ ಹೋಗಿರುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ, ನಾನು ಎಂ.ಎ. ತೇರ್ಗಡೆಯಾಗಿ ಮನೆಗೆ ಹಿಂದಿರುಗಿದಂದು ಮನೆಯ ಮಂದಿ ಮುಕ್ಕಾಲು ಪಾಲಗಿಂತಲೂ ಹೆಚ್ಚಾಗಿಯೆ ಖಾಲಿಯಾಗಿದ್ದರು''. **(ಕುವೆಂಪು:2005ಅ:408)**

''ಶ್ರಾವಣ ಮಾಸದಲ್ಲಿ ಮೃತಪಟ್ಟದ್ದು... ಸೀತಮ್ಮನವರು ಸ್ವರ್ಗಸ್ಥರಾಗುವ ಮೊದಲು ಅಂದರೆ ಎಂಟು ದಿನ ಮುಂಚೆ ಬಸಪ್ಪ ಅಜ್ಜಯ್ಯ ತೀರಿಕೊಂಡಿದ್ದರು. ಅವರಿಬ್ಬರ ಉತ್ತರಕ್ರಿಯಾದಿಗಳನ್ನು ಒಟ್ಟಿಗೆ ಮಾಡಿದ್ದರು''. **(ಕುವೆಂಪು:2005ಅ:409)**

ಹೀಗೆ ಸಾವು ಯಾವಾಗೆಂದರೆ ಆವಾಗ, ಯಾರಿಗೆಂದರೆ ಅವರಿಗೆ ವಯೋಮಾನದ ಮಿತಿಯಿಲ್ಲದೆ ಬರುತ್ತಿತ್ತು. ಶ್ಲೇಷ್ಮ ಜ್ವರ, ಮಲೇರಿಯ ಮುಂತಾದ ಖಾಯಿಲೆಗಳು ಉಲ್ಬಣಗೊಂಡು ಸರಿಯಾದ ಶುಶ್ರೂಷೆ ಇಲ್ಲದೆ ಜನ ಮರಣ ಹೊಂದುತ್ತಿದ್ದರು. ಇದರಿಂದಾಗಿ ಮಲೆನಾಡಿನ ಜನಸಂಖ್ಯೆ ಕಡಿಮೆ ಇತ್ತು. ಆದ್ದರಿಂದ ದೊರೆತೆ ಬಡ ಆಳುಗಳ ಪರಿಸ್ಥಿತಿಯ ಲಾಭ ಪಡೆದು ಸಾಹುಕಾರರು, ಜಮೀನ್ದಾರರು ಅವರನ್ನು ತಮ್ಮ ಜೀತದಾಳುಗಳನ್ನಾಗಿ ಮಾಡಿಕೊಳ್ಳುತ್ತಿದ್ದರು.



### 4.4.3. ಆರೋಗ್ಯ:

ಮಲೆನಾಡು ಸುಮಾರು 300 ಇಂಚು ಮಳೆಯನ್ನು ಪಡೆಯುತ್ತಿದ್ದ ಪ್ರದೇಶ. ದಟ್ಟ ಕಾಡು, ಜೌಗು ಪ್ರದೇಶಗಳನ್ನು ಹೊಂದಿದ್ದು ಮಲೇರಿಯಾದಂಥ ಭೀಕರ ಕಾಯಿಲೆಯ ತಾಣವಾಗಿತ್ತು.

ಕುವೆಂಪು ಅವರು ಮೈಸೂರಿನಿಂದ ಮಲೆನಾಡಿಗೆ ಬಂದಾಗಲೆಲ್ಲ ತಮಗೆ ಮಲೇರಿಯಾ ಬರುತ್ತಿತ್ತು ಎಂದು ಸ್ಮರಿಸಿಕೊಳ್ಳುತ್ತಾರೆ.

''ಆದರೂ ಮಲೆನಾಡಿಗೆ ಬಂದಾಗಲೆಲ್ಲ ಮಲೇರಿಯಾ ಕಾಣಿಸಿಕೊಳ್ಳುತ್ತಿತ್ತು. ಔಷಧಿ ಕುಡಿದು ಶಮನವಾಗುತ್ತಿತ್ತು. ಶಮನವಾಗುವುದೆಂದರೆ ಏನು? ಮಲೇರಿಯಾ ಕ್ರಿಮಿಗಳು ನಾಶವಾಗುತ್ತಿರಲಿಲ್ಲ! ಸ್ಥಳ ಬದಲಾಯಿಸುತ್ತಿದ್ದವಷ್ಟೆ! ರಕ್ತದಿಂದ ತೊಲಗಿ ಗುಲ್ಮದಲ್ಲಿ ಆಶ್ರಯ ಪಡೆಯುತ್ತಿದ್ದವು. ಜ್ವರಗಡ್ಡೆ ಯಾವಾಗಲೂ ಇದ್ದೆ ಇರುತ್ತಿತ್ತು. ಜೀವಾಣುಗಳಿಗೆ ಸುಸಮಯ ಒದಗಿದಾಗ ಮತ್ತೆ ರಕ್ತಕ್ಕೆ ಸೇರಿ ಜ್ವರ ಕಾಣಿಸಿಕೊಳ್ಳುತ್ತಿತ್ತು''. **(ಕುವೆಂಪು:2005ಬ:705)**

ಕ್ರಾನಿಕ್ ಮಲೇರಿಯಾದ ಕಾರಣ ಕುವೆಂಪು ಅವರು ಐದಾರು ದಿನಗಳು ಆಸ್ಪತ್ರೆಯಲ್ಲಿಯೇ ಇರಬೇಕಾಗಿ ಬಂತು. ವರ್ಷದ ಒಂದು ರಜೆಯಲ್ಲಿ ಮಲೆನಾಡಿಗೆ ಹೋದಾಗ ಆಗುತ್ತಿದ್ದ ಮಲೇರಿಯಾ ಈ ರೀತಿಯಲ್ಲಿ ಅವರನ್ನು ಬಾದಿಸಿರಬೇಕಾದರೆ, ವೈದ್ಯಕೀಯ ಶುಶ್ರೂಷೆ ಇಲ್ಲದೆ ಅಲ್ಲೇ ಇರಬೇಕಾದ ಜನರ ಪಾಡನ್ನು ಊಹಿಸಬಹುದು.

ಒಂದು ತಿಂಗಳ ಹಿಂದೆಯಷ್ಟೇ ಆರೋಗ್ಯದಿಂದಿದ್ದು ತನ್ನ ತವರು ಮನೆಗೆ ಹೋಗಿ ಬಂದ ಕುವೆಂಪು ಅವರ ತಾಯಿ ಸೀತಮ್ಮ ಶ್ಲೇಷ್ಮಜ್ವರಕ್ಕೆ ತುತ್ತಾಗಿ ಒಂದು ತಿಂಗಳಷ್ಟರಲ್ಲೇ ತೀರಿಕೊಂಡಿದ್ದರು.

ಕುವೆಂಪು ಮಲೆನಾಡಿನ ಮಲೇರಿಯಾ ಬಗ್ಗೆ ಹೀಗೆ ಬರೆಯುತ್ತಾರೆ. 'ಮಲೆನಾಡು ಮನೋಹರವಾಗಿದೆ; ಆದರೆ ಮಲೇರಿಯಾ ಪ್ರಾಣಹಾರಿಯಾಗಿದೆ!' (ಕುವೆಂಪು:1998:15)

ಮಲೇರಿಯಾದ ಭೀಕರ ಪರಿಣಾಮವನ್ನು ನಾವಿಲ್ಲಿ ಊಹಿಸಬಹುದು. ಅಲ್ಲದೆ ರೇಷ್ಮೆಕಾಯಿಲೆ, ಶ್ಲೇಷ್ಮಜ್ವರ ಮುಂತಾದ ಖಾಯಿಲೆಗಳಿಂದ ಜನರು ಬಳಲುತ್ತಿದ್ದರು. ಅದಕ್ಕೆ ಸೂಕ್ತ ಚಿಕಿತ್ಸೆ ನೀಡದೆ ಜನರು ಸಾವನ್ನಪ್ಪುತ್ತಿದ್ದರು.

'ಕಾನೂರು ಹೆಗ್ಗಡತಿ'ಯಲ್ಲಿ ಬರುವ ಸಾಲುಗಳನ್ನು ಗಮನಿಸಬೇಕು. ಕಾನೂರು ಮನೆಯ ವರ್ಣನೆ ಮಾಡುತ್ತ ಆ ಮನೆ ಮಂದಿ ಸಂಖ್ಯೆಯ ಬಗ್ಗೆ ಹೀಗೆ ಹೇಳುತ್ತಾರೆ.

''ಆ ಮನೆಯಲ್ಲಿ ಮೂವತ್ತು ನಾಲ್ವತ್ತು ಮಂದಿ ನಿರಾತಂಕವಾಗಿ ವಾಸಮಾಡಬಹುದಾಗಿತ್ತು. ಈ ಕಥೆಯ ಕಾಲಕ್ಕೆ ಪೂರ್ವದಲ್ಲಿ ಗಂಡಸರು, ಹೆಂಗಸರು, ಮಕ್ಕಳು ಎಲ್ಲಾ ಇಪ್ಪತ್ತೈದು ಮೂವತ್ತು ಮಂದಿ ಮನೆಯವರೂ ಹತ್ತು ಹದಿನೈದು ಜನ ಸೇವಕರೂ ಒಟ್ಟು ನಾಲ್ವತ್ತು ನಾಲ್ವತ್ತೈದು ಜನಗಳ ಮಟ್ಟಿಗೆ ಮನೆಯನ್ನೆಲ್ಲ ತುಂಬಿರುತ್ತಿದ್ದರಂತೆ. ಒಟ್ಟು ಕುಟುಂಬದವರಾಗಿದ್ದರಿಂದ ಹಾಗಿದ್ದುದರಲ್ಲೇನೂ ಆಶ್ಚರ್ಯ ವಿಲ್ಲ. ಆದರೆ ಕೆಲವು ವರ್ಷಗಳ ಹಿಂದೆ ಮನೆಗೆ ಮಾರಿಯಮ್ಮನು - ಸಿಡುಬು ರೋಗ ಕಾಲಿಟ್ಟು ಅನೇಕರನ್ನು ಆಹುತಿ ತೆಗೆದುಕೊಂಡಿದ್ದರಿಂದ ಈಗ ಆ ಕುಟುಂಬದಲ್ಲಿ ಏಳು ಜನರು ಮಾತ್ರ ಇದ್ದರು. ಅದರಲ್ಲಿಯೂ ಹೂವಯ್ಯ ರಾಮಯ್ಯರು ಓದಲು ಹೋಗಿದ್ದರಿಂದ ತತ್ಕಾಲದಲ್ಲಿ, ಆಳುಗಳನ್ನು ಬಿಟ್ಟರೆ, ಮನೆಯವರಾಗಿದ್ದವರು ಐದೇ ಮಂದಿ''. (ಕುವೆಂಪು:2006ಅ:33)

ಮಲೆನಾಡಿನ ಗ್ರಾಮೀಣ ಜನ ಅದರಲ್ಲೂ ಕೆಳವರ್ಗದವರು ನೈರ್ಮಲ್ಯವನ್ನು ಕಾಪಾಡಿಕೊಳ್ಳುವತ್ತ ಗಮನ ಹರಿಸುತ್ತಿರಲಿಲ್ಲ. ಕೆಳಕಾನೂರು ಅಣ್ಣಯ್ಯಗೌಡರ ರೋಗಿಷ್ಠ ಹೆಂಡತಿ ವಾಂತಿ ವಾಕರಿಕೆ ತಲೆನೋವು ಜ್ವರಗಳಿಂದ ನರಳುತ್ತಿದ್ದಳು. ಕುಡಿಯಲು ನೀರು ಕೇಳಿದಾಗ ಆಕೆಯ ಮಗಳು ಕೊಡುವ ನೀರು '... ಅವರು ಬಾವಿಯಾಗಿ ಉಪಯೋಗಿಸುತ್ತಿದ್ದ ಗದ್ದೆಯ ಹೊಂಡದ್ದು. ಆ ಹೊಂಡದಲ್ಲಿ ಬಟ್ಟೆ ಒಗೆಯುವುದರಿಂದ ಮೊದಲುಗೊಂಡು ಎಲ್ಲ ಶೌಚಕಾರ್ಯಗಳು ನಡೆಯುತ್ತಿದ್ದುದರಿಂದ ಹಾವಸಿ ಹಬ್ಬಿ ನೀರು ಹಸುರುಗಟ್ಟಿತ್ತು. ಒಮ್ಮೊಮ್ಮೆ ಹಗಲು ಬಿಸಿಲಿನಲ್ಲಿ ಎಮ್ಮೆಗಳೂ ಅದರಲ್ಲಿ ಬಿದ್ದು ಹೊರಳಾಡುತ್ತಿದ್ದು ದರಿಂದ ಅದರಲ್ಲಿ ಸೆಗಣಿಯ ವಾಸನೆಯೂ ತುಂಬಿತ್ತು.' (ಕುವೆಂಪು:2006ಅ:81) ರೋಗದ ವಿಷಮಾ

ವಸ್ಥೆಯಲ್ಲಿ ಕುಡಿಯಲು ತಣ್ಣೀರು ಕೊಡಬಾರದು. ಕೊಟ್ಟರೂ ಇಂಥ ಕಲುಷಿತ ನೀರಿನಿಂದ ಆಗುವ ಅನಾಹುತವೇ ಹೆಚ್ಚು.

ತಾಯಿಯ ಸ್ಥಿತಿ ಹೀಗಿದ್ದರೆ, ಮಗಳದು ಮತ್ತೊಂದು ರೀತಿಯದಾಗಿತ್ತು. ಅವಳು ಸಹ ಅನಾರೋಗ್ಯ ದಿಂದ ಬಳಲುತ್ತಿದ್ದಳು. 'ಪದೇ ಪದೇ ಚಳಿ ಜ್ವರ ಬರುತ್ತಿದ್ದು, ಜ್ವರದ ಗಡ್ಡೆ ಬೆಳೆದು, ಸರಿಯಾದ ಆಹಾರ ವಾಗಲಿ ಗಾಳಿಯಾಗಲಿ ಶುಶ್ರೂಷೆ ಸುಖಗಳಾಗಲಿ ಇಲ್ಲದೆ ಕಲ್ಲಿನ ತಳದಲ್ಲಿ ಬೆಳೆಯುವ ಹುಲ್ಲಿನ ಕಣದಂತೆ ಇದ್ದಳು.' (ಕುವೆಂಪು:2006ಅ:80)

ಶುಚಿತ್ವದ ಕಡೆ ಗಮನಹರಿಸದ ಜನರು ಶುಚಿತ್ವವನ್ನು ಒಂದು 'ಷೋಕಿ'ಯಾಗಿ ಪರಿಗಣಿಸುತ್ತಿದ್ದರು. ಹೆಣ್ಣು ಮಕ್ಕಳು ದಿನವೂ ಸ್ನಾನ ಮಾಡಿ, ಜಡೆ ಹಾಕಿಕೊಂಡರೆ 'ಸೂಳೆಯರಂತೆ' ಎಂಬ ನಂಬಿಕೆ ಶ್ರೀಮಂತ ಅನಾಗರಿಕರಲ್ಲಿ ಇತ್ತೆಂದು ಕುವೆಂಪು ಅವರ ಆತ್ಮಕಥೆಯಲ್ಲಿ ತಿಳಿಸಲಾಗಿದೆ. (ಕುವೆಂಪು: 2005ಬ:1052) ಅಲ್ಲದೆ ಮೀಯುವುದೂ, ಬಟ್ಟೆ ಒಗೆಯುವುದರಿಂದ ಸಮಯ ಹಾಳಾಗುವುದು ಎಂಬ ಅನಿಸಿಕೆ ಸಹ ಇವರ ಅಶುಚಿತ್ವಕ್ಕೆ ಕಾರಣವಾಗಿರಬಹುದು.

### 4.4.4. ಮಹಿಳೆ ಮತ್ತು ಶಿಶು ಮರಣ ಪ್ರಮಾಣ :

ಮಲೆನಾಡಿನಲ್ಲಿ ನೈರ್ಮಲ್ಯದ ಕೊರತೆ, ಸೂಕ್ತ ವೈದ್ಯಕೀಯ ಚಿಕಿತ್ಸೆಯ ಕೊರತೆ, ಅಜ್ಞಾನ, ಮೌಢ್ಯ, ಸ್ವಾತಂತ್ರ್ಯಪೂರ್ವದಲ್ಲಿ ತಾಂಡವವಾಡುತ್ತಿತ್ತು. ಆದರೆ ಮಹಿಳೆಯರು ಇವುಗಳ ನೇರ ಪ್ರಭಾವಕ್ಕೆ ಒಳಗಾದರು ಮತ್ತು ಇದರಿಂದ ತಮ್ಮ ಆರೋಗ್ಯ, ಸ್ಥಿತಿಗತಿಗಳು ಕ್ಷೀಣಿಸಿದವು.

ಅಂದಿನ ಮಲೆನಾಡಿನಲ್ಲಿ ಭಾರಿ ಮಳೆಯಾಗುತ್ತಿದ್ದು ಮಲೇರಿಯಾ ಸರ್ವೇ ಸಾಮಾನ್ಯವಾಗಿತ್ತು. ಇದು ಮಹಿಳೆಯರ ಸಂಖ್ಯೆ ಕಡಿಮೆಯಾಗಲು ಒಂದು ಕಾರಣ. ಅಲ್ಲದೆ ಪುರುಷರ ದೌರ್ಜನ್ಯ, ಅನಾರೋಗ್ಯ ಮನೆಯ ಪರಿಸರ, ಆಚರಣೆಯಲ್ಲಿದ್ದ ಮೌಢ್ಯ ಇವೆಲ್ಲವೂ ಮಹಿಳೆಯರ ಮರಣ ಪ್ರಮಾಣ ಹೆಚ್ಚಾಗಲು ಕೊಡುಗೆಯಾದವು.

ಮಲೇರಿಯಾ ರೋಗದಿಂದ ಜನರು ನರಳುತ್ತಿದ್ದ ವಿಷಯ ಈ ಹಿಂದೆ ಹೇಳಲಾಗಿದೆಯಷ್ಟೆ. ಅದರೊಡನೆ ಶ್ಲೇಷ್ಮಜ್ವರ, ಒಡಲ ಜ್ವರ, ವಿಷಮಶೀತ ಜ್ವರದಿಂದಲೂ ಹೆಣ್ಣು ಮಕ್ಕಳು ಸಾವನ್ನಪ್ಪುತ್ತಿದ್ದರು. ಹುಟ್ಟಿದ ಮೊದಲನೆಯ ವರ್ಷದಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಉಳಿಯುವ ಸಾಧ್ಯತೆ ಹೆಚ್ಚಾಗಿ ದ್ದರೂ 15 ರಿಂದ 35 ವರ್ಷ ವಯೋ ಅಂತರದಲ್ಲಿ ಪುರುಷರಿಗಿಂತ ಸ್ತ್ರೀಯರು ಮರಣವನ್ನಪ್ಪುವ ಸಾಧ್ಯತೆಗಳು ಹೆಚ್ಚು. ಅದೂ ಅಲ್ಲದೆ ಚಿಕ್ಕ ವಯಸ್ಸಿನಲ್ಲಿಯೇ ಹೆಚ್ಚು ಮಕ್ಕಳನ್ನು ಪಡೆಯುವುದರಿಂದಲೂ ಮತ್ತು ಗರ್ಭಕ್ಕೆ ಸಂಬಂಧಿಸಿದ ರೋಗಗಳಿಗೆ ತುತ್ತಾಗಿ ಸಾವನ್ನಪ್ಪುವುದುರಿಂದಲೂ ಸ್ತ್ರೀಯರ ಸಂಖ್ಯೆ ಕಡಿಮೆ ಯಾಗುತ್ತದೆ. ಪ್ಲೇಗು, ಕಾಲರ ಮುಂತಾದ ಅಂಟು ಜಾಡ್ಯಗಳು ಪುರುಷರಿಗಿಂತ ಸ್ತ್ರೀಯರಿಗೆ ಹೆಚ್ಚು ಹರಡುವ ಸಾಧ್ಯತೆ ಇರುವುದರಿಂದ ಸ್ತ್ರೀಯರು ಹೆಚ್ಚು ಸಾವನ್ನಪ್ಪುತ್ತಾರೆ. (ನಾರಾಯಣ ಎಂ.:1979 :34)

ಕುವೆಂಪುರವರ ತಾಯಿ ಒಂದು ತಿಂಗಳ ಹಿಂದೆ ಚೆನ್ನಾಗಿದ್ದವರು. ಇದ್ದಕ್ಕಿದ್ದಂತೆ ಶ್ಲೇಷ್ಮಜ್ವರದಿಂದ ಮರಣ ಹೊಂದಿದ್ದರು.

'ಕಾನೂರು ಹೆಗ್ಗಡಿತಿ'ಯಲ್ಲಿ ಕೆಳಕಾನೂರಿನ ಅಣ್ಣಯ್ಯನ ನಾಲ್ಕನೆ ಹೆಂಡತಿ ರೋಗದಿಂದ ನರಳಿ ಸಾಯುವಳು.

ಇದಕ್ಕಿಂತ ಹೆಚ್ಚು ಬಲವಾದ ಕಾರಣ ಹೆರಿಗೆ. ಇದರಲ್ಲಿ ಮಲೆನಾಡಿಗರ ಮೌಢ್ಯ, ಅಜ್ಞಾನ, ಅವೈಜ್ಞಾನಿಕ ಪದ್ಧತಿ, ವೈದ್ಯಕೀಯ ಸೌಲಭ್ಯದ ವಂಚನೆ ಮುಂತಾದ ಅಂಶಗಳು ಬೆಳಕಿಗೆ ಬರುತ್ತವೆ.

ಕುವೆಂಪುರವರು ತಮ್ಮ ಹಿರಿಯ ತಂಗಿ ಹೆರಿಗೆಯಲ್ಲಿ ಶಿಶುವಿನೊಡನೆ ತೀರಿಕೊಂಡಿದ್ದರೆಂದು ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ.

ಹೆರಿಗೆಯಲ್ಲಿ ತೀರಿಕೊಂಡ ಮಹಿಳೆಯರ ವಿಷಯ ಕುವೆಂಪು ಅವರ ಕಾದಂಬರಿಗಳಲ್ಲಿ ಅನೇಕ ಕಡೆ ಬರುವುದು. ಅನೇಕ ವೇಳೆ ಬಾಣಂತಿಯರು ಹಸುಗೂಸುಗಳೊಡನೆ ಸಾವನ್ನಪ್ಪುತ್ತಿದ್ದರು.

(ಕಾನೂರು ಚಂದ್ರಯ್ಯಗೌಡರ) ಎರಡನೆಯ ಹೆಂಡತಿ ಪುಟ್ಟಮ್ಮ ವಾಸು ಇಬ್ಬರನ್ನು ಹೆತ್ತು ಮೂರನೆಯ ಹೆರಿಗೆಯಲ್ಲಿ ಶಿಶು ಸಮೇತ ದಿವಂಗತರಾದರು. (ಕುವೆಂಪು: 2006ಅ:34)

''ಕಿಟ್ಟಯ್ಯ ವಯಸ್ಸಿನಲ್ಲಿ ಇನ್ನೂ ಇಪ್ಪತ್ತೈದನ್ನೂ ದಾಟಿರಲಿಲ್ಲ. ಅಷ್ಟರಲ್ಲಿಯೇ ಅವನಿಗೆ ಎರಡು ಮದುವೆಗಳಾಗಿ ಇಬ್ಬರು ಹೆಂಡರೂ ತೀರಿಕೊಂಡಿದ್ದರು. ಮೊದಲನೆಯ ಹೆಂಡತಿಯಾಗಿ ಬಂದವಳು ಅವನ ಹದಿನೆಂಟನೆಯ ವಯಸ್ಸಿನಲ್ಲಿಯೇ ಒಂದನೆಯ ಹೆರಿಗೆಯ ಅನಂತರವೆ ತೀರಿಕೊಂಡಿದ್ದಳು. ಎರಡನೆಯವಳಿಗೆ ಒಂದು ಹೆಣ್ಣು ಹುಟ್ಟಿದ ಒಂದೂವರೆ ವರ್ಷದೊಳಗಾಗಿ ಮತ್ತೊಂದು ಗಂಡು ಹುಟ್ಟಿ, ಬಾಲೆ ಬಾಣಂತಿಯರು ಸತ್ತು ಹೋಗಿದ್ದರು''. (ಕುವೆಂಪು:2006ಬ:669)

ಹೂವಳ್ಳಿ ವೆಂಕಟ್ಟಣ್ಣನ ಹೆಂಡತಿ ಚಿನ್ನಮ್ಮ ತಾಯಿ ಸಹ ಐದನೆ ಹೆರಿಗೆಯಲ್ಲಿ ತೀರಿಕೊಂಡಿದ್ದಳು.

ಮಲೆನಾಡಿನ ಹೆರಿಗೆ ಪದ್ಧತಿಯ ಬಗ್ಗೆ ಕಡಿದಾಳು ರಾಮಪ್ಪಗೌಡರು ದಾಖಲಿಸಿರುವ ವಿವರಗಳು, ಅವರು ಅನುಸರಿಸುತ್ತಿದ್ದ ವಿಧಿ ವಿಧಾನಗಳು ಜಿಗುಪ್ಸೆ ಹುಟ್ಟಿಸುವಂತಿವೆ. ಹೆರಿಗೆ ಎಂಬುದು ಕೇವಲ ಮಗುವಿನ ಪ್ರಸವವಾಗದೆ ಅಜ್ಞಾನ ಮೂಢನಂಬಿಕೆಗಳ, ಬೇಜವಾಬ್ದಾರಿಗಳ ಕೂಪವಾಗುತ್ತದೆ.

ಆಗಿನ ಮಲೆನಾಡಿನಲ್ಲಿ ಒಂದು ನಂಬಿಕೆಯಿತ್ತು, ಸಾಮಾನ್ಯವಾಗಿ ಮೂರು ಹೆಂಡತಿಯರು ಸತ್ತ ನಂತರ ನಾಲ್ಕನೇ ಹೆಂಡತಿಯಾಗಿ ಬಂದವಳು ಬದುಕುಳಿಯುತ್ತಾಳೆ ಎಂಬುದು. ಇದರ ಸತ್ಯಾಸತ್ಯತೆಯನ್ನು ಪರೀಕ್ಷಿಸದೆ, ಹೆಣ್ಣು ಮಕ್ಕಳು ಹೆರಿಗೆ ಸಮಯದಲ್ಲಿ ತಮ್ಮ ಸಾವು ನಿಶ್ಚಿತವೆಂದೇ ನಂಬಿದ್ದರು. ಗರ್ಭಿಣಿಯಾದಾಗ ಏನಾದರೂ ಕಾಯಿಲೆ ಶುರುವಾದರೆ ತನ್ನ ಗಂಡನ ಪೂರ್ವದ ಹೆಂಡತಿ ಜಕ್ಕಣಿಯಾಗಿ ತನ್ನನ್ನು ಕಾಡುತ್ತಿದೆ ಎಂದು ಹೆದರುತ್ತಿದ್ದರು. ಈ ಭೀತಿಗೇ ಸಾಕಷ್ಟು ಮಹಿಳೆಯರಿಗೆ ಹೃದಯಾಘಾತವಾಗಿ ಸಾಯುತ್ತಿದ್ದರು.

ಗರ್ಭಿಣಿಯರಿಗೆ ಹೆರಿಗೆ ನೋವು ಶುರುವಾದಾಗ ಸೂಲಗಿತ್ತಿಯರು ಅನುಸರಿಸುತ್ತಿದ್ದ ವಿಧಾನ ಅವರ ಅಜ್ಞಾನಕ್ಕೆ, ಅವೈಜ್ಞಾನಿಕ ರೀತಿಯ ಹೆರಿಗೆಗೆ ಹಿಡಿದ ಕನ್ನಡಿಯಾಗಿದೆ, ಗರ್ಭಿಣಿಗೆ ನೋವು ಶುರುವಾದ ಕೂಡಲೆ:

''...ಈ ಸೂಲಗಿತ್ತಿಯವರು ಅವಳ ಹೊಟ್ಟೆ ಮೇಲೆ ಹರಳಣ್ಣೆ ತಿಕ್ಕಲು ಶುರು ಮಾಡುತ್ತಾರೆ. ಹೊಟ್ಟೆ ಮೃದುವಾಗಿ ಹೆರಿಗೆ ಸುಲಭವಾಗುತ್ತೆ ಎಂದು ಇವರು ತಿಕ್ಕುವ ಒತ್ತಡಕ್ಕೆ ಕೆಲವು ಸಂದರ್ಭಗಳಲ್ಲಿ ಮಗು ಹೊಟ್ಟೆ ಒಳಗೆ ಸತ್ತದ್ದು ಇವರಿಗೆ ಗೊತ್ತಾಗುವುದಿಲ್ಲ. ಹೆರಿಗೆ ಆಗಲು ತಡವಾದರೆ ಸೂಲಗಿತ್ತಿಯರು ಕೈಗೂ ಬಸುರಿಯ ಜನೇಂದ್ರಿಯಕ್ಕೂ ಹರಳೆಣ್ಣೆಯನ್ನು ಹಚ್ಚಿಕೊಂಡು ಒಳಗಡೆ ಕೈ ಸಾಕಿ ಮಗುವನ್ನು ತೆಗೆಯಲು ಪ್ರಯತ್ನಿಸುತ್ತಾರೆ. ಮಗು ತೆಗೆಯುವಷ್ಟರಲ್ಲಿ ಅವಳಿಗೆ ರಕ್ತಸ್ರಾವ ಜಾಸ್ತಿಯಾಗಿ ಪ್ರಾಣ ಹೋಗಿರುತ್ತೆ. ಇದಕ್ಕೆ ಕತೆ ಕಟ್ಟುತ್ತಾರೆ. ಅವರ ದೈವ ಮುರಕೊಂಡು ಹೋತು ಅಂತ ಅಥವಾ ಸತ್ತ ಹಿರೇ ಹೆಂಡತಿಯ ಜಕಣಿ ಕಾಟದಿಂದ ಸತ್ತಳು.'' (ರಾಮಪ್ಪಗೌಡ :1998:103) ಜನರ ಮೌಢ್ಯವನ್ನು ಸೂಲಗಿತ್ತಿಯರು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ಅಮಾನವೀಯ ಶೋಷಣೆ ಇಲ್ಲದೆ.

ಇದನ್ನು ಗೆದ್ದರೆ, ನಂತರ ನಡೆಯುವ ಬಾಣಂತನದ ಪಥ್ಯ ಮತ್ತೊಂದು ರೀತಿಯಲ್ಲಿ ಭಯಂಕರ ವಾಗಿತ್ತು. ಬಿಸಿ ಬಿಸಿ ನೀರ ಸ್ನಾನದ ನಂತರ ನಂಜು ಆಗದಿರಲು ಹಾಗೂ ಕರಳು ಉಬ್ಬದಿರಲು ಒಂದು ಖಾರದ ಕಷಾಯ ತಯಾರು ಮಾಡುತ್ತಿದ್ದರು. ಒಂದು ಸೇರು ಮೆಣಸಿನಕಾಳು ಕಿರುಗೊಡಿಸಿಗೆ ಬೇರು, ಗಜ್ಜಗ ಗಣಪೆಕಾಯಿ, ಕಾಡು ಜೀರಿಗೆ ಇದನ್ನು ಕುದಿಸಿ ಮಾಡುತ್ತಿದ್ದ ಕಷಾಯವನ್ನು ಗಂಜಿ ಕುಡಿದೊಡನೆ ಕೊಟ್ಟು ಮಲಗಿಸುತ್ತಿದ್ದರು. ಇದಕ್ಕೂ ಮುಂಚೆ ಮೆಣಸಿನ ಪುಡಿಯನ್ನು ಶರಾಬಿನಲ್ಲಿ ಸೇರಿಸಿ ಕೊಡುತ್ತಿದ್ದರು. ಇವುಗಳನ್ನು ಕುಡಿಸಿ ನಂತರ ದೇಹಕ್ಕೆ ಶಾಖ ಕೊಟ್ಟು ಬೆಚ್ಚಗಿಡಲು ಮೂರು ನಾಲ್ಕು ಕಂಬಳಿ ಹೊದಿಸಿ, ಪಕ್ಕಕ್ಕೆ ಬೆಂಕಿ ಹಾಕುತ್ತಿದ್ದರು.

ಹೊಟ್ಟೆ ಕರಳು ಉಬ್ಬುತ್ತದೆ ಎಂದು ಕುಡಿಯಲು ನೀರು ಸಹ ಕೊಡುತ್ತಿರಲಿಲ್ಲ. ಈ ರೀತಿ ಮೆಣಸಿನ ಕಾಳಿನ ಖಾರದ ಸೇವನೆಯಿಂದ ದೇಹವೆಲ್ಲ ಉರಿಯುತ್ತಿತ್ತು. ಇದರ ಉರಿ ಹತ್ತಿದಾಗ ತಾಳಲಾರದೆ ಕೆಲವರು ಹತ್ತಿರ ಇರುವ ಬಾವಿಗೋ ಕೆರೆಗೋ ಹಾರಿ ನೀರಿನಲ್ಲಿ ಮುಳುಗಿ ಸಾಯುತ್ತಿದ್ದರು. ಇದಕ್ಕೂ ಸಹ ಅವರ ಮನೆ ದೈವವೊ, ಜಕ್ಕಣಿಯೋ ಹಾರಿಸಿಕೊಂಡು ಹೋಗಿ ಕೆರೆಗೋ ಬಾವಿಗೋ ಹಾರಿಸಿ ಮುಳುಗಿಸಿತು ಎಂದು ಪ್ರಚಾರ ಮಾಡುತ್ತಿದ್ದರು. ಬಾಣಂತನ ಒಂದು ಶಿಕ್ಷೆಯಂತೆ ಪರಿಣಮಿಸುತ್ತಿತ್ತು.

ಹೆರಿಗೆ ನಂತರದ ಸೇವೆ ಹೀಗಾದರೆ ಗರ್ಭಿಣಿಯಾದಾಗ ಮತ್ತೊಂದು ಥರದ ನೋವು ಮಹಿಳೆಯರಿ ಗಿತ್ತು. ಮನೆಯಲ್ಲಿ ತಮ್ಮ ಗಂಡಂದಿರ ದೌರ್ಜನ್ಯ. ಗರ್ಭಿಣಿಯಾದರೂ ಶ್ರಮದ ಕೆಲಸವನ್ನು ಮಾಡುತ್ತಿದ್ದ ಮಹಿಳೆಯರು ಬದುಕುಳಿಯುತ್ತಿದ್ದದು ಕಡಿಮೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕೋಣೂರು ಸೇರೆಗಾರ ಚೀಂಕ್ರ ಮತ್ತು ಅವನ ಹೆಂಡತಿ ದೇಯಿ ಇದಕ್ಕೆ ತಕ್ಕ ಉದಾಹರಣೆ. ಕೆಲಸಕ್ಕೆ ಹೆಣ್ಣಾಳುಗಳು ಸಿಗದುದರಿಂದ ಚೀಂಕ್ರ ತನ್ನ ಗರ್ಭಿಣಿ ಹೆಂಡತಿ ದೇಯಿಯನ್ನು ಕೆಲಸಕ್ಕೆ ಬಲಾತ್ಕಾರದಿಂದ ಕರೆತಂದಿದ್ದನು.

ಭಾರತದಲ್ಲಿ ಸ್ತ್ರೀಯರ ಬಗ್ಗೆ ಪುರುಷರಲ್ಲಿ ಅನಾದರಣೆ ಇದೆ. ಅದು ಮಹಿಳೆಯರು ಗರ್ಭಿಣಿಯಾದಾಗಲೂ ತಪ್ಪುತ್ತಿರಲಿಲ್ಲ. ಯಾವುದೇ ಸಂದರ್ಭದಲ್ಲೂ ಗಂಡಂದಿರ ದೌರ್ಜನ್ಯದಿಂದ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ದನಕಾಯುವ ಬೈರ ತನ್ನ ಹೆಂಡತಿಯೊಂದಿಗೆ ಒಮ್ಮೆ ಜಗಳವಾಡಿದಾಗ, ಕುಡಿದ ಮತ್ತಿನಲ್ಲಿ ಅವಳ ಹೊಟ್ಟೆಯ ಮೇಲೆ ಒದ್ದಿದ್ದನು. ಇದರಿಂದ ಅವಳು ತಿಂಗಳು ತುಂಬುವ ಮೊದಲೆ ಹೆತ್ತು ಹೋಗಿದ್ದಳು. ಚೀಂಕ್ರನ ದೌರ್ಜನ್ಯದಿಂದ ಅವನ ಹೆಂಡತಿಯು ಭೀಕರವಾದ ಸಾವನ್ನಪ್ಪಿದಳು.ಹೀಗೆ ಮಹಿಳೆಯರಿಗೆ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಮಾರಕವಾಗುತ್ತಿತ್ತು.

ಅಲ್ಲದೆ ನಿಕಟ ಸಂಬಂಧದವರಲ್ಲೇ ವಿವಾಹ ಸಂಬಂಧ ಬೆಳೆಸುತ್ತಿದ್ದುದರಿಂದ ಜೈವಿಕ ಅಂಶಗಳೂ ಮಹಿಳೆಯರ ಹೆಚ್ಚಿನ ಮರಣಕ್ಕೆ ಕಾರಣವಾಗಿದ್ದವು. 'ಮಲೆಯಲ್ಲಿ ಮದುಮಗಳು' ಕಾದಂಬರಿಯಲ್ಲಿ ತಿಮ್ಮಪ್ಪಹೆಗ್ಗಡೆಯ ತಂಗಿ ಮಂಜಮ್ಮ 'ವೆಂಕಟಬಾವ' ಎಂದೇ ಕರೆಯುತ್ತಿದ್ದಳು. ವೆಂಕಟಪ್ಪನಾಯಕರು ಒಂದು ಮೋರೆಯಲ್ಲಿ 'ಬಾವ'ನಾಗಿಯೂ ಇನ್ನೊಂದು ಮೋರೆಯಲ್ಲಿ 'ಚಿಕ್ಕಪ್ಪ'ನಾಗಿಯೂ ಇದ್ದರು. ಅಲ್ಲಲ್ಲಿಯೆ ಹತ್ತಿರದ ಮನೆಗಳಲ್ಲಿ ಹೆಣ್ಣು ಕೊಟ್ಟೂ ತಂದೂ ಸಂಬಂಧಗಳು ಜಟಿಲವಾಗಿದ್ದು ಯಾರನ್ನು ಬೇಕಾದರೂ ಯಾವ ಸಂಬಂಧದಿಂದಾದರೂ ಸಂಬೋಧಿಸಬಹುದಿತ್ತು. (ಕುವೆಂಪು :2006ಬ :510)

ಶಿಶು ಮರಣ ಪ್ರಮಾಣವು ಸಹ ಗಮನೀಯವಾಗಿ ಮಲೆನಾಡಿನಲ್ಲಿತ್ತು. ಪ್ರಾಪ್ತ ವಯಸ್ಸು ತಲುಪುವಷ್ಟರಲ್ಲೆ ಅನೇಕ ಮಕ್ಕಳು ಸಾಯುತ್ತಿದ್ದರು. ಶಿಶು ಮರಣಕ್ಕೆ ನಾಲ್ಕು ಪ್ರಮುಖ ಕಾರಣಗಳನ್ನು ಗುರುತಿಸಲಾಗಿದೆ.

1. ಗರ್ಭಾವಸ್ಥೆಯಲ್ಲಿ ಸರಿಯಾದ ಶುಶ್ರೂಷೆಯ ಕೊರತೆ.
2. ಸೂಕ್ತ ವೈದ್ಯಕೀಯ ಚಿಕಿತ್ಸೆಯ ಕೊರತೆ.
3. ಹೆರಿಗೆಯ ಸಮಯದಲ್ಲಿ ಸೂಕ್ತ ಕಾಳಜಿಯ ಕೊರತೆ.
4. ಜನನದ ನಂತರ ಆರೈಕೆಯ ಕೊರತೆ.
5. ಮಕ್ಕಳ ನಡುವಿನ ವಯಸ್ಸಿನ ಅಂತರ.

ಒಂದು ಊರಿನ ಆರ್ಥಿಕತೆ ಕೃಷಿಯಾಧಾರಿತವಾದಾಗ ಅಲ್ಲಿ ದೈಹಿಕ ದುಡಿಮೆಗೆ ಪ್ರಧಾನ ಆಧ್ಯತೆ ಇರುತ್ತದೆ. ಹಾಗಾಗಿ ಒಬ್ಬ ಹೆಣ್ಣಾಳಿನ ದುಡಿಮೆಯು ಬಹಳ ಮುಖ್ಯವಾಗುತ್ತದೆ. ಅವರು ಗರ್ಭಿಣಿಯಾಗಿರಲಿ ಅಥವಾ ಕಾಯಿಲೆಯಿಂದ ನರಳುತ್ತಿರಲಿ ದುಡಿಮೆ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಚೀಂಕ್ರ ತನ್ನ ಗರ್ಭಿಣಿಯಾದ ಹೆಂಡತಿ ದೇಯಿಯನ್ನು ಕೆಲಸಕ್ಕೆ ಬಲಾತ್ಕಾರವಾಗಿ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಇದನ್ನು ಕಾಣಬಹುದು. ಆಕೆಯ ಸ್ಥಿತಿ ದುಡಿಮೆಗೆ ಅನುಕೂಲವಾಗದಿದ್ದರೂ ಅವಳು ಕೆಲಸಕ್ಕೆ ಹೋಗಲೇಬೇಕಿತ್ತು.

ಇಂತಹ ಶ್ರಮ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದರೂ ಸೂಕ್ತ ವೈದ್ಯಕೀಯ ಚಿಕಿತ್ಸೆ ಮಾಡಿಸದೆ ಅಂತ್ರ, ತಾಯಿತಿ ಪೂಜೆ, ಹರಕೆ ಎಂದು ಮುಂತಾದ ಪದ್ಧತಿಯನ್ನು ಅನುಸರಿಸುತ್ತಿದ್ದರು.

ಹೆರಿಗೆಯ ಸಮಯದಲ್ಲಿ ತರಬೇತಿಯಿಲ್ಲದ ಸೂಲಗಿತ್ತಿಯರ ಪ್ರಮಾದದಿಂದ ಶಿಶುಗಳು ಮರಣವನ್ನ ಪ್ಪುತ್ತಿದ್ದವು. ಜನನದ ನಂತರ ನೈರ್ಮಲ್ಯತೆಯ ಕೊರತೆಯುಂಟಾಗಿ, ಮಕ್ಕಳ ಆರೋಗ್ಯ ಕೆಟ್ಟು ಮಕ್ಕಳು ಸಾಯುತ್ತಿದ್ದರು. ಇದಕ್ಕೆ ತಕ್ಕ ಉದಾಹರಣೆಯನ್ನು 'ಕಾನೂರು ಹೆಗ್ಗಡಿತಿ'ಯಲ್ಲಿ ಕುವೆಂಪು ಚಿತ್ರಿಸಿದ್ದಾರೆ. ಮುತ್ತಳ್ಳಿ ಮನೆಯ ಆಳು ನಂಜನ ಕೂಸು ರಂಗಿ ವರ್ಣನೆ ಹೀಗಿದೆ :

''ನಂಜನ ಕೂಸು : ಕೈಕಾಲು ಸಣ್ಣಗಿತ್ತು : ಹೊಟ್ಟೆ ಡುಬ್ಬಣ್ಣವಾಗಿತ್ತು : ಮೂಗಿನಿಂದ ಸಿಂಬಳ ಸುರಿದು ಮೇಲ್ತುಟಿಯ ಮೇಲೆ ಕೋರೆಯಾಗಿತ್ತು. ಕೈಯಲ್ಲಿಯೂ ಹೊಟ್ಟೆಯ ಮೇಲೆಯೂ ಕಜ್ಜಿಗಳು ಕಾಣುತ್ತಿದ್ದವು. ಎದೆಯ ಎಲುಬಿನ ಗೂಡಿನ ಆಕೃತಿ ಹುಬ್ಬಿದ್ದ ಚರ್ಮದ ಮೇಲೆ ಚೆನ್ನಾಗಿ ಕಾಣುತ್ತಿತ್ತು. ನಿರ್ಮಲವಾಗಿರುವವರು ಯಾರೂ ಅದನ್ನು ಮುಟ್ಟಲು ಹೇಸುತ್ತಿದ್ದರು''. (ಕುವೆಂಪು:2006ಅ:154)

ಹಿಂದೆ ಮದುವೆಗಳು ಸಂಬಂಧಿಕರೊಳಗೆ ನಡೆಯುತ್ತಿತ್ತು. ಆದ್ದರಿಂದ ಜೈವಿಕವಾಗಿ ಬರುತ್ತಿದ್ದ ಕಾಯಿಲೆಗಳು, ಗರ್ಭಿಣಿಯಲ್ಲಿ ಪೌಷ್ಠಿಕ ಆಹಾರದ ಕೊರತೆ, ಮಕ್ಕಳ ನಡುವಿನ ಅಂತರ-ಇವುಗಳು ಸಹ ಶಿಶು ಮರಣ ಪ್ರಮಾಣ ಹೆಚ್ಚಾಗಲು ಕಾರಣಗಳು.

'ಕಾನೂರು ಹೆಗ್ಗಡಿತಿ'ಯ ಓಬಯ್ಯನ ಮಲತಂಗಿ ಮರಣದ ಪ್ರಸಂಗದಲ್ಲಿ ಮೌಢ್ಯ, ಸ್ವಚ್ಛತೆಯಿಲ್ಲದ ಮನೆ ಪರಿಸರ ಕಾಣುತ್ತದೆ.

''...ಓಬಯ್ಯನ ತಂಗಿಗೆ ಜ್ವರ ಷುರುವಾಯಿತು. 'ಔಸ್ತಿ, ಚೀಟಿಬುತ್ತಿ' ಏನೇನು ಮಾಡಿದರೂ ಗುಣವಾಗಲಿಲ್ಲ. ದನದ ಕೊಟ್ಟಿಗೆಗೆ ಸೇರಿದ್ದ ಗಾಡಿಕೊಟ್ಟಿಗೆಯಲ್ಲಿ ಅವರಿಗೆ ಬಿಡಾರ ಮಾಡಿಕೊಟ್ಟಿದ್ದರಿಂದ ಯಾವಾಗಲೂ ತೇವ ತಪ್ಪುತ್ತಿರಲಿಲ್ಲ. ದಿನವೂ ಅಡುಗೆ ಮಾಡುತ್ತಿದ್ದ ಒಲೆಯ ಮೇಲೆ ಕೂಡ ಹಳು ಬೆಳೆಯುತ್ತಿತ್ತು! ಗಂಜಲ, ಸಗಣಿ, ಕೆಸರು, ಮುರು ಇವುಗಳ ದುರ್ವಾಸನೆ ಗುಮ್ಮೆಂದು ಮುತ್ತಿರುತ್ತಿತ್ತು. ಸೊಳ್ಳೆಗಳಂತೂ ಹೇಳತೀರದು!''

ಆಸ್ಪತ್ರೆ ಸೌಲಭ್ಯವಿಲ್ಲದ ಮಲೆನಾಡಿನ ಅನಾರೋಗ್ಯದ ರೂಪವನ್ನು ಸಹ ಸರಿಯಾಗಿ ಕಂಡುಕೊಳ್ಳುತ್ತಿರಲಿಲ್ಲ. ಮೊದಲು ಜ್ವರ ಎಂದು ತಿಳಿದು, ಅದು ನಂತರ ರೇಷ್ಮೆ ಕಾಯಿಲೆ ಎಂದು ಭಾವಿಸಿ ಚಿಕಿತ್ಸೆ ಕೊಡುವಷ್ಟರಲ್ಲಿ ಮಕ್ಕಳು ತೀರಿಕೊಂಡಿರುತ್ತಿದ್ದರು.

ಮಹಿಳೆ ಮತ್ತು ಶಿಶು ಮರಣಗಳು ಮಲೆನಾಡಿನಲ್ಲಿ ಸರ್ವೇ ಸಾಮಾನ್ಯವಾಗಿತ್ತು ಎಂಬಂತೆ ಕುವೆಂಪು ಅವರ ಕಾದಂಬರಿಗಳಲ್ಲಿ ಚಿತ್ರಿತವಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೂವಳ್ಳಿ ವೆಂಕಟಣ್ಣ ಹೆಂಡತಿ ವರುಷಕ್ಕೊಂದರಂತೆ ಮಕ್ಕಳನ್ನು ಹೆತ್ತು ಐದನೆಯ ಹೆರಿಗೆಯಲ್ಲಿ ತೀರಿಕೊಂಡಿದ್ದಳು. ಆ ಐದು ಮಕ್ಕಳಲ್ಲಿ ಮೊದಲನೆಯ ಮಗು ಚಿನ್ನಮ್ಮ ಹೊರತು ಬೇರೆ ಮಕ್ಕಳು ಸತ್ತು ಹೋಗಿದ್ದರು. ಮಕ್ಕಳ ನಡುವೆ ವಯಸ್ಸಿನ ಅಂತರಕ್ಕೆ ಇಲ್ಲಿ ಆಸ್ಪದವೇ ಇಲ್ಲವೆಂಬಂತಿತ್ತು.

ಶಂಕರ ಹೆಗ್ಗಡೆಯ ಕೈಗೂಸು ಸಹ ಮರಣ ಹೊಂದಿತು. ಅವನ ಮೊದಲ ಮಗ ರಾಮುವಿನ ಆರೋಗ್ಯವೂ ಸರಿಯಿರಲಿಲ್ಲ. ಆಗಾಗ ಒಡಲ ಜ್ವರ ಬರುತ್ತಿತ್ತು.

ಚೀಂಕ್ರನ ಹೆಂಡತಿ ದೇಯಿ ಆರು ಮಕ್ಕಳಾಗಿ ನಾಲ್ಕು ಸತ್ತು ಎರಡು ಮಾತ್ರ ಬದುಕಿದ್ದವು. ಆಕೆ ಏಳನೆಯ ಬಸರಾಗಿದ್ದಾಗ ತನ್ನ ಗಂಡನ ಕ್ರೂರ ನಡತೆಯಿಂದ ಅಕಾಲ ಹೆರಿಗೆಯಾಗಿ ಸಾವನ್ನಪ್ಪಿದಳು.

### 4.4.5. ಮೌಢ್ಯ :

ಮಲೆನಾಡ ಜನರು ದೈಯ್ಯ, ಭೂತ, ದೇವರು, ಮಂತ್ರ, ನಿಮಿತ್ತ ಕೇಳುವುದು, ಹರಕೆ ಇಂಥ ಆಚರಣೆಗಳಲ್ಲಿ ಅಪಾರವಾದ ನಂಬಿಕೆ ಇಟ್ಟಿದ್ದರು. ಇವುಗಳ ಭಯ ಇದ್ದುದರಿಂದಲೇ ತೋಟದಲ್ಲಿ ಕಳ್ಳತನಗಳು ಕಡಿಮೆಯಾಗುತ್ತಿದ್ದವು.

ಜೀತದಾಳುಗಳು ಹಾಗು ಕೂಲಿಯಾಳುಗಳು ಕಳ್ಳತನ ಮಾಡುವ ಸಾಧ್ಯತೆ ಇತ್ತು. ಹಾಗಾಗಿ ಭೂಮಾಲಿಕರು ಹಾಗು ಶ್ರೀಮಂತರು ಅವರನ್ನು 'ದೇವರು ಭೂತ' ಎಂದು ಮುಂತಾದ ಕಾಲ್ಪನಿಕ ಶಕ್ತಿಗಳಿಂದ ಅಂಜಿಸಿ ತಮ್ಮ ಹದ್ದುಬಸ್ತಿನಲ್ಲಿಟ್ಟುಕೊಳ್ಳುತ್ತಿದ್ದರು. 'ಭೂತದ ಬನ'ದಲ್ಲಿ ಅಸ್ಪೃಶ್ಯರು ಕಾಲಿಡಬಾರದಿತ್ತು. ಕಾರಣವನ್ನು ಕುವೆಂಪು ಹೀಗೆ ಬರೆಯುತ್ತಾರೆ.

"ಏಕೆಂದರೆ ಭೂತದ ಬನದೊಳಕ್ಕೆ ಮುಟ್ಟಾಳುಗಳು ಕಾಲಿಟ್ಟರೆ ಅವರಿಗೆ ಏನಾದರೂ ಕೇಡು ತಪ್ಪದು ಎಂಬ ನಂಬುಗೆ ಬಲವಾಗಿತ್ತು; ಅದರಲ್ಲಿಯೂ ಕನ್ನಡ ಜಿಲ್ಲೆಯಿಂದ ಬಂದವರಿಗೆ ಗಟ್ಟದ ಮೇಲಣ ದೆಯ್ಯಗಳೆಂದರೆ ಮಹಾಭಯ. ಆ ಭಯದ ಬೇಲಿ ಕಟ್ಟಿ ಮಲೆನಾಡಿನ ಜಮೀನುದಾರರು ತಮ್ಮ ತೋಟ, ಗದ್ದೆ ಹಿತ್ತಲುಗಳ ಫಸಲು ರಕ್ಷಣೆ ಮಾಡಿಕೊಳ್ಳುತ್ತಿದ್ದರು. ಎಂತಹ ಕಾವಲೂ ಪೋಲೀಸೂ ಕಾನೂನು ಮಾಡಲಾರದಷ್ಟು ಸಮರ್ಪಕವಾಗಿ." **(ಕುವೆಂಪು:2006ಬ:135)**

ಇಂಥಹ ಮೌಢ್ಯಕ್ಕೆ ಕಟ್ಟುಬಿದ್ದು ಅನೇಕ ಗರ್ಭಿಣಿಯರು ತನ್ನ ಗಂಡನ ಮೊದಲ ಹೆಂಡತಿಯ ಜಕ್ಕಣಿ ತನ್ನನ್ನು ಕಾಡುವುದಾಗಿ ನಂಬಿಯೇ ಹೃದಯಾಘಾತದಿಂದ ಮರಣ ಹೊಂದುತ್ತಿದ್ದರು.

ಕಾನೂರಿನ ನಿಂಗ ತಾನು ಅಡಗಿಸಿದ ವಸ್ತುಗಳು ಕಳುವಾಗಲು ಮಂತ್ರಿಸಿದ ತೆಂಗಿನಕಾಯನ್ನು ಎಲ್ಲರಿಂದ ಮುಟ್ಟಿಸಿದ. ಅವನ್ನು ಕದ್ದ ಬೇಲರ ಬೈರನ ಮಗ ಗಂಗ ಹುಡುಗನನಿಂದ ಅವನ ತಾಯಿ ಬಲವಂತವಾಗಿ ಅದನ್ನು ಮುಟ್ಟಿಸಿದಳು. ಮನಸ್ಸಿನ ಸುಪ್ತಾವಸ್ಥೆಯಲ್ಲಿ ಮನೆ ಮಾಡಿದ ದೇವರು ದೆವ್ವದ ಬಗೆಗಿನ ಭಯ ಗಂಗ ಹುಡುಗನ ಸಾವಿಗೆ ಕಾರಣವಾಯಿತು.

ಹೆಂಗಸರು ಮುಟ್ಟಾದಾಗ ಶಾಸ್ತ್ರದ ಹೆಸರಲ್ಲಿ ಹೊರಗೆ ಕೂರಿಸುತ್ತಿದ್ದರು. ಮಲೆನಾಡಿನ ಮಳೆ ಚಳಿ ಬಿಸಿಲಲ್ಲಿ ಹೆಂಗಸರು ಹಿತ್ತಲ ಕಡೆಯಲ್ಲಿ ಕಂಬಳೀ ಚಾಪೆ ಹಾಕಿಕೊಂಡಿರುತ್ತಾರೆ. ಮುಚ್ಚು ಮರೆ ಬಾಗಿಲು ಇಲ್ಲದೆ ರಾತ್ರಿ ಸಹ ಹಾಗೇ ಮಲಗಬೇಕಿತ್ತು. ಇಂತಹ ಸಂದರ್ಭಗಳಲ್ಲಿರಬೇಕಾದ ಹೆಂಸಗರು ಸಹಜವಾಗಿಯೇ ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳಬೇಕಾಗುತ್ತಿತ್ತು.

ಈ ಎಲ್ಲಾ ಕಾರಣಗಳಿಂದ ಮಲೆನಾಡಿನಲ್ಲಿ ದೀರ್ಘಾಯುವಾದ ಮನುಷ್ಯರು ಇರುವುದು ಅಪರೂಪವಾಗಿತ್ತು. ವಿಶೇಷವಾಗಿ ಜೀತದಾಳುಗಳಲ್ಲಿ ದೀರ್ಘಾಯುಗಳು ಕಡಿಮೆ ಇರುತ್ತಿದ್ದರೆಂದು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಹಳೆ ಮನೆಯ ಕುಳವಾಡಿ ಸಣ್ಣನ ಪರಿಚಯದಿಂದ ತಿಳಿಯುತ್ತದೆ.

''ಕುಳವಾಡಿ ಸಣ್ಣ ಆ ಕೇರಿಗೆಲ್ಲ ವಯಸ್ಸಾಗಿದ್ದ ವ್ಯಕ್ತಿ. ಮಲೆನಾಡಿನಲ್ಲಿ, ಅದರಲ್ಲಿಯೂ ಬಡತನವೇ ಬಾಳಾಗಿದ್ದ ಕೀಳುಜಾತಿಯ ಜನರಲ್ಲಿ, ಐವತ್ತನ್ನು ಕಂಡವನೇ ಅತ್ಯಂತ ದೀರ್ಘಾಯುವಾಗಿದ್ದ. ಆ ಕಾಲದಲ್ಲಿ ಕುಳವಡಿ ಸಣ್ಣನಿಗೆ ಅವನ ಕೇರಿಯಲ್ಲಿ ಮಾತ್ರವಲ್ಲದೆ ಸಿಂಬಾವಿ, ಕೋಣೂರು, ಬೆಟ್ಟಳ್ಳಿ ಮೊದಲಾದ ಕಡೆಯ ಕೇರಿಗಳಲ್ಲಿಯೂ ವೃದ್ಧ ಪಿತಾಮಹನಿಗೆ ಸಲ್ಲುವ ಗೌರವ ಸಿಗುತ್ತಿತ್ತು. ಆ ವಯೋಧರ್ಮದಿಂದಲೆ ಅವನಿಗೆ ಕುಳವಾಡಿ ಪಟ್ಟ ದೊರಕಿತ್ತು. ಜಾತಿ ಸಂಬಂಧವಾದ ವ್ಯಾಜ್ಯಗಳು ಆಗಲಿ, ನೀತಿ ಸಂಬಂಧವಾದ ಬಹಿಷ್ಕಾರದ ವಿಷಯಗಳಲ್ಲಿ ಆಗಲಿ, ಹೆಣ್ಣು ಗಂಡು ಕೊಟ್ಟು ತರುವ ಸಂಬಂಧದಲ್ಲಿ ಉದ್ಭವಿಸುವ ಭಿನ್ನಾಭಿಪ್ರಾಯದ ಕಲಹಗಳಲ್ಲಿ ಆಗಲಿ ಕುಳುವಾಡಿ ಸಣ್ಣನ ತೀರ್ಪಿಗೆ ಜಾತಿಯವರು ಯಾರೂ ಸಾಮಾನ್ಯವಾಗಿ ಎದುರು ಬೀಳುತ್ತಿರಲಿಲ್ಲ''. **(ಕುವೆಂಪು :2006ಬ:94)**

ಹೀಗೆ ಐವತ್ತು ವರ್ಷದ ವೃದ್ಧನಿಗೆ ಮರ್ಯಾದೆ ದೊರೆಯುತ್ತಿತ್ತು.

ಈ ಎಲ್ಲ ಅಂಶಗಳಿಂದ ಮರಣ ಪ್ರಮಾಣವು ಹೆಚ್ಚಿದ್ದು ಬದುಕಿದ ಕೆಲವು ಜನರನ್ನು ಭೂಮಾಲಿಕರು ಜೀತದಾಳುಗಳನ್ನಾಗಿ ಮಾಡಿಕೊಂಡು ದುಡಿಮೆಯ ನಿರಂತರತೆಯನ್ನು ಕಾಪಾಡಿಕೊಳ್ಳುತ್ತಿದ್ದರು. ಜೀತದಾಳುಗಳ ಹಾಗು ಜಮೀನ್ದಾರರ ನಡುವೆ ಒಂದು ಅಲಿಖಿತ ಒಪ್ಪಂದ ಇದ್ದು ಅದನ್ನು ಜೀತದಾಳು ಗಳು ಮೀರದಂತೆ ನೋಡಿಕೊಂಡರು. ಜೀತದಾಳುಗಳನ್ನು ದೈಹಿಕವಾದ ದಾಸ್ಯಕ್ಕೆ ನೂಕುವುದಲ್ಲದೆ ಮಾನಸಿಕ ದಾಸ್ಯಕ್ಕೂ ಒಳಗು ಮಾಡಿದ್ದರು. ಎಷ್ಟೆಂದರೆ, ಒಡೆಯರ ಹಸುಗೂಸಿಗೂ ಅಯ್ಯನವರು, ಅಕ್ಕನವರು, ಅಣ್ಣನವರು ಎಂದೆಲ್ಲ ಬಹುವಚನದಲ್ಲೇ ಸಂಬೋಧಿಸಬೇಕಿತ್ತು.

### 4.5.1. ಮಲೆನಾಡಿನ ಪರಿಸರ :

ಮಲೆನಾಡಿನ ಪಶ್ಚಿಮ ಘಟ್ಟದಲ್ಲಿರುವ ನಾಡು. ಸುತ್ತಲೂ ದಟ್ಟ ಕಾನನಗಳಿಂದ, ಬೆಟ್ಟಗುಡ್ಡಗಳಿಂದ ಆವರಿಸಿರುವ ನಾಡು. ಸ್ವಾತಂತ್ರ್ಯಪೂರ್ವದಲ್ಲಿ ಸುಮಾರು ಇನ್ನೂರರಿಂದ ಮುನ್ನೂರು ಇಂಚುಗಳಷ್ಟು ಮಳೆ ಸುರಿಯುತ್ತಿದ್ದ ನಾಡು. ಅನೇಕ ಅರಣ್ಯ/ನೈಸರ್ಗಿಕ ಸಂಪತ್ತುಗಳ ಆಗರ, ವಿವಿಧ ಪ್ರಾಣಿ ಪಕ್ಷಿಗಳ ಗಿಡ ಮರಗಳ ತಾಣ.

ಇಂಥ ಅರಣ್ಯದ ಮಧ್ಯೆ ವ್ಯವಸಾಯ ಮಾಡಿಕೊಂಡು ವಾಸಿಸುತ್ತಿದ್ದ ಜನರು ಸದಾ ಜಾಗರೂಕರಾಗಿರಬೇಕಾದ ಅವಶ್ಯಕತೆ ಇತ್ತು. ಗದ್ದೆ ತೋಟಗಳಲ್ಲಿ ಬಹಳ ಬೇಗ ಹಳು ಬೆಳೆದು ಬಿಡುತ್ತಿತ್ತು. ಅದನ್ನು ಪದೇ ಪದೇ ಸವರಿಸದಿದ್ದರೆ ಗದ್ದೆ ತೋಟಗಳಲ್ಲಿ ಹಳು ಬೆಳೆದು ಅವು ನಾಶವಾಗುವ ಆತಂಕವಿತ್ತು. ಇದನ್ನು ಕುವೆಂಪು ಅವರು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹೀಗೆ ವಿವರಿಸಿದ್ದಾರೆ.

'ಪೃಥ್ವಿಯನ್ನೆಲ್ಲ ಹಬ್ಬಿ ತಬ್ಬಿ ಆಳುವ ಕಾಡಿನ ದುರ್ದಮ್ಯ ವಿಸ್ತೀರ್ಣದಲ್ಲಿ ಎಲ್ಲಿಯೊ ಒಂದಿನಿತೆ ಅಂಗೈಯಗಲದ ಪ್ರದೇಶವನ್ನು ಮನುಷ್ಯ ಗೆದ್ದುಕೊಂಡು ತನ್ನ ಗದ್ದೆ ತೋಟ ಮನೆಗಳನ್ನು ರಚಿಸಿಕೊಂಡಿದ್ದಾನೆ, ಅಷ್ಟೇ. ಅದೂ ಕೂಡ ಅವನು ನಿಚ್ಚವೂ ಜಾಗರೂಕನಾಗಿ ತಾನು ಗೆದ್ದುಕೊಂಡಿದ್ದನ್ನು ನಿರಂತರವೂ ರಕ್ಷಿಸಿಕೊಳ್ಳುತ್ತಾ ಹೋಗುವುದನ್ನು ಮರೆತನೆಂದರೆ, ಬಹುಬೇಗನೆ ಹಳು ಬೆಳೆದು ಮತ್ತೆ ಅದು ಕಾಡಿನ ವಶವಾಗಿ ಬಿಡುತ್ತದೆ'. (ಕುವೆಂಪು:2006ಬ:125)

ಈ ಕಾರಣಕ್ಕಾಗಿ ಗದ್ದೆ ತೋಟ ಹೊಂದಿದ ಸಾಹುಕಾರರು, ಜಮೀನುದಾರರಿಗೆ ತಮ್ಮ ಜಮೀನನ್ನು ಉಳಿಸಿಕೊಳ್ಳಲು ಆಳುಗಳ ದುಡಿಮೆ ಅತ್ಯವಶ್ಯಕವಾಗಿತ್ತು. ಆದ್ದರಿಂದ ಅವರು ಮುಂಗಡದಂತೆ ಅವರ ಮದುವೆಗೆ ಸಾಲ ನೀಡಿ, ಆ ಸಾಲವನ್ನು ದುಡಿದು ತೀರಿಸುವ ಅಲಿಖಿತ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದರು. ಯಾವ ಒಡೆಯರು ಸಾಲ ಕೊಟ್ಟಿರುವರೋ ಅವರಲ್ಲೇ ದುಡಿಯಬೇಕಾದ ಅನಿವಾರ್ಯತೆ ಸಾಲ ವಂದಿಗರಿಗಿತ್ತು. ಅವರ ದಿನಗೂಲಿ ಭತ್ತ ಮೆಣಸು ಮುಂತಾದ ಧವಸ ದಾನ್ಯಗಳಲ್ಲಿ ಕೊಡುತ್ತಿದ್ದುದರಿಂದ ಹಣದ ಬಳಕೆ ಇವರಲ್ಲಿ ಇರಲಿಲ್ಲ. ಕೊಡುವ ಎಂಟಾಣೆಯಿಂದ ಸಾಲ ತೀರುವಂತಿರಲಿಲ್ಲ. ಒಮ್ಮೆ ಮಾಡಿದ ಸಾಲಕ್ಕೆ ಬಡ್ಡಿ ಸೇರಿ ದೊಡ್ಡ ಮೊತ್ತ ಆಗುತ್ತಿದ್ದರಿಂದ ಸಾಲಗಾರರ ಇಡೀ ಕುಟುಂಬವೇ ಒಡೆಯರಿಗೆ ದುಡಿಯಬೇಕಾಗುತ್ತಿತ್ತು. ಜೀತದಾಳುಗಳು ತಮ್ಮ ಮಕ್ಕಳ ಮದುವೆ ಎಂದೆಲ್ಲ ಮತ್ತೆ ಸಾಲ ಮಾಡುತ್ತಿದ್ದುದರಿಂದ ಸಾಲದ ಬಲೆಯಿಂದ ಇವರು ಹೊರಬರುವಂತಿರಲಿಲ್ಲ.

ಪ್ರಾದೇಶಿಕವಾಗಿ ಕೇವಲ ಮಲೆನಾಡಿಗೇ ಸೀಮಿತವಾದ ಈ ವರ್ಗ ಮಲೆನಾಡಿನಾಚೆ ಇರುವ ಜೀವ ಪದ್ಧತಿಯ ಬಗ್ಗೆ ಅಜ್ಞಾನದಿಂದ ಇದ್ದರು. ಇದರಿಂದ ಇವರಿಗೆ ಸಂಘಟನೆ ಶಕ್ತಿಯೂ ಇಲ್ಲವಾಗಿ, ನಿರಂತರ ಶೋಷಣೆಗೆ ಒಳಗಾಗಲು ಒಂದು ಕಾರಣವಾಗಿರಬಹುದು.

ಹೀಗೆ ಅವರ ಅಜ್ಞಾನ ಹಾಗು ಸಾಲ-ಒಡೆಯರಿಗೆ ಅನುಕೂಲವಾಗಿದ್ದವು. ಸಾಲವು ಜೀತದಾಳನ್ನು ತಮ್ಮ ಕೆಲಸಕ್ಕೆ ಬರುವಂತೆ ಮಾಡುವ, ತಮ್ಮಲ್ಲೇ ಅವರು ಉಳಿಯುವಂತೆ ಮಾಡುವ ಒಂದು ಅಯಸ್ಕಾಂತದಂತಹ ಸಾಧನವಾಗಿತ್ತು; ಆಳುಗಳ ದುಡಿಮೆಯನ್ನು ಖಚಿತಗೊಳಿಸುತ್ತಿತ್ತು. ಹೀಗೆ ಒಂದು ಜೀತದಾಳು ಪದ್ಧತಿಯೇ ಮಲೆನಾಡಿನಲ್ಲಿ ನಿರ್ಮಾಣವಾಯಿತು. ಒಂದು ಸ್ಥಳದ ಭೂಗೋಳವೂ ಸಹ ಅಲ್ಲಿ ಜನ ಸಮುದಾಯದ ಜನ ಜೀವನದ ಮೇಲೆ ಪ್ರಭಾವ ಬೀರುತ್ತಿದ್ದ ಕ್ರಮವನ್ನು ನೋಡಬಹುದು.

ಒಂದು ಸಮಾಜದಲ್ಲಿ ಜನರ ಮರಣ ಪ್ರಮಾಣ ಹಾಗೂ ಜನರ ಸರಾಸರಿ ಆಯಸ್ಸು ಆ ಜನ ಸಮುದಾಯದ ಬದುಕು ಉತ್ತಮವಾಗಿದೆಯೋ ಅಥವಾ ಕನಿಷ್ಟವಾಗಿದೆಯೋ ಎಂಬುದರ ಮಾಪಕಗಳು ಎನ್ನುತ್ತಾರೆ ಅಮರ್ತ್ಯಸೇನ್ (ಚಂದ್ರಶೇಖರ್ ಟಿ.ಆರ್:1999:47) ಏಕೆಂದರೆ 'ಮರಣ ಪ್ರಮಾಣದ ವಿವರಗಳು ಜನರ ಬದುಕಿನ ಅಂತಸ್ಥಗುಣದ ದ್ಯೋತಕವಾಗಿವೆ'. (ಅದೇ.). ಈ ನಿಟ್ಟಿನಲ್ಲಿ ನೋಡಿದರೆ ಸ್ವತಂತ್ರ್ಯಪೂರ್ವ ಮಲೆನಾಡಿನ ಸಮಾಜ ಅಭಿವೃದ್ಧಿ ಹೊಂದಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

❐

## ಅಧ್ಯಾಯ : ೫

# ವ್ಯಾಪಾರ

## ಅಧ್ಯಾಯ : ೫

# ವ್ಯಾಪಾರ-ವಿನಿಮಯ

### 5.1. ಪೀಠಿಕೆ :

ಒಂದು ಪ್ರದೇಶದ ಆರ್ಥಿಕಾಭಿವೃದ್ಧಿಗೆ ವ್ಯಾಪಾರವು ಅಗತ್ಯವಾಗಿದೆ. ಆಂತರಿಕ ಹಾಗು ವಿದೇಶೀ ವ್ಯಾಪಾರಗಳು ದೇಶದ ಪ್ರಗತಿಯ ಸೂಚ್ಯಂಕಗಳಾಗಿವೆ.

ಒಂದು ಪ್ರದೇಶದಲ್ಲಿ ಅದರ ನೈಸರ್ಗಿಕ ಸಂಪನ್ಮೂಲಗಳಿಂದ ಉತ್ಪಾದಿಸಿದ ಉತ್ಪನ್ನಗಳನ್ನು ಆ ಉತ್ಪನ್ನಗಳ ಕೊರತೆ ಹಾಗು ಅದಕ್ಕೆ ಬೇಡಿಕೆ ಇರುವ ಪ್ರದೇಶಕ್ಕೆ ರಫ್ತು ಮಾಡಿ ಅನುಭೋಗಿಗಳಿಗೆ ಒದಗಿಸುವ ಕಾರ್ಯವನ್ನು ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆ ನಿರ್ವಹಿಸುತ್ತದೆ; ಹೊಸ ಬೇಡಿಕೆಗಳನ್ನು ಸೃಷ್ಟಿಸುತ್ತದೆ. ಹೀಗೆ ವಾಣಿಜ್ಯ ಮತ್ತು ವ್ಯಾಪಾರದ ಬೆಳವಣಿಗೆಗೆ ಒಂದು ಪ್ರದೇಶದ ಭೌಗೋಳಿಕತೆ ಪ್ರಮುಖ ಪಾತ್ರವಹಿಸುತ್ತದೆ. ಅಂತೆಯೇ ಐತಿಹಾಸಿಕ ಘಟನೆಗಳೂ ಮುಖ್ಯವಾಗುತ್ತವೆ.

ಹೈದರಾಲಿ ಬೇದನೂರನ್ನು ಜಯಿಸಿ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಇಂಗ್ಲಿಷಿನವರು ಬೇದನೂರು ರಾಜ್ಯದ ಘಟ್ಟದ ಕೆಳಗಿನ ಭಾಗವನ್ನು ಮಾತ್ರ ತೆಗೆದುಕೊಂಡು ಘಟ್ಟದ ಮೇಲಿನ ಭಾಗವನ್ನು ಮೈಸೂರಿನ ರಾಜರಿಗೆ ಕೊಟ್ಟಿದ್ದರು. (ಕೃಷ್ಣರಾವ್‌ಪಿ.ಎಚ್ : 1942 :3). ಹೀಗೆ ಐತಿಹಾಸಿಕವಾದ ಕಾರಣದಿಂದ ಮಲೆನಾಡಿನವರು ತಮ್ಮ ರಾಜರನ್ನು ಕಳೆದುಕೊಂಡು ಬೇರೆ ಬೇರೆ ರಾಜರ ಪ್ರಜೆಗಳಾದರು. ಇದರಿಂದಾಗಿ ಭೌಗೋಳಿಕ ಭೇದವೂ ಬೆಳೆದು ಘಟ್ಟದ ಕೆಳಗಿನವರು, ಘಟ್ಟದ ಮೇಲಿನವರೆಂಬ ಅಂತರಗಳು ಬೆಳೆಯತೊಡಗಿದವು. ಅಲ್ಲದೆ ಇದರಿಂದಾಗಿ ಮೈಸೂರು ರಾಜ್ಯಕ್ಕೆ ಕರಾವಳಿ ಪ್ರದೇಶ ತಪ್ಪಿ ಹೋಯಿತು. ರಾಜ್ಯದ ಸುತ್ತಲೂ ಬೆಟ್ಟ ಗುಡ್ಡಗಳು ಗೋಡೆಯಂತೆ ನಿಂತಿದ್ದವು. ಅಲ್ಲದೆ ನದಿಗಳು ಕೂಡ ವ್ಯಾಪಾರಕ್ಕೆ ಅನುಕೂಲಕರವಾಗಿರಲಿಲ್ಲ. ಹೀಗೆ ಭೌಗೋಳಿಕ ಅಂಶಗಳು ಮೈಸೂರಿನ ಹೊರ ರಾಜ್ಯದ ವ್ಯಾಪಾರಕ್ಕೆ ಪ್ರತಿಕೂಲವಾಗಿದ್ದವು.

ರಾಜ್ಯದಲ್ಲಿ 19ನೇ ಶತಮಾನದ ಆರಂಭದ ಕಾಲದಲ್ಲಿ ಮತ್ತು ನಂತರ ಹೆಚ್ಚಿನ ಸಂಖ್ಯೆಯಲ್ಲಿ ಹೆದ್ದಾರಿಗಳು ಇರಲಿಲ್ಲ. ಇದ್ದದ್ದು ಕೇವಲ ಎತ್ತಿನಗಾಡಿಯ ಗಾಡಿದಾರಿಗಳು. ಬೆಟ್ಟ ಗುಡ್ಡ ಕಾಡುಗಳಲ್ಲಿ ಸಂಚಾರ ಮಾಡಬೇಕಾಗುತ್ತಿದ್ದುದರಿಂದ ಮಳೆಗಾಲದಲ್ಲಿ ಇವನ್ನು ಬಳಸುವುದು ಕಷ್ಟವಾಗಿತ್ತು. ಅಲ್ಲದೆ ಎತ್ತಿನ ಗಾಡಿಯೂ ಆಗಿನ ಕಾಲದಲ್ಲಿ ದುರ್ಲಭವಾಗಿತ್ತು.

ಮಲೆನಾಡಿನ ಒಂದು ಹೆದ್ದಾರಿಯನ್ನು ಕುವೆಂಪು ಹೀಗೆ ಚಿತ್ರಿಸಿದ್ದಾರೆ. 'ತೀರ್ಥಹಳ್ಳಿಯಿಂದ ಆಗುಂಬೆಗೆ ಹೋಗುವ ಹೆದ್ದಾರಿಯಲ್ಲಿದ್ದ ಮೇಗರವಳ್ಳಿ ಗುತ್ತಿಯಂಥಾ ಹಳ್ಳಿಗರಿಗೆ ಪೇಟೆಯಾಗಿದ್ದರೂ ಬರಿಯ ಕೊಂಪೆಯಾಗಿತ್ತು.' (ಕುವೆಂಪು :2006ಬ :22)

ತೀರ್ಥಹಳ್ಳಿ ಆಗುಂಬೆಯ ಮುಖಾಂತರವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ವ್ಯಾಪಾರಿಗಳು ಹೋಗಿ ಬರುತ್ತಿದ್ದರು. ಅಲ್ಲದೆ ಇಂಥ ದಾರಿಗಳಲ್ಲಿ ದರೋಡೆಕೋರರ ಭಯವೂ ಇತ್ತು. ಹೊನ್ನಾಳಿ ಸಾಬರು ಮತ್ತು ಚೀಂಕ್ರ ಇವರು ಪ್ರಯಾಣಿಕರನ್ನು ದರೋಡೆ ಮಾಡುತ್ತಿದ್ದುದರಿಂದಲೇ ಅವರ ಸಂಪಾದನೆ ಚೆನ್ನಾಗಿತ್ತು. (ಕುವೆಂಪು:2006ಬ:22)

ಹೀಗೆ ಆಮದಾದ ವಸ್ತುಗಳು ಮತ್ತು ಆಂತರಿಕವಾಗಿ ಉತ್ಪನ್ನವಾದ ಧವಸ ಧಾನ್ಯ ಮತ್ತು ಇತರ ಸಾಮಾನುಗಳ ಮಾರಾಟಕ್ಕೆ ಸಂತೆ ಜಾತ್ರೆಗಳು ಪ್ರಮುಖ ಸಾಧನಗಳಾಗಿದ್ದವು.

## 5.2. ಪರಸ್ಥಳ ವ್ಯಾಪಾರಿಗಳು :

'ಮೈಸೂರಿನಲ್ಲಿ ಸ್ಥಳೀಯ ಮುಸಲ್ಮಾನರೂ ಇದ್ದಾರೆ, ಪರಸ್ಥಳದವರೂ ಇದ್ದಾರೆ. ಮಾಪ್ಪ, ಬೇರಿ, ಲಬ್ಬೆ, ಮೆಮಾನ್ ಇವರು ಪರಸ್ಥಳೀಕರು. ಮಾಪ್ಪಾಗಳು ಬಂಗಾರದ ಗಣಿ, ಜೋಗ, ಭದ್ರಾವತಿ ಮುಂತಾದ ಕೈಗಾರಿಕೆಯ ಕೇಂದ್ರಗಳಲ್ಲಿ ಕೂಲಿ ಮತ್ತು ಮೇಸ್ತ್ರಿಗಳಾಗಿ ಕೆಲಸ ಮಾಡುವುದಲ್ಲದೆ ಪಟ್ಟಣಗಳಲ್ಲಿ ಹಣ್ಣಿನ ವ್ಯಾಪಾರ, ಹಗ್ಗ ಚಾಪೆ ವ್ಯಾಪಾರ ಮತ್ತು ಇತರ ಚಿಲ್ಲರೆ ವ್ಯಾಪಾರಿಗಳಲ್ಲಿದ್ದಾರೆ, ಬೇರಿಗಳು ಕ್ರಮೇಣ ಮಲೆನಾಡಿನ ವ್ಯಾಪಾರವನ್ನು ತಮ್ಮ ಹತೋಟಿಯಲ್ಲಿ ತಂದುಕೊಳ್ಳುತ್ತಿದ್ದಾರೆ' ಎಂದು ಪಿ.ಎಚ್. ಕೃಷ್ಣರಾವ್ ಗುರುತಿಸಿದ್ದಾರೆ. (1942:12)

ಮಲೆನಾಡಿಗೆ ಬೇರೆ ಬೇರೆ ರಾಜ್ಯದಿಂದ - ಮುಖ್ಯವಾಗಿ ಘಟ್ಟದ ಕೆಳಗಿನವರು ವ್ಯಾಪಾರಕ್ಕೆ ಬರುತ್ತಿದ್ದರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಅಜ್ಜಿಸಾಬರು, ಇಜಾರುಸಾಬಿ, ಲುಂಗೀಸಾಬಿ ಇವರು ಘಟ್ಟದ ಕೆಳಗಿನವರು.

ಉಪ್ಪು, ಸೀಮೆಎಣ್ಣೆ ಮತ್ತು ಇತರ ಸಾಮಾನುಗಳನ್ನು ದಕ್ಷಿಣ ಕನ್ನಡದಿಂದ ತಂದು ಮಲೆನಾಡಿನಲ್ಲಿ ಮುಸ್ಲಿಂ ಹಾಗು ಶೆಟ್ಟರು ವ್ಯಾಪಾರಿಗಳು ಮನೆ ಮನೆಗೆ ತಿರುಗಿ ಮಾರುತ್ತಿದ್ದರೆಂದು ಶ್ರೀ ಶೇಷಪ್ಪ ಗೌಡರು ಸ್ಮರಿಸುತ್ತಾರೆ. (ಅನುಬಂಧ-ಶೇಷಪ್ಪಗೌಡ)

ಕೆಲವರು ವ್ಯಾಪಾರಕ್ಕೆ ಬಂದು ಚಿಲ್ಲರೆ ಸಾಲ ಕೊಟ್ಟು ಹೆಸರು ಗಳಿಸಿದ್ದರು. ಮಾಪಿಳ್ಳೆಯವರಾಗಿದ್ದ 'ಕರೀಂ ಸಾಬಿ ಗಟ್ಟದ ಮೇಲಕ್ಕೆ ಬಂದು ಬಹಳ ವರ್ಷಗಳಾಗಿತ್ತು. ಮೊದಲು ಬಂದಾಗ ಅವನು ಕರಿಮೀನು ಹೊತ್ತುಕೊಂಡು ಮನೆ ಮನೆಗೂ ತಿರುಗಿ ಅಕ್ಕಿಗೋ ಬತ್ತಕ್ಕೋ ಅಡಕೆಗೋ ವಿನಿಮಯ ವ್ಯಾಪಾರ ಮಾಡುತ್ತಿದ್ದನಾದ್ದರಿಂದಲೂ, ಹಳ್ಳಿಗರ ಕಿವಿಗೆ ಕರೀಂ ಮತ್ತು ಕರಿಮೀನು ಎಂಬ ಪದಗಳು ಸಮಪದಗಳಾಗಿ ತೋರಿದುದರಿಂದಲೂ ಅಂಕಿತನಾಮವನ್ನು ಅನ್ವರ್ಥನಾಮವನ್ನಾಗಿ ಮಾಡಿದ್ದರು.

ತರುವಾಯ ಕರೀಂಸಾಬಿ ಇತರ ಪದಾರ್ಥಗಳನ್ನು ಮಾರತೊಡಗಿದ್ದರೂ ಅವನ ಮೊದಲಿನ ಹೆಸರು ಬದಲಾಯಿಸಿರಲಿಲ್ಲ. ಹಾಗೆಯೇ ಮಂಗಳೂರು ನಶ್ಯಪುಡಿಯನ್ನು ತಯಾರು ಮಾಡಿ ಮಾರುತ್ತಿದ್ದ ಅವನ ತಮ್ಮನಿಗೆ 'ಪುಡೀ ಸಾಬಿ' ಎಂಬ ಹೆಸರು ಬಂದಿತ್ತು. ಅಂತೂ ಕರಿಮೀನು ಸಾಬರು ಮತ್ತು ಪುಡಿಸಾಬರು ಎಂದರೆ ಗುತ್ತಿಯಂತಹ ಜನಗಳಿಗೆ ತಕ್ಕಮಟ್ಟಿಗೆ ಗೌರವದ ವ್ಯಕ್ತಿಗಳೇ ಆಗಿದ್ದರು. ಅವರು ಚಿಲ್ಲರೆ ಸಾಲವನ್ನು ಕೊಡುತ್ತಿದ್ದರಿಂದ ಆ ಹಂಗಿಗೆ ಒಳಗಾದವರೆಲ್ಲರಿಗೂ ಅವರಲ್ಲಿ ದ್ವೇಷ ಮಿಶ್ರಿತವಾದ ಭಯ-ಭಕ್ತಿಯೂ ಇತ್ತು.' (ಕುವೆಂಪು:2006ಬ:23) ಹೀಗೆ ಕರೀಂಸಾಬಿ ಮೇಗರವಳ್ಳಿಯಲ್ಲಿಯೇ ಒಂದು ಅಂಗಡಿಯನ್ನೂ ಇಟ್ಟುಕೊಂಡಿದ್ದನು.

ಮೇಗರವಳ್ಳಿಯ ಚಮಡ ಸಾಗಿಸುವ ಅಜ್ಜಸಾಬು ಕುದುರೆ ಮೇಲೆ ಸ್ವಾರ್ಲು ಮತ್ತು ಬಂಗಡೆ ಮೀನನ್ನು ಮನೆಮನೆಗೆ ಹೋಗಿ ವ್ಯಾಪಾರ ಮಾಡುತ್ತಿದ್ದರು. ಹೊಲಗೇರಿಯವರು ಆಕಳ ಚರ್ಮವನ್ನು ಇವರಿಗೇ ಮಾರುತ್ತಿದ್ದರು.

''...ಗೋವಮಾತೆಯ ಚರ್ಮವನ್ನಂತೂ ವಾಡಿಕೆಯಂತೆ ಕುದುರೆ ತಟ್ಟಿನ ಮೇಲೆ ಸವಾರಿ ಮಾಡಿಕೊಂಡು ಬಂದ ಮೇಗರವಳ್ಳಿಯ 'ಕರ್ಮೀನು ಸಾಬರ' ಕಡೆಯ 'ಅಜ್ಜೀಸಾಬರಿಗೆ' ಮಾರಿದ್ದರು!'' (ಕುವೆಂಪು:2006ಬ:164)

## 5.3 ಅಂತರಂಗ ವ್ಯಾಪಾರ, ಬಹಿರಂಗ ವ್ಯಾಪಾರ :

ಕರಿಮೀನು ಸಾಬರು ಸಂಸಾರಕ್ಕೆ ಅವಶ್ಯಕವಾದ ಸಾಮಾನು ಹಾಗು ಮಕ್ಕಳು ಆಸೆ ಪಡುವ ತಿನಿಸುಗಳನ್ನು ಘಟ್ಟದ ಕೆಳಗಿನಿಂದ ಮಾರಲು ತರುತ್ತಿದ್ದರು.

''ಕರ್ಮೀನ್ ಸಾಬರು ನೀರುಳ್ಳಿ, ಬೆಳ್ಳುಳ್ಳಿ, ದಿನಸಿ, ಒಣಮೀನು ಮುಂತಾದ ದೊಡ್ಡವರಿಗೆ ಸಂಸಾರ ನಡೆಸಲು ಅವಶ್ಯಕವಾದ ಪದಾರ್ಥಗಳ ಜೊತೆಗೆ ಕೊಬ್ಬರಿ, ಕಡಲೆ, ಉತ್ತುತ್ತೆ, ಓಲೆಬೆಲ್ಲ, ಕರ್ಜೂರ, ಮಿಠಾಯಿ, ಬತ್ತಾಸು, ಬೆಂಡು ಮೊದಲಾದ, ವಿಶೇಷವಾಗಿ ಮಕ್ಕಳ ಹಿಗ್ಗಿಗೆ ಕಾರಣವಾಗುವ, ಪದಾರ್ಥಗಳನ್ನು ಮಾರಾಟಕ್ಕೆ ತರುತ್ತಿದ್ದರು. ಮೊದಲನೆಯ ವರ್ಗದ ಸರಕನ್ನು ಬಹಿರಂಗವಾಗಿಯೇ, ಎಂದರೆ ಮನೆಯ 'ಮುಂಚೆ ಕಡೆಯೆ ವ್ಯಾಪಾರ ಮಾಡುತ್ತಿದ್ದರು, ಮನೆಯ ಯಜಮಾನರ ಸಮ್ಮುಖದಲ್ಲಿ, ಎರಡನೆಯ ವರ್ಗದ ಸರಕಿನ ವ್ಯಾಪಾರವೆಲ್ಲ ಸಾಧಾರಣವಾಗಿ ಅಂತರಂಗದಲ್ಲಿ, ಎಂದರೆ ಮನೆಯ ಹಿತ್ತಲು ಕಡೆಯ ಬಾಗಿಲಲ್ಲಿ, ಹೆಂಗಸರು ಮಕ್ಕಳೊಡನೆ ನಡೆಯುತ್ತಿತ್ತು. 'ಹಿತ್ತಲು ಕಡೆಯ' ಮಾರುಕಟ್ಟೆಯಲ್ಲಿಯೇ ಅವರಿಗೆ ಚೆನ್ನಾಗಿ ಗಿಟ್ಟುತ್ತಿದ್ದುದು!...'' (ಕುವೆಂಪು:2006ಬ:320)

ಮನೆಯ ಹಿತ್ತಲುಕಡೆಯಲ್ಲಿ ಮಾಡುತ್ತಿದ್ದ ವ್ಯಾಪಾರ ಮನೆ ಮಕ್ಕಳನ್ನು, ಹೆಂಗಸರನ್ನು ಆಕರ್ಷಿಸುತ್ತಿತ್ತು. ಇದಕ್ಕೋಸ್ಕರ ಮನೆಯ ಅಡಕೆಯನ್ನೇ ಅವರು ಕದ್ದು ಕರ್ಮೀನ್ ಸಾಬರಿಗೆ ಕೊಡುತ್ತಿದ್ದರು. ಅಡಕೆಯ ಮೂಲದ ಗುಟ್ಟು ತಿಳಿದ ಸಾಬರು ಅವರ ಅಸಹಾಯಕತೆಯನ್ನು ಶೋಷಿಸಿ ಲಾಭ ಮಾಡಿಕೊಳ್ಳುತ್ತಿದ್ದರು.

ಸಿಂಬಾವಿಯ ಮನೆಗೆಲಸದ ದೊಳ್ಳ, ಅಡುಗೆ ಕೆಲಸದ ಮರಾಟಿ ಮಂಜನ ಕದರಡಿಕೆಯ ಗೋಣಿ ಚೀಲದ ಗಂಟನ್ನು ಲಪಟಾಯಿಸಿದ್ದನು. ಆದರೆ ಅದು ಕೇವಲ ಕದರಡಿಕೆಯಾಗಿದ್ದ ಬರಿಯ ಚೆಟ್ಟೆ ಗೋಟು ಎಂದು ಕಂಡು ಬಂದದ್ದರಿಂದ 'ಅದರ ಜೊತೆಗೆ ಸ್ವಲ್ಪ ಹಸ ಮತ್ತು ದಳಗಳನ್ನಾದರೂ ಬೆರಕೆ ಮಾಡದಿದ್ದರೆ ಸಾಬರು ಕಡಲೆ ಕೊಬ್ಬರಿ ಬತ್ತಾಸುಗಳನ್ನು ಸರಿಯಾದ ಪರಿಮಾಣದಲ್ಲಿ ತನಗೆ ಕೊಡುವುದಿಲ್ಲ ಎಂದು ಶಂಕಿಸಿ, ಮನೆಯ ಸ್ವಂತ ಮಾರಾಟದ ಅಡಕೆ ರಾಶಿಗಳಿದ್ದ ಗರಡೀಕೋಣೆಗೂ ಕದ್ದು ನುಗ್ಗಿ, ಮರಾಟಿ ಮಂಜನ ದಾಸ್ತಾನಿನಲ್ಲಿ ಕಂಡು ಬಂದಿದ್ದ ನ್ಯೂನತೆಯನ್ನು ನಿವಾರಿಸಿಕೊಂಡಿದ್ದನು'. (ಕುವೆಂಪು:2006ಬ:371)

ಆದರೆ ಇದು ಕರ್ಮೀನು ಸಾಬರಿಗೆ ಬುರ್ನಾಸು ಅಡಕೆಯಂತೆ ತೋರುತ್ತಿತ್ತು!

''ದೊಳ್ಳ ತಂದಿದ್ದ ಗೋಣಿಚೀಲದ ಗಂಟನ್ನು ಉದ್ದೇಶಪೂರ್ವಕವಾದ ತಿರಸ್ಕಾರದ ಭಾವದಿಂದಲೂ ಔದಾಸೀನ್ಯದಿಂದಲೂ ನಿಧಾನವಾಗಿ ಬಿಚ್ಚುತ್ತಾ, ಅದರಲ್ಲಿದ್ದ ಅಡಕೆಯ ಗುಣಕ್ಕೂ ಪ್ರಮಾಣಕ್ಕೂ ಒಳಗೊಳಗೆ ಹೃದಯ ಹಿಗ್ಗುತ್ತಿದ್ದರೂ ಮುಖವನ್ನು ಸಿಂಡರಿಸುತ್ತಾ, ಕರೀಂಸಾಬಿ, 'ತ್ಚು! ತ್ಚು! ತ್ಚು! ಏ ಹುಡುಗ, ಎಂಥಾ ಬುರ್ನಾಸ್ ಅಡಕೆಯೋ ಇದು? ಎಲ್ಲಿ ಸಿಕ್ಕಿತೋ ನಿನಗೆ?' ಎನ್ನುತ್ತಾ ಅಡಕೆಯಲ್ಲಿ ಕೈಯಾಡಿಸಿ, ತನ್ನ ತಮ್ಮ ಪುಡಿಸಾಬಿಗೆ ಏನನ್ನೊ ಮಲೆಯಾಳಿಯಲ್ಲಿ ಹೇಳಿ ಕಣ್ಣು ಮಿಟುಕಿಸಿದನು''. (ಕುವೆಂಪು:2006ಬ:371)

ಹಸ ಮತ್ತು ದಳಗಳನ್ನು ಸೇರಿಸಿದ್ದರೂ ಅದನ್ನು ಕರ್ಮೀನು ಸಾಬರು ಬರೀ ಗೋಟು, ಚೆಟ್ಟೆಯಂತೆ ಪರಿಗಣಿಸುವರು. ಆದರೂ ಅವರಿಗೆ ಮಾಲು ಕೈ ಬಿಡುವ ಶಂಕೆ. ಆದ್ದರಿಂದಲೆ '...ಅವಸವಸರವಾಗಿ, ದೊಳ್ಳನ ಯಾವ ಅಭಿಪ್ರಾಯಕ್ಕೂ ಕಾಯದೆ, ಅಡಕೆಯನ್ನೆಲ್ಲ ತಮ್ಮ ದೊಡ್ಡ ಹಸುಬೆ ಚೀಲಕ್ಕೆ ಸುರಿದು ಕೊಂಡು, ದೊಳ್ಳನ ಹರಕಲು ಚೀಲವನ್ನು ಅವನಿಗೆ ಕೊಟ್ಟು ಬಿಟ್ಟು, ಅವನು ಅಲ್ಲಿ ಇದ್ದಾನೆಯೆ ಇಲ್ಲವೆ ಎಂಬ ಪ್ರಜ್ಞೆಯ ಇಲ್ಲದವರಂತೆ, ಅನ್ಯಕಾರ್ಯದಲ್ಲಿ ಮಗ್ನರಾದರು 'ಕರ್ಮೀನ್ ಸಾಬ್ರು!' (ಅದೇ.)

ಆದರೆ ದೊಳ್ಳನಿಗೆ ಕರ್ಮೀನು ಸಾಬರು ಮೋಸ ಮಾಡುತ್ತಿರುವುದು ಗೊತ್ತಿದ್ದರೂ ಅದು ಕದ್ದ ಮಾಲಾದ್ದರಿಂದ ಅಸಹಾಯಕನಾಗಿದ್ದನು.

''ಮರಾಟಿ ಮಂಜನಾಗಲಿ ಮತ್ತೆ ಯಾರಾದರಾಗಲಿ ಬಂದು ತಾನು ಮಾಡುತ್ತಿದ್ದ ವ್ಯಾಪಾರವನ್ನು ಗಮನಿಸಿದರೆ, ಎಲ್ಲಿ ಸಿಕ್ಕಿ ಬೀಳುತ್ತೇನೆಯೊ ಎಂದು ಅಂಜಿ, ವಿನಿಮಯ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸುವ ಆತುರದಿಂದ ಪುಡಿಸಾಬರ ಕಡೆಗೆ ಹೋದನು''. (ಅದೇ.)

ತಾನು ಕೊಟ್ಟ ಮಾಲಿನ ಬೆಲೆಗೆ ತಕ್ಕಂತೆ ಉತ್ತುತ್ತೆ, ಕರ್ಜೂರ, ಓಲೆ ಬೆಲ್ಲ, ಬತ್ತಾಸು, ಬೆಂಡು, ಮಿಠಾಯಿಯ ಆಸೆ ಇರಿಸಿಕೊಂಡಿದ್ದ ದೊಳ್ಳನಿಗೆ ಪುಡಿಸಾಬು ಬಿದಿರಿನ ಗೆಣ್ಣೆ ಕತ್ತರಿಸಿ ರಚಿಸಿದ್ದ ಒಂದು ಸಣ್ಣ ಸಿದ್ದೆಯಲ್ಲಿ ಅಳೆದು ಹಳೆಯ ಮುಗ್ಗಲು ಹುರಿಗಡಲೆಯನ್ನು ಕೊಟ್ಟನು.

ದೊಳ್ಳ ಕಣ್ಣೀರು ಸುರಿಸಲು 'ಪಕ್ಕದಲ್ಲಿ ಏನೋ ಬಹು ಮುಖ್ಯವಾದ ಕೆಲಸದಲ್ಲಿ ತೊಡಗಿರುವವನಂತೆ ನಟಿಸಿಯೂ ಎಲ್ಲವನ್ನೂ ಗಮನಿಸುತ್ತಿದ್ದ ಕರೀಂಸಾಬು ಪುಡಿಸಾಬಿಗೆ ಕನ್ನಡದಲ್ಲಿಯೇ 'ಹೋಗಲಿ, ಪಾಪ!

ಒಂದೊಂದೇ ಉತುತ್ತೆ ಕರ್ಜೂರ ಬತ್ತಾಸು ಕೊಟ್ಟು ಕಳಿಸು' ಎಂದನು. ದೊಳ್ಳ ಕೊಟ್ಟಿದ್ದ ಅಡಕೆಯ ಬೆಲೆ ಅದಕ್ಕೆ ನೂರು ಮಡಿ ಆಗುತ್ತದೆ ಎಂದು ಅವನಿಗೆ ಗೊತ್ತಿಲ್ಲವೆ?' (ಕುವೆಂಪು:2006ಬ:372)

ಹೀಗೆ 'ಅಂತರಂಗದ' ವ್ಯಾಪಾರದಲ್ಲೇ ಈ ವ್ಯಾಪಾರಸ್ಥರು ಸಾಕಷ್ಟು ಲಾಭ ಗಳಿಸುತ್ತಿದ್ದರು. ಮಾರುಕಟ್ಟೆಯ ಮತ್ತು ವಸ್ತುಗಳ ಬೆಲೆಯ ಅರಿವಿಲ್ಲದ ಮುಗ್ಧ ಮಕ್ಕಳನ್ನು, ಹಳ್ಳಿಗರನ್ನು ವ್ಯಾಪಾರಿಗಳು ಶೋಷಿಸಿ ತಮ್ಮ ಜೇಬನ್ನು ತುಂಬಿಸಿಕೊಳ್ಳುತ್ತಿದ್ದರು.

ಈ ಕಳ್ಳ ವ್ಯಾಪಾರದಲ್ಲಿ ಸಿಂಬಾವಿ ಹೆಗ್ಗಡೆಯವರ ತಂಗಿ ಲಕ್ಕಮ್ಮ ತನ್ನ ಅತ್ತಿಗೆಯ ವಿರುದ್ಧ ಸೇಡು ತೀರಿಸಿಕೊಳ್ಳಲು ಮನೆಯ ಅಡಕೆ ರಾಶಿಯಿದ್ದ ಕೋಣೆಯಿಂದ ಹಸನಡಕೆಯನ್ನು ಕದ್ದು ಮರಾಟಿ ಮಂಜನಿಂದ ಕರ್ಮೀನು ಸಾಬರಿಂದ ಓಲೆಬೆಲ್ಲ, ಉತುತ್ತೆ, ಖರ್ಜೂರ ಮುಂತಾದ ತಿಂಡಿಗಳನ್ನು ತರಿಸಿಕೊಳ್ಳುತ್ತಿದ್ದಳು. ಕರ್ಮೀನ ಸಾಬರು ಇವರಿಗೂ ಮೋಸ ಮಾಡುತ್ತಿದ್ದರೂ, ದೊಳ್ಳನಿಗೆ ಮಾಡುವಂತೆ ಬುಡಮುಟ್ಟ ಚೌರ ಮಾಡುತ್ತಿರಲಿಲ್ಲ. ಮಲೆನಾಡ ಅಡಕೆ ಉತ್ತಮವಾದ ಅಡಕೆಯಾಗಿದ್ದು ಅದಕ್ಕೆ ಬೆಲೆ ಹೆಚ್ಚೇ ಇರುತ್ತಿತ್ತು. ಈ ರೀತಿಯ ಕಳ್ಳ ವ್ಯಾಪಾರದಿಂದ ವ್ಯಾಪಾರಿಗಳು ಅಡಕೆಯ ಲಾಭವನ್ನು ಗಳಿಸುತ್ತಿದ್ದರು.

### 5.4 ವಿನಿಮಯ :

ವಿನಿಮಯ ಪದ್ಧತಿ ಪಾರಂಪಾರಿಕವಾದದ್ದು ಮತ್ತು ಈ ವ್ಯಾಪಾರದಲ್ಲಿ ವಸ್ತುಗಳನ್ನು ವಿನಿಮಯ ಮಾಡಲಾಗುತ್ತದೆ. ವಸ್ತುಗಳು ಹಾಗು ಸೇವೆ ಶ್ರಮ ವ್ಯಾಪಾರದ ಮಾಧ್ಯಮವಾಗಿರುತ್ತದೆ.

ಹಣಕಾಸಿನ ವ್ಯವಸ್ಥೆ ಇಲ್ಲದ ಸಮಾಜದಲ್ಲಿ ಹಾಗೂ ಹಣ ಬಳಕೆ ತೀರ ಕಡಿಮೆ ಇರುವ ಸಮಾಜದಲ್ಲಿ ವಸ್ತು ವಿನಿಮಯ ಪದ್ಧತಿಯನ್ನು ಕಾಣಬಹುದು.

ಈ ವಿನಿಮಯ ಪದ್ಧತಿಯ ಮೂರು ಮುಖ್ಯ ಅನಾನುಕೂಲಗಳು ಹೀಗಿವೆ.

1. ವಸ್ತು ವಿಭಜನೆ
2. ಬೇಡಿಕೆಗಳ ಸಾಮ್ಯತೆ
3. ಸಾಗಾಣಿಕೆಯ ತೊಂದರೆ

ವಸ್ತು ವಿನಿಮಯ ವಿಧಾನ (Barter system) ಪ್ರಾಚೀನ ಅರ್ಥ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿದೆ.

1. **ವಸ್ತು ವಿಭಜನೆ :** ವಸ್ತುವಿನ ಮೌಲ್ಯವನ್ನು ತಿಳಿಯಲು ಯಾವ ಸಾರ್ವತ್ರಿಕ ಪ್ರಮಾಣಗಳು ಇರಲಿಲ್ಲ. ಹಾಗಾಗಿ ಅಸಮಾನ ವಸ್ತುಗಳ ನಡುವೆ ವ್ಯಾಪಾರ ನಡೆಯುವ ಸಂಭವ ಗಣನೀಯವಾಗಿತ್ತು. ಉದಾ: ಒಬ್ಬ ಗ್ರಾಹಕನು ಹಸುವನ್ನು ವಿನಿಮಯ ಮಾಡಲು ತಯಾರಿದ್ದು ಅವನಿಗೆ ಒಂದು ಜೋಡು ಎಕ್ಕಡ ಬೇಕಾದಲ್ಲಿ ಅವನು ಹಸುವನ್ನು ವಿನಿಮಯ ಮಾಡಲೇಬೇಕಿತ್ತು. ಮೌಲ್ಯದಲ್ಲಿ ಎರಡಕ್ಕೂ

ಅಜಗಜಾಂತರ ವ್ಯತ್ಯಾಸವಿದ್ದರೂ, ಆಕಳನ್ನು ಮೌಲ್ಯಕ್ಕೆ ತಕ್ಕಂತೆ ವಿಭಜಿಸಲು ಸಾಧ್ಯವಿಲ್ಲದಿರುವುದರಿಂದ ಇಂಥ ವಿನಿಮಯ ನಡೆಯುತ್ತಿತ್ತು. ವಿಕ್ರೇತನು ಕೊಡುವ ವಸ್ತುಗಳನ್ನು ಕೆಲವೊಮ್ಮೆ ಮೌಲ್ಯದಲ್ಲಾಗಲಿ, ಪ್ರಮಾಣದಲ್ಲಾಗಲಿ ಹೆಚ್ಚು ಕಡಿಮೆ ಮಾಡಲಾಗುವುದಿಲ್ಲ. ಇಲ್ಲಿ ಅಸಮಾನ ಬೆಲೆ, ಮೌಲ್ಯವಿರುವ ವಸ್ತುಗಳ ವಿನಿಮಯ ವಾಗುತ್ತದೆ.

2. **ಬೇಡಿಕೆಗಳ ಸಾಮ್ಯತೆ** ಎಂದರೆ ಒಬ್ಬ ಗ್ರಾಹಕನ ಬಳಿ ಹಣ್ಣುಗಳಿದ್ದು ಅವನಿಗೆ ನೇಗಿಲು ಬೇಕಾದರೆ, ಅವನು ಹಣ್ಣುಗಳನ್ನು ಬಯಸುವ ಕಮ್ಮಾರನನ್ನೇ ಹುಡುಕಬೇಕಿತ್ತು. ಈ ಇಬ್ಬರ ಬೇಡಿಕೆಗಳು ಒಂದಾದಲ್ಲಿ ಮಾತ್ರ ವಿನಿಮಯ ವ್ಯಾಪಾರ ನಡೆಯಬಹುದಾಗಿತ್ತು.

   ಅಕ್ಕಿಯನ್ನು ಕೊಟ್ಟು ಎಣ್ಣೆ ಪಡೆಯಬೇಕಾದರೆ, ಅಕ್ಕಿ ಇರುವವನು ಎಣ್ಣೆ ಇರುವವನನ್ನೇ ಸಮೀಪಿಸಬೇಕು ಹಾಗು ಎಣ್ಣೆ ಇರುವವನಿಗೆ ಅಕ್ಕಿಯೇ ಬೇಕಾಗುವುದು ಅಗತ್ಯ. ಅವನಿಗೆ ಅಕ್ಕಿ ಬೇಡವಾಗಿದ್ದರೆ ಅಕ್ಕಿ ಇದ್ದವನಿಗೆ ಎಣ್ಣೆ ಪಡೆಯಲು ಸಾಧ್ಯವಿಲ್ಲ.

3. **ಸಾಗಾಣಿಕೆಯ ತೊಂದರೆ :** ವಿನಿಮಯವಾಗುವ ವಸ್ತುವನ್ನು ಒಂದೂರಿನಿಂದ ಇನ್ನೊಂದೂರಿಗೆ ಸಾಗಿಸುವುದು ಸುಲಭವಾಗಿರಲಿಲ್ಲ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಾಲಘಟ್ಟದಲ್ಲಿ ವಸ್ತು ವಿನಿಮಯ ಪದ್ದತಿ ರೂಢಿಯಲ್ಲಿತ್ತು. ವಸ್ತು ವಿನಿಮಯ ಅಥವಾ ಸಾಟಿ ಪದ್ಧತಿಯಲ್ಲಿ ವಿಕ್ರೇತನು ತನ್ನ ಸ್ವಂತ ಉಪಯೋಗಕ್ಕಿಂತ ಹೆಚ್ಚಾಗಿ ಮಿಕ್ಕಿರುವ ವಸ್ತುವನ್ನು ತನ್ನಲ್ಲಿ ಇಲ್ಲದ ವಸ್ತುವನ್ನು ಪಡೆಯಲು ಸಿದ್ಧನಾಗುವನು.

ಗ್ರಾಮೀಣ ನೆಲೆಯಲ್ಲಿ ವ್ಯವಹಾರವೆಲ್ಲವೂ ಸಾಟಿ ವ್ಯಾಪಾರವನ್ನೇ ಆಧರಿಸಿರುವುದು. ಚಿಕ್ಕಮಟ್ಟದಲ್ಲಿ ಸ್ವತಂತ್ರವಾಗಿ ಜೀವಿಸುವ ಗ್ರಾಮೀಣ ಸಮಾಜದಲ್ಲಿ ಹಣದ ಬಳಕೆ ಅತಿ ಕಮ್ಮಿ. ಕಾನೂರು ಹೆಗ್ಗಡಿತಿಯ ಕಾಲದಲ್ಲಿ ಹಣ ಚಲಾವಣೆಯಲ್ಲಿತ್ತಾದರೂ 'ಪಡಿ' ಕೊಡುವ ಸಂದರ್ಭದಲ್ಲಿ ವಿನಿಮಯ ಪದ್ಧತಿ ಕಂಡು ಬರುತ್ತಿತ್ತು. ಸಮಾಜದ ಶ್ರೀಮಂತರಲ್ಲಿ, ಜಮೀನ್ದಾರರಲ್ಲಿ ಹಣದ ಚಲಾವಣೆ ಇತ್ತು. ಇವರು ಅಡಕೆ ವ್ಯಾಪಾರ, ಸರ್ಕಾರಕ್ಕೆ ಕಂದಾಯದ ಪಾವತಿ ಮುಂತಾದ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಿದ್ದರಿಂದ ಹಣದ ಬಳಕೆ ಈ ವರ್ಗದ ಜನರಲ್ಲಿತ್ತು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪಡಿ, ಮಾಪಿಳ್ಳೆಗಳ ವ್ಯಾಪಾರ, ಮುಂತಾದ ಸಂದರ್ಭಗಳಲ್ಲಿ ಪುರಾತನ ವ್ಯವಸ್ಥೆಯಾದ ವಿನಿಮಯ / ಸಾಟಿ ಎದ್ದು ಕಾಣುವಂಥದ್ದು. ಹೆಂಗಸರು ಮಕ್ಕಳು, ಆಳುಗಳು, ಹೊಲೆಯರು ಮುಂತಾದವರು ಅಕ್ಕಿ, ಭತ್ತ ಅಡಕೆಯಂತಹ ಬೆಳೆಯ ಸಾಮಾನುಗಳನ್ನೋ, ಕತ್ತಿ, ಸವೆಗೋಲು, ಮೆಟ್ಟುಗತ್ತಿಯಂತಹ ಕದ್ದ ಹತಾರುಗಳನ್ನೋ ಕರೀಂ ಸಾಬರಿಗೆ ಕೊಟ್ಟು ತಿಂಡಿ ತಿನಿಸುಗಳನ್ನು ಕೊಳ್ಳುತ್ತಿದ್ದರು. 'ಗಂಡಸರು ಅನೇಕರು ತಮ್ಮ ಸಂಸಾರಕ್ಕೆ ವರ್ಷಕ್ಕೆ ಬೇಕಾಗುವ ದಿನಸಿ ಕೊಬ್ಬರಿ ಕೊತ್ತುಂಬರಿ ಇತ್ಯಾದಿ ವಸ್ತುಗಳನ್ನು ಸಾಮಾನಿಗೋ ದುಡ್ಡಿಗೋ ಒಡವೆ ವಸ್ತ್ರಗಳಿಗೋ ಬಹಿರಂಗವಾಗಿಯೇ ಮಿನಿಮಯ ವ್ಯಾಪಾರ ಮಾಡಿಯೋ ಕೊಂಡುಕೊಂಡು ಹೋಗುತ್ತಿದ್ದರು'. (ಕುವೆಂಪು:2006ಬ:375) ಇಲ್ಲಿ 'ವಿನಿಮಯ ವ್ಯಾಪಾರ'ವು ಜಾಲ್ತಿಯಲ್ಲಿತ್ತೆಂದು ಸ್ಪಷ್ಟವಾಗಿ ಹೇಳಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗುತ್ತಿ ತನ್ನ ಹೆಂಡತಿಗೆ ಮದುವೆಯಲ್ಲಿ ಹಾಕಿದ್ದ ಜಡೆಬಿಲ್ಲೆಯನ್ನು ಕರ್ಮೀನ್ ಸಾಬರಿಗೆ ಕೊಟ್ಟು ಸಾಮಾನನ್ನು ಕೊಂಡುಕೊಳ್ಳುತ್ತಾನೆ ಮತ್ತು ಹಿಂದೆ ಮಾಡಿದ ಸಾಲವನ್ನು ತೀರಿಸುತ್ತಾನೆ. ಇಲ್ಲಿ ಸಾಲದ ಪ್ರಮಾಣ ಹಾಗು ಆಭರಣದ ಬೆಲೆಗೆ ಅಜಗಜಾಂತರ ವ್ಯತ್ಯಾಸ ಇದೆ.

### 5.4.1. ಪಡಿ :

ಪಡಿ (ಪ್ರತಿ) ಎಂದರೆ ಶ್ರಮಕ್ಕೆ ನೀಡುವ ಪ್ರತಿಫಲ; ಆಳುಗಳು ಕೆಲಸಕ್ಕಾಗಿ ಪಡೆಯುತ್ತಿದ್ದ ಸಂಭಾವನೆ, ಧವಸ ಧಾನ್ಯಗಳ ರೂಪದಲ್ಲಿ ಇರುತ್ತಿದ್ದು ಇದನ್ನು ಪ್ರತಿದಿನ ಕೆಲಸ ಮುಗಿದ ನಂತರ ಇಲ್ಲವೆ ವಾರಕ್ಕೆ ಒಮ್ಮೆ ಕೊಡುತ್ತಿದ್ದರು. ಇದರೊಂದಿಗೆ 'ಬಾಯಿಗೆ' ನೀಡುವುದು' ಎಂದರೆ ಪಡಿಯ ಜೊತೆಗೆ ನಾಲ್ಕೈದು ಅಡಕೆಗಳನ್ನು ಮತ್ತು ಹೊಗೆಸೊಪ್ಪನ್ನು ಕೊಡುವ ಪದ್ಧತಿಯೂ ಇತ್ತು. (ಗುರುಪಾದ ಮರಿಗುದ್ದಿ :1989:165).

ಕೆಲಸಕ್ಕೆ ಪ್ರತಿಯಾಗಿ ಹಣದ ಬದಲು ನಿತ್ಯೋಪಯೋಗಿ ಸಾಮಾನು, ಧವಸಧಾನ್ಯಗಳನ್ನು ಕೊಡುವುದು ವಿನಿಮಯದ ಒಂದು ರೀತಿ ಎಂದೇ ಹೇಳಬಹುದು. ಶ್ರಮಕ್ಕೆ ದುಡ್ಡಿನ ಬದಲಾಗಿ ಕೊಡುತ್ತಿದ್ದ ಒಡೆಯರ ಮನೆಯಲ್ಲಿ ಹೆಚ್ಚಿಗೆ ಇರುವ ಸಾಮಾನುಗಳಾದ ಅಕ್ಕಿ, ಹೊಗೆಸೊಪ್ಪು ಉಪ್ಪು ಬಾಯಿಗೆ ಅಡಕೆ-ಇವೆಲ್ಲವೂ ವಿನಿಮಯದ ಸಾಮಾನುಗಳು.

ವರ್ಷಕೊಮ್ಮೆ ಬಟ್ಟೆ, ಹಬ್ಬ ಹರಿದಿನಕ್ಕೆ ದುಡ್ಡು ಕೂಡ ಒಡೆಯರು ಆಳುಗಳಿಗೆ ಕೊಡುತ್ತಿದ್ದರು ಎಂದು ಶೇಷಪ್ಪ ಗೌಡರು ಸ್ಮರಿಸುತ್ತಾರೆ. ಯುಗಾದಿ ಹಬ್ಬಕ್ಕೆ ಸಣ್ಣವರು ದೊಡ್ಡವರಿಗೆಲ್ಲ ಹಾಸಲು ಹೊದೆಯಲು ಒಡೆಯರು ಕೊಡುತ್ತಿದ್ದರು ಹಾಗು 2 ಸೇರು ಅಕ್ಕಿ, 1/2 ಕೆ.ಜಿ. ಮೆಣಸು, 1 ತೆಂಗಿನಕಾಯಿ ಹುಣಸೆ 1/4 ಕೆಜಿ, ಬೆಲ್ಲ 1ಕೆಜಿ ಇವು ಹಬ್ಬದ ಕಾಲದ ಪಡಿಯಾಗಿತ್ತು. ಈ ಪಡಿ ಸಂಸಾರ ಗಾತ್ರಕ್ಕೆ ಅನುಗುಣವಾಗಿರುತ್ತಿತ್ತು ಎಂದು ಹಾಲಪ್ಪ ಸ್ಮರಿಸುತ್ತಾರೆ.(ಅನುಬಂಧ-ಹಾಲಪ್ಪ)

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕೋಣೂರಿನ ಪಡಿಯಲ್ಲಿ ಇತರ ಸಾಮಾನುಗಳೊಡನೆ ಉಪ್ಪು, ಮೆಣಸು, ಬಾಳೆಕಾಯಿ, ಅಕ್ಕಿ, ಎಲೆ, ಅಡಕೆ, ಹೊಗೆಸೊಪ್ಪನ್ನು ಕೊಡುತ್ತಿದ್ದರು. (ಕುವೆಂಪು: 2006ಬ :494)

ಕಡಿದಾಳು ರಾಮಪ್ಪಗೌಡರು 'ಪಡಿ'ಯನ್ನು ಈ ರೀತಿ ದಾಖಲಿಸಿದ್ದಾರೆ. (1998:48)ನಿತ್ಯ ಕೆಲಸಮಾಡುವ ಜೀತದಾಳುಗಳಿಗೆ ಗಂಡಸರು, ಹೆಂಗಸರು ಎಲ್ಲರಿಗೂ ದಿನಕ್ಕೆ ಒಂದು ಕೊಳಗೆ ಭತ್ತ ಒಂದು ಮುಷ್ಟಿ, ಉಪ್ಪು ಒಂದು ಮುಷ್ಟಿ ಮೆಣಸಿನಕಾಯಿ ಇಷ್ಟನ್ನು ಕೊಟ್ಟರೆ ಆಯಿತು. ನಗದು ಕೂಲಿ ಕೊಡುವ ವ್ಯವಹಾರವೆ ಇಲ್ಲ. ಇನ್ನು ಹಬ್ಬ ಹರಿದಿನ ಬಂದಾಗ ಖರ್ಚಿಗೆ ಎಂಟಾಣೆನೊ ಒಂದು ರೂಪಾಯಿಯನ್ನೊ ಕೊಟ್ಟರೆ ಆಯಿತು. ವರ್ಷಕ್ಕೆ ಯುಗಾದಿ ಹಬ್ಬದಲ್ಲಿ ಇವರಿಗೆಲ್ಲ ಬಟ್ಟೆ ಕೊಡುವ ಪದ್ಧತಿ. ಗಂಡಸರಿಗೆ ಒಂದು ಅಂಗಿ ನಾಲ್ಕು ಮೊಳ ಉದ್ದದ ಒಂದು ಬಾರ ಫರದಿ ಪಂಚೆ ತಲೆಗೆ

ಕಟ್ಟುವುದಕ್ಕೆ ನಾಲ್ಕು ಮೊಳ ಉದ್ದದ ಎಲಿವಸ್ತ್ರ ಮಳೆಗಾಲಕ್ಕೆ ಸೂಡಲು ಒಂದು ಕಂಬಳಿ, ಹೆಂಗಸರಿಗೆ ಹದಿನೆಂಟು ಮೊಳ ಉದ್ದದ ಜಿಡ್ಡು ಸೀರೆ. ಗಂಡು ಹುಡುಗರಿಗೆ ಒಂದು ಅಂಗಿ, ಹೆಣ್ಣು ಹುಡುಗರಿಗೆ ಒಂದು ಪರಿಕಾರ (ಲಂಗ) ಇಷ್ಟನ್ನು ಕೊಡುತ್ತಿದ್ದರು.... ಇವರಿಗೆ ಸಂಬಳ ಇಲ್ಲದ್ದರಿಂದ ಭತ್ತವೆ ಕೂಲಿ. ಪಡಿಯ ವಸ್ತುಗಳು ದಿನಬಳಕೆಯ ಅಡುಗೆ ಸಾಮಾನಾಗಿದ್ದವು. ಅದೂ ಕೆಲಸಕ್ಕೆ ಹೋದರೆ ಮಾತ್ರ.

## 5.5 ಕಳ್ಳಂಗಡಿಯಲ್ಲಿ ವಿನಿಮಯ :

ಕಳ್ಳಂಗಡಿ ವ್ಯಾಪಾರ ವಿನಿಮಯ ಆಧಾರದ ಮೇಲೆಯ ನಡೆಯುತ್ತಿತ್ತು. ಎರಡೂ ಕಾದಂಬರಿಗಳಲ್ಲಿ ಕಳ್ಳಂಗಡಿಯ ವಿನಿಮಯ, ಅದರ ರೂಪ, ವಿನಿಮಯವಾಗುತ್ತಿದ್ದ ವಿವಿಧ ವಸ್ತುಗಳ ಚಿತ್ರಣ ಸಿಗುತ್ತದೆ.

''ಆಳುಗಳು ಒಕ್ಕಲುಗಳು ಕಳ್ಳಂಗಡಿಗೆ ಹೋಗುವಾಗ ದಿನಗೂಲಿಯ ಬತ್ತವನ್ನು ಕಳ್ಳಂಗಡಿಗೆ ಕೊಟ್ಟು ಕಳ್ಳು ಕುಡಿದು ಬರುತ್ತಿದ್ದರು. ಕೆಲವು ಸಾರಿ ಕತ್ತಿ ಹಾರೆ ಗುದ್ದಲಿ ಮೊದಲಾದ ಸಾಮಾನುಗಳನ್ನು ಕದ್ದು ತಂದುಕೊಟ್ಟು ಕಳ್ಳು ಹೆಂಡಗಳನ್ನು ಕುಡಿಯುತ್ತಿದ್ದರು.'' **(ಕುವೆಂಪು :2006ಅ :91)**

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಬರುವ ಬಾಡುಗಳ್ಳ ಸೋಮ, ತನ್ನ ಕಳ್ಳಂಗಡಿಯ ಸಾಲ ತೀರಿಸಲು ಹಳೆಪೈಕದ ತಿಮ್ಮನ ದೊಡ್ಡ ಹುಂಜವೊಂದನ್ನು ಕದ್ದು ಕಳ್ಳಂಗಡಿಯವನಿಗೆ ಕೊಟ್ಟನು. ಕಳ್ಳಂಗಡಿಯವನು ಅಂತಹ ಕಳ್ಳ ವ್ಯಾಪಾರಗಳಿಂದಲೆ ಹೆಚ್ಚಾಗಿ ಹಣ ಸಂಪಾದನೆ ಮಾಡುತ್ತಿದ್ದ. **(ಕುವೆಂಪು : 2006ಅ :296)**

ಮುಂದೆ ಈ ಹುಂಜದ ಚೊಟ್ಟೆ ಪುಕ್ಕಗಳನ್ನು ಕತ್ತರಿಸಿ, ಯಾರೂ ಕಾಣದಂತೆ ಕತ್ತಲಲ್ಲಿ ಅದನ್ನು ಸಾಕಿ ಕೆಲವು ತಿಂಗಳ ನಂತರ ಕೋಳಿಯಂಕದಲ್ಲಿ ಸೋಮನಿಗೆ ಅದನ್ನು 'ಕಟ್ಟಿ ಸಾಕಿದ ಅಂಕದ ಹುಂಜ' ಎಂದು ಮೋಸ ಮಾಡಿ ಮೂರು ರೂಪಾಯಿಗಳಿಗೆ ಮಾರುವನು. ವಿನಿಮಯದಲ್ಲಿ ಪಡೆದ ವಸ್ತುಗಳಿಂದ ಹಣಗಳಿಸುವುದು ಕಳ್ಳಂಗಡಿಯವನಿಗೆ ಚೆನ್ನಾಗಿ ತಿಳಿದಿತ್ತು.

ಹಾಗೆಯೆ ಬೇಲರ ಬೈರ, ಅವನ ಹೆಂಡತಿ ಸೇಸಿ, ಅವನ ಮಗ ಗಂಗ ಹುಡುಗ ನಾನಾ ವಿಧದಲ್ಲಿ ಕಳ್ಳಂಗಡಿಯವನ ಸಾಲ ತೀರಿಸುವುದನ್ನು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ನೋಡಬಹುದು.

'ಬೇಲರ ಬೈರನೂ, ತಾನು ಮತ್ತೆ ಬಗನಿ ಕಟ್ಟಿ ಕಳ್ಳು ಮಾರಿ ಸಾಲ ತೀರಿಸುವುದಾಗಿ ಮಾತು ಕೊಟ್ಟು, ಕಳ್ಳಂಗಡಿಯವನನ್ನು ಸಮಾಧಾನಪಡಿಸಿದನು. ಅವನ ಹೆಂಡತಿ ಸೇಸಿಯೂ ತಾನು 'ಸರಿ ಪಾಲಿಗೆ' ಸಾಕಿದ್ದ ಒಂದೆರಡು ಹೇಂಟೆಗಳ ಮರಿಗಳನ್ನು ಕಳ್ಳಂಗಡಿಯವನಿಗೇ ಮೀಸಲಾಗಿಟ್ಟು ಪಾರಾದಳು ಗಂಗ ಹುಡುಗ ಮಾತ್ರ ಕಳ್ಳಂಗಡಿಯವನ ಕಣ್ಣಿಗೆ ಬೀಳದಂತೆ ತಪ್ಪಿಸಿಕೊಂಡು ತಿರುಗುತ್ತಿದ್ದನು. ಅವನು ಕಳ್ಳಂಗಡಿಯವನಿಗೆ ತಾನು ಕೊಡಬೇಕಾಗಿದ್ದ ಸಾಲದ ವಿಚಾರವಾಗಿ ತನ್ನ ಅಪ್ಪನಿಗೆ ತಿಳಿಯದಂತೆ ಸಂಚು ಮಾಡಿಕೊಂಡಿದ್ದನು. ಅನೇಕ ಸಾರಿ ಅವರಿವರು ಬೆಳೆದಿದ್ದ ಹಿತ್ತಲು ಕೊಪ್ಪಲುಗಳಿಂದ ತರಕಾರಿ, ಬದನೆಕಾಯಿ, ಬಾಳೆಗೊನೆ, ಕುಂಬಳಕಾಯಿ ತಿಂಗಳವರೆಕಾಯಿ ಇತ್ಯಾದಿಗಳನ್ನು ಕದ್ದು ಸಾಲ ತೀರಿಸಿದ್ದನು.

ಕೆಲವು ಸಾರಿ ಗೌಡರ ಮನೆಯಿಂದ ಕತ್ತಿ ಗುದ್ದಲಿ ಮೊದಲಾದ ಹತಾರುಗಳನ್ನೂ ಕದ್ದು ಕಳ್ಳಂಗಡಿಗೆ ಸಾಗಿಸಿದ್ದನು. ಹೆಂಡ ಕುಡಿಯುವ ಚಪಲತೆ ಅವನನ್ನು ಅಷ್ಟು ಚಿಕ್ಕಂದಿನಲ್ಲಿಯೆ ಚೌರ್ಯದಲ್ಲಿ ಪ್ರವೀಣನನ್ನಾಗಿ ತರಬಿಯೆತ್ತು ಮಾಡಿದ್ದಿತು. (ಕುವೆಂಪು:2006ಅ:297)

ಕಳ್ಳಂಗಡಿಯವನನ್ನು ಗಂಗ ಹುಡುಗ,

'ಕಾನೂರು ಮನೆಯ ಸಮೀಪದಲ್ಲಿದ್ದ ಒಂದು ಕಾಡಿಗೆ ಕರೆದುಕೊಂಡು ಹೋಗಿ, ಮಣ್ಣು ಅಗೆದು ನಾಲ್ಕಾರು ಕೆಲಸದ ಕತ್ತಿಗಳು, ಎರಡು ಹಿತ್ತಾಳೆ ಚೊಂಬುಗಳು, ಒಂದು ಹಾರೆ, ಒಂದು ಗುದ್ದಲಿ, ಕೆಲವು ನೇಗಿಲ ಕುಳಗಳನ್ನು ಕೊಟ್ಟನು. (ಅದೇ.). ಅದು ಗಾಡಿ ಹೊಡೆಯುವ ನಿಂಗ ಹೂತಿಟ್ಟ ಸ್ವತಃ ಸಂಪಾದಿಸಿದ್ದ ಆಸ್ತಿ ಆಗಿದ್ದವು.

ಆಳುಗಳ ಬಳಿ ಹಣ ಇಲ್ಲದೆ ಇದ್ದುದರಿಂದ ಒಂದು ರೀತಿಯಲ್ಲಿ ಈ ವಿನಿಮಯ ಪದ್ಧತಿ ವ್ಯಾಪಾರಸ್ಥರಿಗೆ ಅನುಕೂಲಕರವಾಗಿಯೇ ಇತ್ತು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಣ್ಣಾ ಪಂಡಿತರ ಯೋಚನೆ ಈ ಅಂಶವನ್ನು ಸ್ಪಷ್ಟ ಪಡಿಸುತ್ತದೆ.

'ಆ ಹೊಲೆಯನಿಂದ ಹಣ ವಸೂಲು ಮಾಡಿಕೊಳ್ಳುವುದೂ, ಹಸುವಿನ ಕೊಂಬಿನಿಂದ ಹಾಲು ಕರೆಯುವುದೂ ಒಂದೇ ಎಂದು ಚೆನ್ನಾಗಿ ಅರಿತಿದ್ದ ಕಣ್ಣಾ ಪಂಡಿತರು 'ನನಗೆ ನಿನ್ನಿಂದ ದುಡ್ಡು ಕಾಸೂ ಏನೂ ಬೇಡ... ನನಗೆ ಬೇಕಾದಾಗ ಒಂದೊಂದು ಕೋಳಿ ಕೊಟ್ಟರೆ ಸಾಕು-' ಎಂದು ಹೇಳುತ್ತಾನೆ. (ಕುವೆಂಪು:2006ಬ:26)

ಈ ಒಪ್ಪಂದ ಹಣ ಕೊಡುವುದಕ್ಕಿಂತ ಸುಲಭವಾಗಿರುವಂಥದ್ದು.

ಇದಕ್ಕೆ ಕಾರಣ ಮತ್ತು ಸ್ವರೂಪವನ್ನು ಇದೇ ಕಾದಂಬರಿಯಲ್ಲಿ ಕುವೆಂಪು ವಿವರಿಸಿದ್ದಾರೆ. ಗುತ್ತಿ ಕೋಣೂರು, ಹಳೆಮನೆ, ಹೂವಳ್ಳಿ, ಬೆಟ್ಟಳ್ಳಿ ಮೊದಲಾದೆಡೆಗಳಿಗೆಲ್ಲಾ ಹೋಗಿ ಬರುವಾಗ ಅಂತಕ್ಕ ಸೆಟ್ಟಿಯ 'ಒಟ್ಲು ಮನೆ'ಯಲ್ಲಿ ಹಸಿವು, ಬಾಯಾರಿಕೆ, ದಣಿವನ್ನು ನಿವಾರಿಸಿಕೊಂಡು ಹೋಗುತ್ತಿದ್ದ.

'ಬೆಲ್ಲ ನೀರುಗಳನ್ನೊ, ಹೆಂಡ ಕರಿಮೀನು ಚಟ್ನಿಯನ್ನೊ ಕಳ್ಳು ಸ್ವಾರ್ಲು ಮೀನನ್ನೊ, ಕಡೆಗೆ ಮಜ್ಜಿಗೆ ಉಪ್ಪಿನಕಾಯಿಯನ್ನೊ ಸವಿದೇ ಮುಂದುವರಿಯುತ್ತಿದ್ದನು. ಅದಕ್ಕೆ ಬದಲಾಗಿ ಅವನು ಇತರ ಪ್ರಯಾಣಿಕರಂತೆ ದುಡ್ಡು ಕಾಸು ಕೊಡುತ್ತಿರಲಿಲ್ಲ. ಅವನ ಹತ್ತಿರ ಆ ಪದಾರ್ಥ ಇರುತ್ತಿದ್ದುದೂ ಅಷ್ಟಕ್ಕಷ್ಟೇ! ಜಾತ್ರೆಗೊ ತೇರಿಗೋ ಹೋಗುವಾಗ ಹೆಗ್ಗಡೇರ ಹತ್ತಿರ ಗೋಗೆರೆದು ಒಂದೆರಡಾಣೆ ದಕ್ಕಿಸಿಕೊಂಡರೆ ಅದೇ ಯಥೇಚ್ಛ. ಆದರೆ ಕಾಡಿನಲ್ಲಿ ಬರುವಾಗ, ಅದು ಸಮಯವಾಗಿದ್ದರೆ, ಒಳ್ಳೆಯ ಎಳೆ ಕಳಲೆ ಮುರಿದು ತಂದುಕೊಡುತ್ತಿದ್ದನು. ಪಯಣ ಕೈಕೊಳ್ಳುವ ಸಮಯದಲ್ಲಿ ತಾನು ಒಡ್ಡಿದ ಶೆಬೆಗೆ ಕಾಡುಕೋಳಿಯೂ ಚಿಟ್ಟುಕೋಳಿಯೊ ಸಿಕ್ಕಿಬಿದ್ದಿದ್ದರೆ ಅದನ್ನೂ ಎಷ್ಟೋ ಸಾರಿ ತಂದುಕೊಟ್ಟದ್ದನು. ಅಣಬೆಯ ಕಾಲದಲ್ಲಿ ಅಕ್ಕಿ ಅಳಬಿ, ಹೆಗ್ಗಾಲಳಬಿ, ಚುಳ್ಳಳಬಿ, ಕಾಸರ್ಕನಳಬಿ ಇವುಗಳನ್ನು ತಂದುಕೊಡುತ್ತಿ ದ್ದನು. ಒಮ್ಮೊಮ್ಮೆ ಇತರರ ಅಡಕೆ ಬಾಳೆ ತೋಟಗಳಲ್ಲಿ ಹಾದು ಬೇಲಿಯ ತಡಬೆ ದಾಟಿ ಬರುವ ಪ್ರಮೇಯ

ಒದಗಿದಾಗ ಬಾಳೆಯ ಗೊನೆಗಳನ್ನೂ ತಂದು ಕೊಡುತ್ತಿದ್ದುದೂ ಉಂಟು! ಅಲ್ಲದೆ ತಾನು ಅಲ್ಲಿಗೆ ಬಂದಾಗ ಅಂತಕ್ಕ ಸೆಟ್ತಿಯವರಿಗೆ ಏನಾದರೂ ತುರುತ್ತಾಗಿ ಆಗಬೇಕಾದ ಸಣ್ಣ ಪುಟ್ಟ ಕೆಲಸಗಳನ್ನೂ ಮಾಡಿಕೊಡುತ್ತಿದ್ದನು'. (ಕುವೆಂಪು:2006ಬ:51)

ದೇವಯ್ಯ ಅಂತಕ್ಕ ಸೆಟ್ಟಿಯ ಮಗಳು ಕಾವೇರಿಗೆ ಒಂದು ಹರಳುಂಗುರ ಕೊಟ್ಟಿದ್ದನು. ಅದು ಎಲ್ಲೋ ಬಿದ್ದಾಗ ಚೀಂಕ್ರನ ಕೈ ಸೇರಿತು. ಅವನು ಅದನ್ನು ಕರೀಂಸಾಬಿಯ ಬಳಿಗೊಯ್ದು ತನಗೆ ಬೇಕಾದ ಸಾಮಾನುಗಳನ್ನು ಮಳಿಗೆಯಿಂದ ತೆಗೆದುಕೊಂಡು ಹೋದನು. (ಕುವೆಂಪು:2006ಬ:519)

ವ್ಯಾಪಾರಿಗಳಿಗೂ ಒಕ್ಕಲುಗಳಿಂದ ಮತ್ತು ಆಳುಗಳಿಂದ ಹಣ ದೊರೆಯುವುದಿಲ್ಲವೆಂಬ ಸತ್ಯ ತಿಳಿದು ಬಿಟ್ಟಿತ್ತು. ಹೀಗೆ ವಿನಿಮಯದ ಮೂಲಕವೇ ಮಲೆನಾಡಿನ ಆಂತರಿಕ ವ್ಯಾಪಾರ ನಡೆಯುತ್ತಿತ್ತು.

ಇಂತಹ ವ್ಯಾಪಾರದಲ್ಲಿ ಹೊರಗಿನಿಂದ ಮುಖ್ಯವಾಗಿ ದಕ್ಷಿಣ ಕನ್ನಡದಿಂದ ಬಂದ ಮುಸ್ಲಿಂ ಜನಾಂಗದ ವ್ಯಾಪಾರಿಗಳೇ ಮುಖ್ಯರಾಗಿದ್ದರು. ಹೀಗೆ ವ್ಯಾಪಾರಕ್ಕಾಗಿ ಮಲೆನಾಡಿಗೆ ಬಂದು ವ್ಯಾಪಾರ ಮಾಡಿ ಮರಳಿ ತಮ್ಮ ನಾಡಿಗೆ ಹಿಂದಿರುಗುತ್ತಿದ್ದರು. ಅಲ್ಲದೆ ಈ ವ್ಯಾಪಾರಿಗಳು ಲೇವಾದೇವಿ ವ್ಯವಹಾರದಲ್ಲೂ ತೊಡಗಿಸಿ ಕೊಂಡಿದ್ದರು.

ಇವರು ಮಲೆನಾಡಿನಲ್ಲಿ ಖಾಯಂ ಆಗಿ ನೆಲೆಸಿದ್ದು ಕಡಿಮೆ. ಹಾಗಾಗಿ ಇಲ್ಲಿ ದೊರೆತ ಲಾಭ ರಾಜ್ಯದ ಹೊರಗೆ ದಕ್ಷಿಣ ಕನ್ನಡಕ್ಕೆ ಹರಿಯಿತು. ನಮ್ಮ ರಾಜ್ಯದ ಜನರನ್ನು ಸಾಲವಂದಿಗರಾಗಿರನ್ನಾಗಿ ಮಾಡಿದರು. ಮಲೆನಾಡ ಜನರ ಅಜ್ಞಾನ ಮುಗ್ಧತೆಯನ್ನು ಶೋಷಿಸಿ, ಮಲೆನಾಡ ಐಶ್ವರ್ಯವನ್ನು ತಮ್ಮ ನಾಡಿಗೆ ಸಾಗಿಸಿದರು.

ಈ ಅಂಶವನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಸೂಚಿಸಲಾಗಿದೆ. ಚೀಂಕ್ರ ದೇವಯ್ಯ ಕಾವೇರಿಗೆ ಕೊಟ್ಟ ಹರಳುಂಗುರವನ್ನು ಕದ್ದು ಕರೀಂಸಾಬಿಗೆ ಕೊಟ್ಟಾಗ, ಅವರು ಅದರ ಪೂರ್ವೇತಿ ಹಾಸವನ್ನು ನೆನಪಿಸಿಕೊಳ್ಳುವರು. ಆ ಉಂಗುರ ಸೋನಗಾರರ ದಂಪತಿಗಳದಾಗಿದ್ದು, ಇವರ ದರೋಡೆಯ ಗುಂಪು ಆಗುಂಬೆ ಘಾಟಿಯಲ್ಲಿ ನಡೆಸಿದ್ದ ಒಂದು ಕೊಲೆಯಲ್ಲಿ ದೊರಕಿದ್ದು ಎಂದು ನೆನಪಿಸಿಕೊಳ್ಳುತ್ತಾರೆ. ಆ ನವದಂಪತಿಗಳು ಗಟ್ಟದ ಮೇಲಣ ದುಡಿಮೆಯನ್ನು ಗಟ್ಟದ ಕೆಳಗಿದ್ದ ತಮ್ಮ ಊರಿಗೆ ಕೊಂಡೊಯ್ಯು ತ್ತಿದ್ದರು ಎಂಬ ವಿಷಯವನ್ನು ಸೇರಿಸುತ್ತಾರೆ. (ಕುವೆಂಪು:2006ಬ :519) ಇದು ಕರೀಂಸಾಬರು ಯುವಕ ರಾಗಿದ್ದಾಗ ನಡೆದ ಘಟನೆ. ಹಾಗಾಗಿ ಘಟ್ಟದ ಮೇಲಿನ ದುಡಿಮೆಯನ್ನು ಘಟ್ಟದ ಕೆಳಗೆ ಸಾಗಿಸುವುದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿತ್ತು ಎಂಬ ವಿಷಯ ತಿಳಿಯುತ್ತದೆ.

'ಕಾನೂರು ಹೆಗ್ಗಡಿತಿ'ಯ ರಂಗಪ್ಪ ಸೆಟ್ಟರು ಮತ್ತು ಗಂಗೆ ಸುಬ್ಬಮ್ಮನನ್ನು ಮೋಸ ಮಾಡಿ ಅವಳ ಒಡವೆಗಳನ್ನೆಲ್ಲ ಲಪಟಾಯಿಸಿ ಘಟ್ಟದ ಕೆಳಗೆ ಹೋದನು. ಅಲ್ಲದೆ ಹೋಗುವಾಗ ಹೊಸ ಆಳುಗಳನ್ನು ಕರೆತರುವುದಾಗಿ ಹೇಳಿ ರಾಮಯ್ಯನಿಂದ ಮುನ್ನೂರು ರೂಪಾಯಿಗಳನ್ನೂ ಪಡೆದಿದ್ದನು. (ಕುವೆಂಪು: 2006ಅ:581) ಹೀಗೆ ಮಲೆನಾಡಿನ ಸಿರಿ ದಕ್ಷಿಣ ಕನ್ನಡದ ಕಡೆ ಸೋರಿ ಹೋಗುತ್ತಿತ್ತು.

### 5.6 ವ್ಯಾಪಾರದಲ್ಲಿ ಮೋಸ :

ಮಲೆನಾಡು ಘಟ್ಟದ ಮೇಲಿನ ಪ್ರದೇಶವಾದ್ದರಿಂದ ಒಂದು ಊರಿನಿಂದ ಇನ್ನೊಂದು ಊರಿನ ಪೇಟೆಗೆ ಪ್ರಯಾಣ ಮಾಡುವುದು ಸುಲಭವಾಗಿರಲಿಲ್ಲ. ಹಾಗಾಗಿ 19ನೇ ಶತಮಾನದಲ್ಲಿ ಚಿಕ್ಕ ಊರು ಗಳಲ್ಲಿ ವ್ಯಾಪಾರದ ಮಾಧ್ಯಮ ವಸ್ತು ವಿನಿಮಯವೇ ಆಗಿತ್ತು. ಹೊರಗಿನ ಸಂಪರ್ಕ ಅಷ್ಟಾಗಿ ಇರಲಿಲ್ಲ ವೆಂದೇ ಹೇಳಬಹುದು.

ಈ ಕಾರಣದಿಂದಾಗಿ ಅಲ್ಲಿಯ ಜನರಿಗೆ ಪ್ರಪಂಚದ ಜ್ಞಾನ ಅಷ್ಟಾಗಿ ಇರಲಿಲ್ಲವಾಗಿ ವಸ್ತುಗಳ ಮೌಲ್ಯ, ಬೆಲೆ ತಿಳಿಯುವುದು ಅವರಿಗೆ ಸಾಧ್ಯವೇ ಇರಲಿಲ್ಲ. ಇವರ ಅಜ್ಞಾನ ಅಸಹಾಯಕತೆಗಳನ್ನು ಶೋಷಿಸಿ, ವ್ಯಾಪಾರಿಗಳು ಸಾಕಷ್ಟು ಲಾಭಗಳಿಸಿದ್ದರು.

ಇದಕ್ಕೆ ದೊಳ್ಳನ ಪ್ರಕರಣ ಒಂದು ಉದಾಹರಣೆಯಾದರೆ, ಚೀಂಕ್ರನದ್ದು ಮತ್ತೊಂದು. ಕಾವೇರಿಯ ಹರಳುಂಗುರ ಕದ್ದ ಚೀಂಕ್ರ ಕರೀಂಸಾಬಿಗೆ ಅದನ್ನು ತೋರಿಸುತ್ತಾನೆ. ಕರೀಂಸಾಬಿಗೆ ಅದರ ಬೆಲೆ ಗೊತ್ತಿದ್ದರೂ, ಅವನ ಬಾಯಿಂದ ಬಂದ ಮಾತೇ ಬೇರೆ.

'ಅಲ್ಲವೋ, ಚೀಂಕ್ರ, ನಿನಗೆ ಎಲ್ಲಿ ಸಿಕ್ಕುತ್ತವೆಯೋ ಇಂಥ ಪಡಪೋಸಿ ಮಾಲು, ಬರೀ ಗಿಲೀಟು. ಮೂರು ಕಾಸೂ ಬಾಳುವುದಿಲ್ಲ... ಮೊನ್ನೆ ನೀನು ತಂದು ಕೊಟ್ಟ ಅಡಕೆಯೂ ಪಡಪೋಸಿಯದ್ದೆ! ಹಸಿ ಅಡಕೆಯನ್ನೆ ತಟ್ಟೆಯಿಂದ ಹೊತ್ತು ತಂದಿದ್ದೆಯೋ ಏನೋ?... ಸರಿ, ಇರಲಿ ಬಿಡು. ಆಮೇಲೆ ಮಾತಾಡುವಾ. ಈಗ ನನಗೆ ಸಮಯ ಇಲ್ಲ. ನಿನಗೆ ಏನು ಸಾಮಾನು ಬೇಕೋ ಅಂಗಡಿಯಿಂದ ತೆಗೆದುಕೊಂಡು ಹೋಗಿರು. ಆಮೇಲೆ ಲೆಕ್ಕ ಮಾಡಿದರಾಯಿತು...' (ಕುವೆಂಪು:2006ಬ:519) ಎಂದು ಮರಮಾತಿಗೆ ಆಸ್ಪದವಿಲ್ಲದಂತೆ ಒಳಗೆ ನಡೆದನು. ದೊಳ್ಳನ ಅಡಕೆ ವಿನಿಮಯದ ಸಂದರ್ಭದಲ್ಲೂ ಹೀಗೇ ಮಾಡಿದ್ದನು. ವಸ್ತುವಿನ ನಿಜವಾದ ಮೌಲ್ಯಕ್ಕೆ ತಕ್ಕಂತೆ ಸಾಮಾನು ಕೊಡದೆ ಲಾಭ ಪಡೆದುಕೊಳ್ಳುತ್ತಿದ್ದನು.

ತಾನು ಕೊಟ್ಟ ವಸ್ತುವಿನ ಬೆಲೆ ತಿಳಿದ ಚೀಂಕ್ರನಾಗಲಿ ಅಥವಾ ದೊಳ್ಳ ಮುಂತಾದವರಾಗಲಿ ಏನೂ ಹೇಳುವಂತಿರಲಿಲ್ಲ. ಏಕೆಂದರೆ ಅವರು ಕರ್ಮೀನ್ ಸಾಬರಿಗೆ ಕೊಟ್ಟಿದ್ದು ಕಳ್ಳ ಮಾಲು. 'ಕಳುವಿನ ವ್ಯಾಪಾರ ದಲ್ಲಿ ಚೌಕಾಸಿಗೆ ಅವಕಾಶವೆಲ್ಲಿ?' ಇವರ ಇಂಥ ಗುಟ್ಟು ತಿಳಿದ ಕರ್ಮೀನ್ ಸಾಬಿಯಂಥ ವ್ಯಾಪಾರಿಗಳು ಅದರ ಪೂರ್ಣ ಲಾಭ ಪಡೆಯುತ್ತಿದ್ದರು.

ಕಡಿದಾಳು ರಾಮಪ್ಪಗೌಡರು ಅಡಕೆ ಬೆಳೆಗಾರರನ್ನು ಶೋಷಿಸುತ್ತಿದ್ದ ಪರವೂರಿನ ವ್ಯಾಪಾರಸ್ಥರ ಬಗ್ಗೆ ತಮ್ಮ ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ.

ಅಡಕೆ ವ್ಯಾಪಾರಸ್ಥರು ಸುಮಾರು ಡಿಸೆಂಬರ್ ಜನವರಿ ಫೆಬ್ರವರಿ ಈ ಮೂರು ತಿಂಗಳ ಕಾಲ ಮಲೆನಾಡಿನಲ್ಲಿದ್ದು ತೀರ್ಥಹಳ್ಳಿ, ಕೊಪ್ಪ ಶೃಂಗೇರಿ, ಹೊಸನಗರ ಮುಂತಾದ ಪ್ರದೇಶಗಳಿಂದ ಅಡಕ

ಖರೀದಿಸುತ್ತಿದ್ದರು. ಖರೀದಿಸಿದ ಅಡಕೆಯನ್ನು ಗಾಡಿಯಲ್ಲಿ ಶಿವಮೊಗ್ಗಕ್ಕೆ ಸಾಗಿಸಿ ಅಲ್ಲಿಂದ ರೈಲಿನಲ್ಲಿ ಬೀರೂರು ಬಳ್ಳಾರಿ ಕಡೆಗೆ ಸಾಗಿಸುತ್ತಿದ್ದರು.(ಕಡಿದಾಳು ರಾಮಪ್ಪಗೌಡ:1995:89)

ಹೀಗೆ ಕರೀಂ ಖಾನ್ ಸಾಹೇಬರು ಎಂಬ ಒಬ್ಬ ವ್ಯಾಪಾರಸ್ಥರು ಗೌಡರ ಅಥವ ಭಟ್ಟರ ಮನೆಗೆ ಅಡಕೆ ತೂಕಕ್ಕೆ ಬರುವಾಗ ಅಡಕೆ ತೂಕಕ್ಕೆ, ಮೂಟೆಗಳನ್ನು ಹೊರವುದಕ್ಕೆ, ಅಡಕೆಯನ್ನು ತಕ್ಕಡಿಗೆ ಏರಿಸುವುದಕ್ಕೆ, ಚೀಲ ಹಿಡಿಯುವುದಕ್ಕೆ ಹೀಗೆ ಎಲ್ಲ ಕೆಲಸಗಳಿಗೂ ತಮ್ಮ ಜನರನ್ನೇ ಕರೆತರುತ್ತಿದ್ದರು.

'ರಾಶಿಯಾದ ಕೂಡಲೆ ತರಪಡಿ ಅಂತ ತೂಕಕ್ಕೆ ಮುಂಚೆ ಎರಡು ಕೈ ಬೊಗಸೆ ಮಾಡಿ ರಾಶಿಯಿಂದ ಕೈಗೆ ಹಿಡಿದಷ್ಟು ಅಡಕೆಯನ್ನು ಚೀಲಕ್ಕೆ ಹಾಕುತ್ತಾರೆ. ಈ ರೀತಿ ಮೂರು ಸಲ ಹಾಕಬೇಕು. ಇದಾದ ನಂತರ ತೂಕ ಶುರು. ಆಗ ನಲವತ್ತನಾಲ್ಕು ಸೇರಿಗೆ ಒಂದು ಮಣ, ಹನ್ನೊಂದು ಸೇರಿನ ಒಂದು ತೂಕದ ಕಲ್ಲನ್ನು ತಕ್ಕಡಿಯ ಒಂದು ಭಾಗಕ್ಕೆ ಇಡುತ್ತಾರೆ. ಈ ಕಲ್ಲಿಗೆ ದಡಿಯದ ಗುಂಡೆಂದು ಹೆಸರು. (ಕಡಿದಾಳು ರಾಮಪ್ಪಗೌಡ:1995:90)

ಮೊದಲನೆಯ ತಕ್ಕಡಿ ಅಡಕೆ ತೂಕ ಮಾಡಿ ಚೀಲಕ್ಕೆ ಹಾಕಿದ ಕೂಡಲೆ ತೂಕ ಮಾಡುವವನು ಲಾಭ ಲಾಭ ಎನ್ನುತ್ತಾನೆ. ಅದು ಲಾಭದ ಸೆರೆ ಎಂದು ಮೂರು ಬೊಗಸೆ ಅಡಕೆಯನ್ನು ಚೀಲಕ್ಕೆ ಹಾಕುತ್ತಾನೆ.

'ಎರಡನೇ ತಕ್ಕಡಿ ಹಾಕಿ ಒಂದೋ ಒಂದೋ ಎನ್ನುತ್ತಾನೆ. ಮೊದಲನೆಯ ತಕ್ಕಡಿಯ ಲೆಕ್ಕವನ್ನೆ ಬಿಟ್ಟು ಬಿಡುತ್ತಾನೆ. ಹೀಗೆ ಆರನೆ ತಕ್ಕಡಿಯವರೆಗೆ ಹಾಕಿ ಏಳನೇ ತಕ್ಕಡಿ ಹಾಕಿದವನು ಮತ್ತೊಂದೋ ಮತ್ತೊಂದೋ ಎಂದು (ಏಳನೇ ತಕ್ಕಡಿಗೆ ಹೇಳುತ್ತಾ) ಎಂಟನೇ ತಕ್ಕಡಿ ಹಾಕಿ ಏಳೋ ಏಳೋ ಎನ್ನುತ್ತಾನೆ. ಹೀಗೆಲ್ಲಾ ಪೂರ ತೂಕ ಆದ ಮೇಲೆ ತಳರಾಶಿ ಎಂದು ಧೂಳಿನ ಅಂಶಕ್ಕೆ ಅಡಿ ಸೇರು ಪಂಚೇರು ಜಾಸ್ತಿ ತೂಕ ಮಾಡಿ ಹಾಕುತ್ತಾನೆ. ಎಲ್ಲಾ ತೂಕ ಆದ ಮೇಲೆ ಎಷ್ಟು ಮೂಟೆ ಅಡಿಕೆ ಆಯಿತು, ಹಸ ಎಷ್ಟು ಬೆಟ್ಟೆ ಎಷ್ಟು ಗೊರಬಲು ಎಷ್ಟು ಎಲ್ಲಾ ಲೆಕ್ಕ ಹಾಕುತ್ತಾರೆ. ಒಟ್ಟು ತರಪಡಿ, ತಳರಾಶಿ, ಲಾಭ ಸೆರೆ-ತೂಕದಲ್ಲಿ ಹೀಗೆ ಎಷ್ಟೋ ಅಡಕೆಯನ್ನು ಮೋಸದಿಂದ ಹೊಡೆಯುತ್ತಾ ಇದ್ದರು. ಈ ರೀತಿಯ ತೂಕ ಸಾಹೇಬರೊಬ್ಬರದ್ದೇ ಅಲ್ಲ ಅಡಿಕೆಯ ಲೇವಾದೇವಿ ವ್ಯಾಪಾರಿಗಳು ಹೆಚ್ಚು ಕಡಿಮೆ ಒಂದೇ... ಇವರಿಗೆ ಅಲ್ಲಲ್ಲಿ ಸ್ವಜಾತಿಯ ಏಜೆಂಟರುಗಳೂ ಇರುತ್ತಿದ್ದರು. ಅವರಿಗೆ ಹಣ ಕೊಟ್ಟು ಕಮಿಷನ್ನಿನ ಮೇಲೆ ವ್ಯಾಪಾರ ಮಾಡುತ್ತಿದ್ದರು... ಸೀಮೆಧಾರಣೆ ಹಾಕುವ ಲೇವಾದೇವಿಗಾರರಿಂದಲೂ ಕರೀಂ ಖಾನ್ ಸಾಹೇಬರಂತಹ ವ್ಯಾಪಾರಿಗಳಿಂದಲೂ ಅಂದಿನ ಅಡಿಕೆ ಬೆಳೆಗಾರರು ಸಾಲದಿಂದ ಭೂಗತರಾಗಿದ್ದರು; (ಕಡಿದಾಳು ರಾಮಪ್ಪಗೌಡ:1995:92)

ಹೀಗೆ ವ್ಯವಸ್ಥಿತವಾಗಿ ವ್ಯಾಪಾರದಲ್ಲಿ ಮೋಸ ನಡೆಯುತ್ತಿತ್ತು.

## 5.7 ವಲಸೆ :

ವ್ಯಾಪಾರದ ಸಂಬಂಧ ಘಟ್ಟದ ಕೆಳಗಿನ ವ್ಯಾಪಾರಿಗಳು ಘಟ್ಟದ ಮೇಲೆ ಅಂದರೆ ಮಲೆನಾಡಿಗೆ ಬರುತ್ತಿದ್ದರು ಎಂಬ ವಿಷಯ ಕುವೆಂಪು ಅವರ ಕಾದಂಬರಿಗಳಲ್ಲಿ ಚಿತ್ರಿತವಾಗಿದೆ. ಈ ವಿಷಯದಷ್ಟೇ ಇನ್ನೊಂದು ಮುಖ್ಯ ವಿಷಯ ಘಟ್ಟದ ಕೆಳಗಿನ ಆಳುಗಳ ಮಲೆನಾಡ ವಲಸೆ.

ಒಂದು ಊರಿನಿಂದ ಇನ್ನೊಂದು ಊರಿಗೆ ಕೆಲಸಕ್ಕೆ ವಲಸೆ ಹೋಗಬೇಕೆಂದರೆ ಕೆಲವು ಮುಖ್ಯ ಕಾರಣಗಳನ್ನು ಗಮನಿಸಬೇಕು.

1. ಸ್ವಂತ ಊರಿನಲ್ಲಿ ಉದ್ಯೋಗದ ಕೊರತೆ.
2. ಪರವೂರಿನಲ್ಲಿ ಕೂಲಿ ಆಳುಗಳಿಗೆ ಬೇಡಿಕೆ.

ಕುವೆಂಪು ಅವರ ಕಾದಂಬರಿಗಳಲ್ಲಿ ಘಟ್ಟದ ಕೆಳಗಿನಿಂದ ಅಂದರೆ ದಕ್ಷಿಣ ಕನ್ನಡದಿಂದ ಘಟ್ಟದ ಮೇಲಕ್ಕೆ ಅಂದರ ಮಲೆನಾಡಿಗೆ ಕೆಲಸಗಾರರು, ಆಳುಗಳು ವಲಸೆ ಬರುತ್ತಾರೆ. ಇದಕ್ಕೆ ಸ್ವಂತ ಊರಿನಲ್ಲಿ ಉದ್ಯೋಗದ ಕೊರತೆ ಕಾರಣವಾಗಿರಲಾರದು. ಏಕೆಂದರೆ ದಕ್ಷಿಣ ಕನ್ನಡವು ಕರಾವಳಿ ಪ್ರದೇಶವಾಗಿದ್ದು ಸಮುದ್ರದ ಮೂಲಕ ಹೊರದೇಶಗಳೊಡನೆ ಸಂಪರ್ಕ ಹೊಂದಿತ್ತು. ಅನೇಕ ವಸ್ತುಗಳ ಆಮದು ರಫ್ತು ಈ ಬಂದರುಗಳ ಮೂಲಕ ಆಗುತ್ತಿತ್ತು. ಆದ್ದರಿಂದ ಅಲ್ಲಿ ಉದ್ಯೋಗಕ್ಕೇನೂ ಕೊರತೆಯಾಗಿರಲಾರದು. ಆದ್ದರಿಂದ ಎರಡನೆ ಕಾರಣವು ಪ್ರಮುಖವಾಗಿರಬೇಕು.

ಮಲೆನಾಡಿನಲ್ಲಿ ಜನಸಂಖ್ಯೆ ಕಡಿಮೆ ಇತ್ತು. ಅಲ್ಲಿ ಮುಖ್ಯವಾಗಿ ಇದ್ದವರು ಜಮೀನ್ದಾರರು. ಒಕ್ಕಲಿಗರು, ಜೀತದಾಳುಗಳು, ಒಕ್ಕಲುಗಳು ತಮ್ಮ ಒಕ್ಕಲು ಗದ್ದೆಯನ್ನು ನೋಡಿಕೊಳ್ಳುತ್ತಿದ್ದರು. ಜೀತದಾಳುಗಳು ಸಮಾನ್ಯವಾಗಿ ಜಮೀನ್ದಾರರ ಮನೆಯ ಕೆಲಸಗಳನ್ನು ಮಾಡುತ್ತಿದ್ದರು. ಹಾಗಾಗಿ ಹೆಚ್ಚಿನ ಆಳುಗಳ ಅವಶ್ಯಕತೆ ಮಲೆನಾಡಿಗಿತ್ತು. ಕೆಲವು ವಿಶೇಷ ಕೆಲಸಗಳಾದ ಅಡಕೆಗೆ ಕೊಟ್ಟೆ ಕಟ್ಟುವುದು, ಕೊನೆ ತೆಗೆಯುವುದು ಇಂತಹ ತೋಟದ ಕೆಲಸಗಳಿಗೆ ದಕ್ಷಿಣ ಕನ್ನಡದವರು ಪಳಗಿದ್ದರು. ಈ ಕೆಲಸಗಳನ್ನು ಜೀತದಾಳುಗಳು ಹಾಗು ಒಕ್ಕಲುಗಳು ಕಲಿಯಲಿಲ್ಲ ಎಂದು ಹಾಲಪ್ಪ ನೆನಪಿಸಿ ಕೊಳ್ಳುತ್ತಾರೆ. (ಅನುಬಂಧ-ಹಾಲಪ್ಪ)

ಘಟ್ಟದ ಕೆಳಗಿನಿಂದ ಸೇರೆಗಾರರು ಘಟ್ಟದಾಳುಗಳ ಗುಂಪನ್ನು ಘಟ್ಟದ ಮೇಲೆ ಕರೆದುಕೊಂಡು ಬಂದು, ಜಮೀನ್ದಾರರ ಬ್ರಾಹ್ಮಣರ ಗದ್ದೆ ತೋಟಗಳಲ್ಲಿ ಕೆಲಸ ಮಾಡಿಸುತ್ತಿದ್ದರು. ಈ ಗುಂಪಿನಲ್ಲಿದ್ದ ಮರಾಠಿಗರು ಕೊನೆ ಇಳಿಸುವುದರಲ್ಲಿ ನಿಷ್ಣಾತರಾಗಿದ್ದರು. ಈ ಸೇರೆಗಾರರು ಸಾಮಾನ್ಯವಾಗಿ ಸೆಟ್ಟರಾಗಿರುತ್ತಿದ್ದರು. ಜಮೀನಿನ ಉಸ್ತುವಾರಿಯ ಕೆಲಸ, ಇವರದಾಗಿರುತ್ತಿತ್ತು. ಮಂಗಳೂರು, ಉಡುಪಿ ಕುಂದಾಪುರದಿಂದ ಕೆಲಸದವರನ್ನು ಕೆಲಸಕ್ಕೆ ಕರೆದುಕೊಂಡು ಬರುತ್ತಿದ್ದರು. ಇವರ ಭಾಷೆ ತುಳು. (ಅನುಬಂಧ-ಶೇಷಪ್ಪಗೌಡ) (1920 ರಿಂದ ಈಚೆಗೆ ಬಯಲು ಸೀಮೆಯ ಜನ ಮಲೆನಾಡಿಗೆ ಕೆಲಸದ ಸಲುವಾಗಿ ಬರುತ್ತಿರುವರು. ಈಗಲೂ ಬಯಲು ಸೀಮೆಯಲ್ಲಿ ಮಳೆ ಇಲ್ಲದೆ ಕೃಷಿ ಚಟುವಟಿಕೆಗಳು ಕಡಿಮೆಯಾದಾಗ ಬಯಲುಸೀಮೆ ಯವರು ಮಲೆನಾಡಿಗೆ ಕೆಲಸಕ್ಕೆ ಬರುವುದುಂಟು)

ಜಮೀನ್ದಾರರಿಗೆ ದೊಡ್ಡ ಗದ್ದೆ ತೋಟಗಳು ಇರುತ್ತಿದ್ದರಿಂದ ಸೇರೆಗಾರರು ಘಟ್ಟದಾಳುಗಳನ್ನು ಕಟ್ಟಿಕೊಂಡು ಮೇಸ್ತ್ರಿಯಂತೆ ಅವರಿಂದ ಕೃಷಿ ಕೆಲಸಗಳನ್ನು ಮಾಡಿಸುತ್ತಿದ್ದರು. ಇವರಿಗೇ ಪ್ರತ್ಯೇಕವಾದ ಬಿಡಾರ ಇರುತ್ತಿತ್ತು. ಕೆಲಸಕ್ಕೆ ಪ್ರತಿಯಾಗಿ ಧವಸ ಧಾನ್ಯ ಹಾಗೂ ಹಣವನ್ನು ಪಡೆದುಕೊಂಡು ಗುತ್ತಿಗೆ ಕೆಲಸ ಮುಗಿಸಿದ ನಂತರ ತಮ್ಮ ನಾಡಿಗೆ ಮರಳುತ್ತಿದ್ದರು.

ಇದಕ್ಕೆ ಭೂಮಾಲಿಕರ ಹಾಗು ಸೇರೆಗಾರರ ನಡುವೆ ಲಿಖಿತ ಒಪ್ಪಂದ ಇರುತ್ತಿತ್ತು. (ಅನುಬಂಧ-ಸೇರೆಗಾರರ ಕರಾರು ಪತ್ರ)

ಸೇರೆಗಾರರು ಆಳುಗಳೊಂದಿಗೆ ಇರುತ್ತಿದ್ದರು. ನಿತ್ಯ ಆಳುಗಳಿಂದ ಕೆಲಸ ಮಾಡಿಸುವುದು ಹಾಗೂ ಸಾಹುಕಾರನ ಸ್ವಂತ ಸಾಗುವಳಿಯಲ್ಲಿರುವ ಅಡಕೆ ತೋಟದ ಕೊನೆ ಅಲ್ಲೇ ತೆಗೆದು ರೇಖೆ ಮಾಡಿಸುವುದು ಗದ್ದೆ ನಾಟಿ ಮಾಡಿಸುವುದು. ಕೊಯ್ಲು ಒಕ್ಕಣೆ ಕೆಲಸ ಮುಂತಾದ ಕೆಲಸಗಳನ್ನು ಮಾಡಿಸುತ್ತಿದ್ದರು. ಅದರೊಂದಿಗೆ ಒಕ್ಕಲುಗಳ ಮನೆಯಲ್ಲಿ ಗೇಣಿ ಭತ್ತ ಅಳಿಸಿ ಗಾಡಿಯಲ್ಲಿ ತುಂಬಿಸಿಕೊಂಡು ಸಾಹುಕಾರರ ಮನೆ ಪಣತಕ್ಕೆ ತುಂಬಿಸಬೇಕಿತ್ತು. ಅಡಕೆ ರೇಖೆಯನ್ನು ಇವರೇ ಮಾಡಿಸುತ್ತಿದ್ದರು. ಜಮೀನ್ದಾರರು ಇವರನ್ನು ಸಂಪೂರ್ಣವಾಗಿ ನಂಬಿ ಜವಾಬ್ದಾರಿ ಕೊಡುತ್ತಿದ್ದುದರಿಂದ ಇವರು ಸುಳ್ಳು ಲೆಕ್ಕ ತೋರಿಸಿ ತಮ್ಮ ಸಂಪಾದನೆಯನ್ನು ಘಟ್ಟದ ಕೆಳಗಿರುವ ತಮ್ಮ ಮನೆಗೆ ಸಾಗಿಸುತ್ತಿದ್ದರು. ಹಾಗಾಗಿ ಇವರ ಮೋಸ ಭೂಮಾಲಿಕರಿಗೆ ತಿಳಿಯುತ್ತಿರಲಿಲ್ಲ.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಸೇರೆಗಾರ ರಂಗಪ್ಪಸೆಟ್ಟರ ಬಗ್ಗೆ ಹೀಗಿದೆ.

'ರಂಗಪ್ಪಸೆಟ್ಟ'ರು ಗಟ್ಟದ ಕೆಳಗಿನವರು. ಕೂಲಿಯಾಳುಗಳನ್ನು ಗಟ್ಟದ ಮೇಲಕ್ಕೆ ತಂದು ಮೇಸ್ತ್ರೀಯಾಗಿ ಕೆಲಸ ಮಾಡಿಸುತ್ತಿದ್ದರು. ದಕ್ಷಿಣ ಕನ್ನಡದ ಜಿಲ್ಲೆಯಿಂದ ಬರುವ ಮೇಸ್ತ್ರಿಗಳನ್ನು ಸೇರೆಗಾರರೆಂದು ಕರೆಯುತ್ತಾರೆ.

ಸೆಟ್ಟರು ಕಾನೂರಿನಲ್ಲಿ ಐದು ವರ್ಷಗಳಿಂದಲೂ ಆಳಿಟ್ಟುಕೊಂಡು ಬಹಳ ನಂಬಿಕೆಯಿಂದ ಇದ್ದರು... ತಮ್ಮ ನಿಜವಾದ ಸಂಸಾರವು ಊರಿನಲ್ಲಿದ್ದುದರಿಂದ ಘಟ್ಟದ ಮೇಲೊಂದು ತಾತ್ಕಾಲಿಕ ಸಂಸಾರವನ್ನಿಟ್ಟುಕೊಳ್ಳುವುದು ಅಷ್ಟೇನೂ ಮಹಾ ಪಾಪವೆಂದು ಅವರು ಭಾವಿಸಿರಲಿಲ್ಲ. ತಮ್ಮ ಬೇಟದ ಹೆಣ್ಣಿನ ಸಹಾಯದಿಂದಲೆ ಅವರು ಚಂದ್ರಯ್ಯಗೌಡರನ್ನು ಒಳಗೆ ಹಾಕಿಕೊಂಡಿದ್ದಾರೆಂದು ವದಂತಿಯಿತ್ತು. (ಕುವೆಂಪು: 2006ಅ:41) ರಂಗಪ್ಪ ಸೆಟ್ಟರು ಚಂದ್ರಯ್ಯಗೌಡರಿಗೆ ವಂಚಿಸುತ್ತಿದ್ದ ವಿಷಯವೂ ಇದರಿಂದ ತಿಳಿಯುತ್ತದೆ.

ಘಟ್ಟದ ಕೆಳಗಿನ ಹೆಣ್ಣಾಳು ಗಂಡಾಳುಗಳು ತುಳು ಭಾಷೆಯಲ್ಲಿ ಮಾತಾಡುತ್ತ ಕಾನೂರಿನ ಕಬ್ಬಿನ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದರು. ಬಾಡುಗಳ್ಳ ಸೋಮ ಕೂಡ ಘಟ್ಟದ ಆಳಾಗಿದ್ದನು. ಕಾದಂಬರಿಯ ಕೊನೆಯಲ್ಲಿ ಅವನೇ ಘಟ್ಟದ ಕೆಳಗಿನಿಂದ ಆಳುಗಳನ್ನು ತಂದು ಸೇರೆಗಾರನಾಗುತ್ತಾನೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಐತ, ಪೀಂಚಲು, ಚೀಂಕ್ರ, ಅಕ್ಕಣಿ, ಪಿಜಿಣ, ಮೊಡಂಕಿಲ, ದೇಯಿ ಮೊದಲಾದವರು ಘಟ್ಟದಾಳುಗಳು. ಐತ, ಪೀಂಚಲು ಬಾಲ್ಯದ ದಿನಗಳಿಂದಲೇ ಅಲ್ಲಿದ್ದು ಮುಕುಂದಯ್ಯ ಚಿನ್ನಮ್ಮನ ಒಡನಾಡಿಗಳಾಗಿದ್ದರು. ಅನಂತರ ಚಿನ್ನಮ್ಮ ಮುಕುಂದಯ್ಯರೊಡನೆ ಹೂವಳ್ಳಿಯಲ್ಲಿ ನೆಲೆಸುತ್ತಾರೆ.

ಮೇಗರವಳ್ಳಿಯಲ್ಲಿ 'ಓಟ್ಲು ಮನೆ' ಇಟ್ಟುಕೊಂಡಿದ್ದ ಅಂತಕ್ಕ ಸೆಟ್ಟಿಯ ಗಂಡನೂ ಸೇರೆಗಾರನಾಗಿದ್ದನು. ಇವನು ಹಳೆಮನೆ ಸುಬ್ಬಣ್ಣನ ಬಳಿ ಕೆಲಸ ಮಾಡುತ್ತಿದ್ದು ಸುಬ್ಬಣ್ಣನ ಪ್ರೀತಿ ಪಾತ್ರನಾಗಿದ್ದನು. ತನ್ನ ಗಂಡನ ಸಾವಿನ ನಂತರ ಅಂತಕ್ಕ ಸೆಟ್ತಿ ಮೇಗರವಳ್ಳಿಯಲ್ಲೇ ನೆಲೆಸಿದ್ದಳು. ದಕ್ಷಿಣ ಕನ್ನಡದಿಂದ ವಲಸೆ ಬಂದವರಲ್ಲಿ ಕೋಣೂರಿನ ಐಗಳು ಅನಂತಯ್ಯನವರೂ ಒಬ್ಬರು.

ಕೃಷಿ ಕೆಲಸಕ್ಕಲ್ಲದೆ ವ್ಯಾಪಾರಕ್ಕಾಗಿ ಕರೀಂಸಾಬ, ಪುಡಿಸಾಬ, ನಾಟಿ ವೈದ್ಯರಾದ ಮಲೆಯಾಳಿ ಕಣ್ಣಾ ಪಂಡಿತ, ದಕ್ಷಿಣ ಕನ್ನಡದಿಂದ ಮಲೆನಾಡಿಗೆ ಬಂದು ನೆಲೆಸಿದವರು. ಜವಳಿ ಅಂಗಡಿ ಕಾಮತರು, ದಿನಸಿ ಅಂಗಡಿ ಪೈಗಳು - ಇವರ ಬಗ್ಗೆ 'ಮಲೆನಾಡಿನಲ್ಲಿ ಮದುಮಗಳು' ಕಾದಂಬರಿಯಲ್ಲಿ ಸೂಚಿತವಾಗಿದೆ. ಹೆಸರುಗಳಿಂದ ಇವರೂ ಘಟ್ಟದ ತಗ್ಗಿನವರು ಎಂದು ಊಹಿಸಬಹುದು.

ಘಟ್ಟದಾಳುಗಳನ್ನು ಮಲೆನಾಡಿಗರು ಎಷ್ಟರ ಮಟ್ಟಿಗೆ ಅವಲಂಬಿಸಿದ್ದರೆಂದು ಕಡಿದಾಳು ರಾಮಪ್ಪ ಗೌಡರು ಹೀಗೆ ತಿಳಿಸಿರುವರು. ಮಳೆಗಾಲ ಆರಂಭವಾಗುತ್ತಿದ್ದಂತೆ ಅದಕ್ಕೆ ಮುಂಚಿತವಾಗಿ ಮುಗಿಸಬೇಕಾದ ಕೆಲಸಗಳಲ್ಲಿ ಮುಖ್ಯವಾದ್ದದ್ದು ಅಡಕೆ ಕೊನೆಗಳಿಗೆ ಕೊಟ್ಟೆ ಕಟ್ಟಬೇಕಾದುದು. ಇಂದಿನಂತೆ ಅಂದು ಬೋರ್ಡೋ ದ್ರಾವಣವನ್ನು ಸಿಂಪಡಿಸುವ ಕ್ರಮ ಇರಲಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಆದರೂ ಕೊಳೆ ರೋಗ ಬಂದು ಅಡಕೆ ಕಾಯಿಗಳು ಉದುರಿ ಹೋಗುತ್ತವೆ.

ಒಮ್ಮೆ ಕೊಟ್ಟೆ ಕಟ್ಟುವರು ಬಂದು ಕೆಲಸಕ್ಕೆ ಮುಂಗಡ ಹಣ ಪಡೆದುಕೊಂಡಿರಲಿಲ್ಲ. ಈ ವರ್ಷ ಅವರು ಬರುತ್ತಾರೋ ಇಲ್ಲವೋ? ಆ ಕೆಲಸ ತಾವೇ ಕಲಿಯೋಣವೆಂದರೆ ಕೊನೆಯ ಗಳಿಗೆಯಲ್ಲಿ ಅದು ಅಸಾಧ್ಯ ಎಂದು ಜಮೀನ್ದಾರರು, ಶ್ರೀಮಂತರು ಯೋಚಿಸಿದರು. ಏಕೆಂದರೆ ಮರ ಹತ್ತಲು ಕಲಿತರೂ ಮರದ ತಲೆಯಲ್ಲಿ ಕುಳಿತು ಮರಗಳನ್ನು ದೋಟಿಯಿಂದ ಎಳೆದು ಕೊಟ್ಟೆ ಕಟ್ಟುವುದು ಕಷ್ಟವೇ. ಅಕಸ್ಮಾತ್ ಕೈತಪ್ಪಿದರೆ ಐವತ್ತು ಅರವತ್ತು ಅಡಿ ಎತ್ತರದಿಂದ ಬೀಳುವ ಭಯವಿತ್ತು.

ಸಾವಿರಕ್ಕೆ ಹತ್ತು-ಹದಿನೈದು ರೂಪಾಯಿಗಳನ್ನು ಕೊಟ್ಟೆ ಕಟ್ಟುವವರು ಕೇಳಿದಷ್ಟು ಕೊಡುತ್ತಾ ಬಂದರೂ ಏನೂ ಪ್ರಯೋಜನವಾಗಲಿಲ್ಲ ಎಂದು ಮರುಗಿದರು. ಆ ಆಳುಗಳು ಸೇತುವೆ ಕಟ್ಟುವ ಕೆಲಸಕ್ಕೆ ಹೋಗಿರುವರೆಂದು ತಿಳಿದು ಕಂಗಾಲಾದರು.

ಘಟ್ಟದಾಳುಗಳು ಅಡಕೆಗೆ ಕೊಟ್ಟೆ ಕಟ್ಟಲು ಬರದೇ ಇದ್ದರೆ ಆಗುವ ಪರಿಣಾಮಗಳು ಒಬ್ಬ ಅಡಿಕೆ ಬೆಳಗಾರನಿಂದ ತಿಳಿಯುತ್ತದೆ.

"... ಹೆಚ್ಚು ಕಡಿಮೆ ಆದರೆ ಕೊಳೆ ರೋಗ ಬಂದು ಒಂದು ವಾರದಲ್ಲೇ ಅಡಿಕೆ ಕಾಯಿ ಎಲ್ಲಾ ಉದುರಿ ನೆಲ ಸೇರುತ್ತೆ. ಇದೇ ಸಮಯ ಅಂತ ಸಾಲ ಕೊಟ್ಟವ ಆಸ್ತಿ ಒಳಗ್ಹಾಕಾಕೆ ಗೀಂತಾನೆ. ಈ ಮೂರು ನಾಲ್ಕು ರೂಪಾಯಿಯ ಅಡಿಕೆ ಧಾರಣೇಲಿ ಸಾಲ ತೀರಿಸುವುದಾದರೂ ಹೇಗೆ? ಅದರಾಗೂ ಕೊಳೆ ರೋಗ ಬಂದು ಉದುರಿ ಹೋದರೆ ಅವ ನೆಗೆದು ಬಿದ್ದಂಗೆ. ನೆಗೆದು ಬೀಳೋದು ಏನು ಬಂತು? ಹೋದ ವರ್ಷ ಆ ಮೊಳಲಿಮನೆ ಈರೇಗೌಡರು ತ್ವಾಟಕ್ಕೆ ಕೊಟ್ಟೆ ಕಟ್ಟೋಕೆ ಸಕಾಲಕ್ಕೆ ಜನ ಸಿಗದೆ ಕೊಳೆ ರೋಗ ಬಂದು ಪೂರಾ ಅಡಕೆ ಉದುರಿ ಹೋಗಿ ಪರ್ವತಪುರದ ಮಂಜಭಟ್ಟರಿಂದ ಮಗನ ಮದುವೆಗೆ ತಂದ ಸಾಲದ ಅಸಲು ಹೋಗಲಿ, ಬಡ್ಡಿ ಕಟ್ಟೂಕೂ ಆಗಲಿಲ್ಲ. ಕಡೆಗೆ ಮಂಜಭಟ್ಟರು ದಾವಾ ಹಾಕಿ ಅವನ ಮನೆ ಜಪ್ತಿ ಮಾಡಿಸಿದ್ರು. ಈರೇಗೌಡ ಮರ್ಯಾದಸ್ತ, ಅವನು ರಾತ್ರಿಯೇ ನೇಣು ಹಾಕಿಕೊಂಡು ಸತ್ತ." (ಕಡಿದಾಳು ರಾಮಪ್ಪಗೌಡ :1995:111)

ಕೃಷಿ ಕೆಲಸಕ್ಕೆ ಘಟ್ಟದಾಳುಗಳನ್ನು ಕರೆದುಕೊಂಡು ಬರುತ್ತಿದ್ದ ಸೇರೆಗಾರರು ಭೂಮಾಲಿಕರೊಡನೆ ಕೆಲಸದ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಅದನ್ನು ಮೀರಿದರೆ 'ಬ್ರೀಚ್ ಆಫ್ ಕಾಂಟ್ರಾಕ್ಟ್' ಎಂದು ಕೋರ್ಟಿಗೆ ದಾವಾ ಹಾಕುವ ಹಕ್ಕು ಭೂಮಾಲಿಕರಿಗಿರುತ್ತಿತ್ತು. (ಅನುಬಂಧ-ಸೇರೆಗಾರರ ಕರಾರು ಪತ್ರ)

❐

ಅಧ್ಯಾಯ : ೬

# ಉಪಸಂಹಾರ

# ಅಧ್ಯಾಯ : ೬

# ಉಪಸಂಹಾರ

ನಮ್ಮ ದೇಶದ ಬಹುತೇಕ ಕೃಷಿ ಕಾರ್ಮಿಕರು ಮೂಲತಃ ಕೆಳಜಾತಿ ಹಾಗು ಬುಡಕಟ್ಟುಗಳಿಗೆ ಸೇರಿದವರು. ವರ್ಣಾಧಾರಿತ ಶ್ರೇಣೀಕೃತ ಜಾತಿಗಳಲ್ಲದೆ ಊಳಿಗಮಾನ್ಯ ಪದ್ಧತಿ ಸಹ ಗ್ರಾಮೀಣ ಬಡತನಕ್ಕೆ ಕಾರಣವಾಗಿದೆ. ಇದರೊಂದಿಗೆ ಪುರೋಹಿತಶಾಹಿಗಳ ಪ್ರಭಾವ, ಆರ್ಥಿಕ ಅಸಮಾನತೆಗಳು, ಕೆಲವೇ ಜನರಲ್ಲಿ ಅಧಿಕಾರದ, ಆಸ್ತಿಯ ಕೇಂದ್ರೀಕರಣ-ಇವು ಹಳ್ಳಿಗಳ ಜನಜೀವನದ ಏರುಪೇರಿಗೆ ಕಾರಣವಾದ ಅಂಶಗಳು.

ಆರ್ಥಿಕ ಅಸಮಾನತೆಗಳು ಅಸಮಾನ ಆದಾಯದ ಹಂಚಿಕೆಗೆ ಸಂಬಂಧಿಸಿದ್ದು. ಇದಕ್ಕೆ ಕಾರಣ ಅಸಮಾನ ಅವಕಾಶಗಳು. ಅಸಮಾನ ಆಸ್ತಿಯ ಒಡೆತನ ಮತ್ತು ಇನ್ನಿತರ ಸಾಂಸ್ಥಿಕೇತರ ಅಂಶಗಳು. ಇದು ಬಡತನಕ್ಕೆ ಕಾರಣವಾಗುವಂಥದ್ದು. ಭಾರತದಲ್ಲಿ ಅಸಮಾನ ಆಸ್ತಿಯ ಒಡತನ, ವಿಶೇಷವಾಗಿ ಭೂಮಿಯ ಒಡೆತನ ವರಮಾನದ ಅಸಮಾನತೆಯನ್ನು ನಿರ್ಧರಿಸುತ್ತದೆ ಎಂದು ಅರ್ಥಶಾಸ್ತ್ರಜ್ಞರಾದ ದಾಂಡೇಕರ್ ಮತ್ತು ರತ್ ಅಭಿಪ್ರಾಯ ಪಡುತ್ತಾರೆ. (Thimmaiah G.:1983:50) ಕುವೆಂಪು ಅವರ ಕಾದಂಬರಿಗಳು ಈ ಅನಿಸಿಕೆಯನ್ನು ಸತ್ಯವೆಂದು ರುಜುವಾತು ಮಾಡುತ್ತವೆ.

ಶ್ರಮ, ಜನಸಂಖ್ಯೆ, ಅಭಿವೃದ್ಧಿ ಮುಂತಾದ ಆರ್ಥಿಕ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಜಗತ್ತಿನ ಯಾವ ಸಿದ್ಧಾಂತ ಪ್ರಮೇಯಗಳೂ ಗ್ರಾಮೀಣ ಕೃಷಿಯಾಧಾರಿತ ಆರ್ಥಿಕತೆಗೆ ಅಳವಡುವುದಿಲ್ಲ. ಪಾಶ್ಚಾತ್ಯದಲ್ಲಿ ಕೃಷಿಯೂ ಸಹ ಬಂಡವಾಳಶಾಹಿಯ ಹಿನ್ನಲೆಯಲ್ಲಿ ಇರುವುದರಿಂದ ಅವರ ಪ್ರಮೇಯಗಳು ಅವರಿಗಷ್ಟೇ ಅನ್ವಯವಾಗುತ್ತವೆ. ಭಾರತದಲ್ಲಿ ಸಾಂಸ್ಕೃತಿಕ, ಭೌಗೋಳಿಕ, ಸಾಮಾಜಿಕ ಭಿನ್ನತೆಗಳಿಂದ ಪಾಶ್ಚಾತ್ಯ ಸಿದ್ಧಾಂತಗಳಿರಲಿ, ಯಾವುದೇ ಒಂದು ಸಿದ್ಧಾಂತವನ್ನೇ ಇಡೀ ದೇಶಕ್ಕೆ ಅನ್ವಯಿಸುವುದು ಕೂಡ ಕಷ್ಟಕರವಾದದ್ದು.

ಕೃಷಿಯು ಭಾರತದಲ್ಲಿ ಬಹುತೇಕ ಜೀವನಾಧಾರಿತ ಕುಲಕಸುಬಾದ್ದರಿಂದ ಇದರಲ್ಲಿ ಬರುವ ಲಾಭ ಕಡಿಮೆ. ಆದ್ದರಿಂದ ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರಾದ ರಿಕಾರ್ಡೋ, ಜೇಮ್ಸ್ ಮಿಲ್, ಆಡಂ ಸ್ಮಿತ್‌ರವರ ವಿಚಾರಧಾರೆ, ಸಿದ್ಧಾಂತಗಳು ಭಾರತದಲ್ಲಿ ಯಶಸ್ವಿಯಾಗಲಿಲ್ಲ, ಆ ನಿಯಮಗಳಿಂದ ಬ್ರಿಟಿಷರ ಕಂದಾಯ ಹೆಚ್ಚಿರಬಹುದಾದರೂ ಆಂತರಿಕ ಆರ್ಥಿಕ ಸ್ಥಿತಿಗತಿಗಳನ್ನು ಅದು ಕಡೆಗಣಿಸಿತು. ಈ ಅಂಶಗಳನ್ನು ಜಮೀನ್ದಾರರಿಂದ ಒಕ್ಕಲುಗಳ, ಜೀತದಾಳುಗಳ ಶೋಷಣೆಯ ಸಂದರ್ಭಗಳಲ್ಲಿ ಕಾಣಬಹುದು.

‘ಕರೆನ್ಸಿ ಪದ್ಧತಿ’ ದೇಶಾದ್ಯಂತ ಜಾರಿಗೆ ಬರುತ್ತಿದ್ದ ಸಂದರ್ಭದಲ್ಲಿ ಮಲೆನಾಡಿನ ಸಮಾಜ ವಸ್ತು ವಿನಿಮಯ, ಪದ್ಧತಿಯನ್ನೇ ಅನುಸರಿಸಿತ್ತು. ಪರವೂರಿನ ವ್ಯಾಪಾರಿಗಳು ಮುಗ್ಧ ಜನರನ್ನು ಶೋಷಿಸಿ ಲಾಭ ಪಡೆದು ಆ ಲಾಭವನ್ನು ತಮ್ಮ ಊರಿಗೆ ಸಾಗಿಸುತ್ತಿದ್ದರು. ಈ ಮೂಲಕ ಮಲೆನಾಡಿನ ಆಸ್ತಿಯ ಸೋರಿಕೆಯಾಗುತ್ತಿತ್ತು. ಅಲ್ಲದೆ ಮಲೆನಾಡ ಸಮಾಜ ತನ್ನ ಜನರಿಗೆ ಮುಂಬರುವ ಅವಕಾಶ ಕೊಡದೆ ಪರವೂರಿನವರ ಮೇಲೆ ಅವಲಂಬಿತವಾಗಿತ್ತು. ಅಡಕೆಗೆ ಕೊಟ್ಟೆ ಕಟ್ಟುವ ಕೆಲಸವನ್ನು ಮಲೆನಾಡಿನ ಜನ ಕಲಿಯದೆ ಘಟ್ಟದ ಕೆಳಗಿನವರನ್ನೇ ಆಶ್ರಯಿಸುವುದನ್ನು ನೋಡಿದರೆ, ಈ ಜನರಲ್ಲಿ ಹೊಸ ಕೆಲಸ ಕಲಿಯುವಲ್ಲಿ ಉತ್ಸಾಹದ ಕೊರತೆಯನ್ನು ಸೂಚಿಸುತ್ತದೆ. ಉತ್ಪಾದನೆಯು ಬಿಕರಿಯಾಗುವುದು ಮಾರುಕಟ್ಟೆಯ ಮೂಲಕ. ಇದರ ಮುಖ್ಯ ಕಾರ್ಯನಿರ್ವಾಹಕ ವ್ಯಾಪಾರಿ. ಮಲೆನಾಡಿನ ಸ್ಥಳೀಯ ಜನರು ಕೃಷಿ, ಕೃಷಿಯಾಧಾರಿತ ತೊಂದರೆಗಳಲ್ಲಿ ಮುಳುಗಿದಾಗ ಪರವೂರಿನ ಜನರು ವ್ಯಾಪಾರದ ಲಾಭ ಪಡೆದುಕೊಂಡರು. ಕೇವಲ ತಮ್ಮ ಭೌಗೋಳಿಕ ವ್ಯಾಪ್ತಿಗಷ್ಟೇ ಸೀಮಿತವಾದ ಮಲೆನಾಡ ಜನ ಕೃಷಿ ಬಿಟ್ಟು ಇತರ ಕೆಲಸದ ಕಡೆ ಗಮನಹರಿಸಿದ್ದು ಕಡಿಮೆ ಎಂದು ತೋರುತ್ತದೆ.

ಏಳೆಂಟು ಮೈಲಿ ದೂರದಲ್ಲಿದ್ದ ತೀರ್ಥಹಳ್ಳಿಯನ್ನು ನೋಡದ ಜನ ಮೇಗರವಳ್ಳಿಯನ್ನೇ ಪಟ್ಟಣವೆಂದು ತಿಳಿಯುವರು. ಇಂಥವರು ಭೌಗೋಳಿಕವಾದ ಅಂಶಗಳಿಂದಾಗಿ ದೇಶದ ಮುಖ್ಯವಾಹಿನಿಯಿಂದ ದೂರವುಳಿದವರು. ಆಗ ದೇಶದಲ್ಲಿ ಬ್ಯಾಂಕುಗಳನ್ನು ಸ್ಥಾಪಿಸುವ ಪ್ರಕ್ರಿಯೆ ಆರಂಭಗೊಂಡು, ಲೇವಾದೇವಿಗಾರರ ಅಕ್ರಮ ಬಡ್ಡಿ ದರ ನಿಯಂತ್ರಣಕ್ಕೆ ಸರ್ಕಾರವು ಶ್ರಮಿಸುತ್ತಿದ್ದರೆ, ಈ ವರ್ಗ ಯಾರ ಭಯವಿಲ್ಲದೆ ತನ್ನ ಮನಸೋ ಇಚ್ಛೆ ಬಡ್ಡಿ, ಚಕ್ರಬಡ್ಡಿಯನ್ನು ಆಕರಗೊಳಿಸಿ ಜನರನ್ನು ಶೋಷಿಸುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಕಂಡ ಈ ವ್ಯವಸ್ಥೆ ಇಪ್ಪತ್ತನೆ ಶತಮಾನದಲ್ಲೂ ಮುಂದುವರೆದಿತ್ತು. ಕಾನೂರಿನ ಜನ 1930ರ ದಶಕದಲ್ಲೂ ನೋಟವನ್ನು ನೋಡಿರಲಿಲ್ಲವೆಂದರೆ, ಆ ಸಮಾಜ ಹೊರಜಗತ್ತಿನ ಬಗ್ಗೆ, ತನ್ನ ಸುತ್ತ ನಡೆಯುತ್ತಿದ್ದ ಬೆಳವಣಿಗೆಯ ಬಗ್ಗೆ ಹೇಗೆ ನಿರ್ಲಿಪ್ತವಾಗಿತ್ತು, ಮಾಹಿತಿ ರಹಿತವಾಗಿತ್ತು ಎಂಬುದು ತಿಳಿಯುತ್ತದೆ. ದಟ್ಟ ಅರಣ್ಯ ಪರ್ವತಗಳಿಂದ ಆವೃತವಾದ ನಾಡು ಹೊರ ಜಗತ್ತಿಗೆ ಕ್ರಿಶ್ಚಿಯನ್ ಮಿಶನರಿ ಗಳ ಮೂಲಕ ತೆರೆದುಕೊಳ್ಳಲಾರಂಭಿಸಿತು. ಆದರೂ ಮೌಢ್ಯ ಅಸಮಾನತೆಗಳಿಂದ ತುಂಬಿತ್ತು. ಇದರಿಂದ ಆ ಜನರು ನಿರಂತರವಾಗಿ ಒಂದಲ್ಲ ಒಂದು ಶೋಷಣೆಯನ್ನು ಅನುಭವಿಸುತ್ತಿದ್ದರು. ಸಂಪದ್ಭರಿತ ನಾಡಾದರೂ ಶ್ರೀಮಂತಿಕೆ ಎಂಬುದು ಕೈಹಿಡಿಯಷ್ಟು ಜನರ ಸ್ವತ್ತಾಗಿತ್ತು. ಆದರೂ ಪಾಶ್ಚಾತ್ಯ ದೇಶಗಳಲ್ಲಿ ಆಗುವಂತೆ ಉಳ್ಳವರ ಮತ್ತು ಬಡವರ ನಡುವಿನ ಘರ್ಷಣೆಯನ್ನು ನಾವು ಕಾಣುವುದಿಲ್ಲ. ಕಂಡರೂ ಅಲ್ಪ ಪ್ರಮಾಣದಲ್ಲಿಯೇ ಹೊರತು ಶೋಷಣೆಯನ್ನು ಹೋಗಲಾಡಿಸುವಷ್ಟು ದೊಡ್ಡ ಪ್ರಮಾಣದಲ್ಲಿಲ್ಲ. ಹಾಗು ಆ ಪ್ರತಿಭಟನೆಯು ಅಸಂಘಟಿತವಾದ್ದರಿಂದ ಅದಕ್ಕೆ ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ಬಲವಿರಲಿಲ್ಲ. ಹಾಗಾಗಿ ಅಂಥ ಪ್ರತಿಭಟನೆ ಘರ್ಷಣೆಯನ್ನು ಸುಲಭವಾಗಿ ಹತ್ತಿಕ್ಕಲಾಗುತ್ತಿತ್ತು.

ಒಂದು ಜನ ಸಮೂಹದ ಮೇಲೆ ಸಾಮಾಜಿಕ ಹಾಗು ಆರ್ಥಿಕ ಅಂಶಗಳು ಒತ್ತಡ ಹೇರಿ, ಒಂದು ಸಮುದಾಯದ ಗತಿಯನ್ನೇ ಬದಲಿಸಬಹುದು. ಈ ಎರಡು ಅಂಶಗಳ ಮಧ್ಯೆ ಭಿನ್ನತೆಯ ಗೆರೆ ಎಳೆಯಲಾಗದಂತೆ ಇವೆರಡೂ ಒಂದಾಗಿವೆ. ವರ್ಣಶ್ರೇಣಿಯಾಧಾರಿತ ಸಮಾಜವು ಮೇಲುಕೀಳೆಂಬ ಜಾತಿ

ಅಂತರಗಳನ್ನು ಸೃಷ್ಟಿಸಿದರೆ, ಆರ್ಥಿಕ ಅಂಶಗಳು ಹಣಕಾಸು, ಆಸ್ತಿ ಒಡೆತನದ ಆಧಾರದಿಂದ ಮೇಲು ವರ್ಗ ಕೆಳವರ್ಗಗಳನ್ನು ಸೃಷ್ಟಿಸಿತು.

ತಮ್ಮ ಪರಿಸರದ ಚಿತ್ರಣವನ್ನು ಓದುಗರೆದುರು ತೆರೆದಿಡುತ್ತ ಇಂತಹ ಅಂಶಗಳನ್ನು ಕುವೆಂಪು ಅವರು ಅಪ್ರಜ್ಞಾಪೂರ್ವಕವಾಗಿ ತಮ್ಮ ಕಾದಂಬರಿಗಳಲ್ಲಿ ತಂದಿದ್ದಾರೆ. ಒಂದು ಕಥೆಯ ಹಂದರದಲ್ಲಿ ವಾಸ್ತವತೆ ಯನ್ನು ತಂದು ತಮ್ಮ ಭಾಗದ ಸಾಮಾಜಿಕ ಇತಿಹಾಸದಂತೆಯೇ ಆರ್ಥಿಕ ಇತಿಹಾಸವನ್ನು ಕಟ್ಟಿಕೊಟ್ಟಿ ದ್ದಾರೆ. ಇದರಿಂದ ಒಂದು ಸಾಹಿತ್ಯವು ತನ್ನಲ್ಲಿ ಅಡಗಿಸಿಕೊಂಡಿರಬಹುದಾದ ಅನೇಕ ವಿಷಯಗಳತ್ತ ಗಮನಹರಿಸುವಂತೆ ಮಾಡಿದ್ದಾರೆ.

ಕೇವಲ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಪರಿಶೀಲನೆಗೆ ಒಳಪಟ್ಟಿದ್ದ ಕುವೆಂಪು ಕಾದಂಬರಿಗಳು ಮತ್ತು ಒಟ್ಟಾರೆ ಕನ್ನಡ ಸಾಹಿತ್ಯವನ್ನು ವಿಭಿನ್ನ ನೆಲೆಯಿಂದ ನೋಡುವ ಸಾಧ್ಯತೆಯು ಹೆಚ್ಚಿದೆ. ಉದಾ ಹರಣೆಗೆ ಕುವೆಂಪು ಕಾದಂಬರಿಗಳ ಸ್ತ್ರೀ ಪಾತ್ರಗಳ ವಿಶ್ಲೇಷಣೆಯಿಂದ ಅಂದಿನ ಮಹಿಳೆಯರ ಸಾಮಾಜಿಕ ಸ್ಥಾನಮಾನದ ಕಡೆ ಗಮನಹರಿಸುವುದರೊಂದಿಗೆ, ಆ ಮೂಲಕ ಅವರ ಆರ್ಥಿಕ ಹಿಂದುಳಿವಿಕೆಯ ಅಧ್ಯಯನ ಮಾಡಬಹುದು. ಈ ಸಂಪ್ರಬಂಧದಲ್ಲಿ ಬಂದಿರುವ ಜೀತ, ವ್ಯಾಪಾರ, ಲೇವಾದೇವಿ, ಜಮೀನ್ದಾರಿ (ರೈತವಾರಿ) ಪದ್ಧತಿ ಇವುಗಳ ಅಧ್ಯಯನ ಕೈಗೊಂಡು ಕರ್ನಾಟಕದ ಇತರ ಭಾಗಗಳ ಪದ್ಧತಿಯೊಂದಿಗೆ ಹೋಲಿಸಿ, ಈ ಪ್ರದೇಶದ ಅನನ್ಯತೆಯನ್ನು ತಿಳಿಯುವ ಪ್ರಯತ್ನ ಮಾಡಬಹುದು. ಕೇವಲ ಸಂಸ್ಕೃತಿಯ ಮೂಲಕ ಒಂದು ಕೃತಿಯನ್ನು ಅಧ್ಯಯನ ಮಾಡದೆ ಅದು ಬಿಚ್ಚುವ ಆರ್ಥಿಕ ಸ್ಥಿತಿಗತಿ ಗಳನ್ನು, ಅವುಗಳಿಗೆ ಕಾರಣಗಳು, ಪ್ರಭಾವಗಳು, ಪರಿಣಾಮಗಳನ್ನು ವಿಶ್ಲೇಷಿಸುವಂತಹ ಅಧ್ಯಯನಗಳನ್ನೂ ಕೈಗೊಳ್ಳಬಹುದಾಗಿದೆ.

ಅಂದಿನ ದಶಕದ ಕಾದಂಬರಿಗಳ ಕಥಾ ಹಂದರ ಕೇವಲ ಕಥಾ ನಾಯಕನ ಗುಣಗಾನ ಮಾಡುತ್ತಿದ್ದರೆ, ಕುವೆಂಪು ಅಂದಿನ ನಿಮ್ನ ವರ್ಗದ ಜನರ ಕಥೆಯನ್ನೂ ಅದೇ ಸಮಯದಲ್ಲಿ ಮೇಲುವರ್ಗದ ಜನರ ಬದುಕಿನ ಚಿತ್ರಣವನ್ನೂ, ಕಾದಂಬರಿಗಳಲ್ಲಿ ಏಕ ಪ್ರಕಾರದಲ್ಲಿ, ಯಾವುದೇ ಪಕ್ಷಪಾತವಿಲ್ಲದೆ ಕೊಡುತ್ತಾರೆ. ಆ ಸಮಾಜದಲ್ಲೇ ಕೆಳಮಟ್ಟದಲ್ಲಿ ನಡೆಯುವ ಪ್ರತಿಭಟನೆಯ ಸಂಗತಿಗಳನ್ನು ವಿವರಿಸುತ್ತಾರೆ. ಈ ನಿಟ್ಟಿನಲ್ಲಿ ಕುವೆಂಪು ಅವರ ಕಾದಂಬರಿಗಳನ್ನು ನಾನಾ ಶಿಸ್ತಿನ ಮುಖಾಂತರ ಅಂದರೆ ಮಹಿಳಾ ಅಧ್ಯಯನ, ಸಾಂಸ್ಕೃತಿಕ ಅಧ್ಯಯನ, ಸಾಮಾಜಿಕ, ಆರ್ಥಿಕ, ಮನಶಾಸ್ತ್ರೀಯ, ನೈಸರ್ಗಿಕ ಸಂಪನ್ಮೂಲ, ಭೌಗೋಳಿಕ, ಐತಿಹಾಸಿಕ ದೃಷ್ಟಿಕೋನಗಳಿಂದಲೂ ಗ್ರಹಿಸಲು ಸಾಧ್ಯವಾಗುತ್ತದೆ. ಕಳೆದ ಶತಮಾನದ ವಿವರಣೆಗಳನ್ನು ಹೊಂದಿದ ಕಾದಂಬರಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು, ಇಂದಿನ ಬದಲಾದ ಪರಿಸ್ಥಿತಿ, ಅಭಿವೃದ್ಧಿಯತ್ತ ಗಮನ ಹರಿಸಿ ತೌಲನಿಕ ಅಧ್ಯಯನ ಮಾಡಬಹುದಾಗಿದೆ.

ಇಲ್ಲಿ
ಯಾರೂ ಮುಖ್ಯರಲ್ಲ;
ಯಾರೂ ಅಮುಖ್ಯರಲ್ಲ
ಯಾವುದೂ ಯಃಕಶ್ಚಿತವಲ್ಲ!

ಇಲ್ಲಿ
    ಯಾವುದಕ್ಕೂ ಮೊದಲಿಲ್ಲ;
        ಯಾವುದಕ್ಕೂ ತುದಿಯಿಲ್ಲ;
            ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ;
                ಕೊನೆ ಮುಟ್ಟುವುದೂ ಇಲ್ಲ!

ಇಲ್ಲಿ
    ಎಲ್ಲಕ್ಕೂ ಇದೆ ಅರ್ಥ;
     ಯಾವುದೂ ಅಲ್ಲ ವ್ಯರ್ಥ;
        ನೀರೆಲ್ಲ ಊ ತೀರ್ಥ! (ಕುವೆಂಪು : 2006ಬ)

'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದುವ ಓದು ಗರಿಗೆ ಕುವೆಂಪು ಅವರು ಮೊದಲು ಮೇಲಿನ ಸೂಚನೆಯನ್ನು ಕೊಡುತ್ತಾರೆ. ಕಾದಂಬರಿಯಲ್ಲಿ ಬರುವ ಸೂಕ್ಷ್ಮ ಚಿತ್ರಣವೂ ಒಂದೊಂದು ಮಹತ್ತಾದ ಅರ್ಥವಂತಿಕೆಯನ್ನು ಪಡೆದಿವೆ. ಸುಬ್ಬಮ್ಮ ಓಬಯ್ಯ ನೋಟನ್ನು ಕಂಡರಿಯದ ಒಂದು ಸಣ್ಣ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಂದಿನ ಹಣಕಾಸಿನ ವ್ಯವಸ್ಥೆಯ ಒಂದು ಪ್ರಮುಖ ನೋಟ ಸಿಗುತ್ತದೆ. ಹೀಗೆ ಪ್ರತಿಯೊಂದು ಘಟನೆಯೂ ಅನೇಕ ಗಂಭೀರವಾದ ಹೊಳಹನ್ನು ತನ್ನಲ್ಲಿ ಅಡಗಿಸಿ ಕೊಂಡಿದೆ. ಸಮುದಾಯದ ಆರ್ಥಿಕ ಸ್ಥಿತಿಗತಿಗಳನ್ನರಿಯಲು ಕಾದಂಬರಿಯ ಮೂಲಕ ಅಧ್ಯಯನದ ಪ್ರಯತ್ನ ಮಾಡಲಾಗಿದೆ.

ಸಾಹಿತಿಯ ಗ್ರಹಿಕೆಯಿಂದ ಯಾವುದೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಮಾಜದ ವಸ್ತುನಿಷ್ಠ ಚಿತ್ರಣವನ್ನು ಸಾಹಿತ್ಯದಲ್ಲಿ ಕಥೆ ನಡೆಯುವ ಸ್ಥಳ, ಪಾತ್ರಗಳು, ಅವರೊಳಗಿನ ಸಂಬಂಧ, ಘರ್ಷಣೆ ಇವುಗಳು ಕಾದಂಬರಿ ಕಥೆಗಳಲ್ಲಿ ಸಹಜವಾಗಿ ಬಂದಿರುತ್ತವೆ. ಇಂಥ ಚಿತ್ರಣಗಳು ಸಮಾಜದ ಮಾನವ ಮುಖೀ ಅಧ್ಯಯನಕ್ಕೆ ಹೆಚ್ಚು ಸೂಕ್ತವಾಗಿದೆ. ಸಾಹಿತ್ಯವನ್ನು ಶಿಸ್ತುಬದ್ಧ ಜ್ಞಾನಕ್ಕೆ ಪರ್ಯಾಯವಾಗಿ ಬಳಸಿಕೊಳ್ಳಲಾಗುವುದಿಲ್ಲ. ಆದರೆ ಅದಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದಾಗಿದೆ.

❐

# ಅನುಬಂಧಗಳು

# ಅನುಬಂಧ - 1

**ಹೆಸರು** : ಶ್ರೀಮತಿ ಲಕ್ಷ್ಮೀ ದೇವಮ್ಮ

**ವಯಸ್ಸು** : 88 ವರ್ಷ

**ಊರು** : ದೇವಂಗಿ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ

**ವೃತ್ತಿ** : ಗೃಹಿಣಿ

(ಇವರು ದಿವಂಗತ ದೇವಂಗಿ ಮಾನಪ್ಪನವರ ಪತ್ನಿ. ದೇವಂಗಿಯ ದೊಡ್ಡ ಜಮೀನ್ದಾರರ ಕುಟುಂಬದವರು)

ಜಮೀನ್ದಾರರ ಮೂಲ ಕಸುಬು ಒಕ್ಕಲುತನ. ಇವರು ಆಳುಗಳನ್ನು ಇಟ್ಟು ಜಮೀನು ಕೆಲಸ ಮಾಡಿಸುತ್ತಿದ್ದರು. ಕಾಡಿರುವ ಜಾಗದಲ್ಲಿ ಅಂದರೆ ಕಾಡು ಪ್ರಾಣಿಗಳು (ಚಿರತೆ, ಕಾಡುಕೋಣ, ಕಾಡು ಹಂದಿ ಇತ್ಯಾದಿ) ಹೆಚ್ಚಾಗಿರುವ ಜಮೀನನ್ನು ವಿಶೇಷವಾಗಿ ಮರಾಠಿಗರಿಗೆ ಸಾಗುವಳಿಗೆ ಕೊಡುತ್ತಿದ್ದರು. ಏಕೆಂದರೆ ಅವರು ಶಿಕಾರಿಯಲ್ಲಿ ನಿಪುಣರಿದ್ದರು. ಇವರಿಗೆ ಶಿಕಾರಿಗೆ ಕೋವಿಯನ್ನು ಒಡೆಯರೇ ಕೊಡುತ್ತಿದ್ದರಾದ್ದರಿಂದ ಶಿಕಾರಿಯಲ್ಲಿ ಒಂದು ಪಾಲನ್ನು ಜಮೀನ್ದಾರರಿಗೂ ಕೊಡುತ್ತಿದ್ದರು.

ಜಮೀನ್ದಾರರು ಭೂ ಕಂದಾಯವನ್ನು ಸರ್ಕಾರಕ್ಕೆ ಕೊಟ್ಟು ಖಾತೆದಾರರಾಗಿದ್ದರು. ದೇವಂಗಿ ಒಡೆತನದಲ್ಲಿ ಸುಮಾರು 2000 ಎಕರೆಗಳಷ್ಟು ಜಮೀನಿತ್ತು. ಸಾಕಷ್ಟು ಜಮೀನು ತಮ್ಮ ಸ್ಥಳದಿಂದ ದೂರವಿದ್ದವು.

ಇವರು ಆ ಭಾಗದ ಎಲ್ಲ ಜಮೀನ್ದಾರರಂತೆ ಲೇವಾದೇವಿ ವ್ಯವಹಾರವನ್ನೂ ಮಾಡುತ್ತಿದ್ದರು. ಜಮೀನು ಎಷ್ಟೇ ದೂರದಲ್ಲಿದ್ದರೂ ಅದನ್ನು ಅಡವಿಟ್ಟುಕೊಂಡು ಸಾಲ ಕೊಡುತ್ತಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ಸರ್ಕಾರಕ್ಕೆ ಬತ್ತವನ್ನು ಕೊಡುತ್ತಿದ್ದರು. ಸರ್ಕಾರವು ಅದಕ್ಕೆ ಹಣ ಕೊಡುತ್ತಿತ್ತು. ಆದರೂ ಸ್ವಾತಂತ್ರ್ಯಪೂರ್ವದಲ್ಲಿ ಯಾವುದೇ ಅಭಿವೃದ್ಧಿ ಆಗಲಿಲ್ಲ. ಸ್ವಾತಂತ್ರ್ಯದ ನಂತರ ವಿದ್ಯುಚ್ಛಕ್ತಿ ರಸ್ತೆ ಮುಂತಾದ ಸವಲತ್ತುಗಳಾದವು.

ಜಮೀನುದಾರರು ಮನೆಯ ಹೆಣ್ಣು ಮಕ್ಕಳ ಕೈಯಲ್ಲಿ ದುಡ್ಡು ಕೊಡುತ್ತಿರಲಿಲ್ಲ. ಮನೆಯ ಉಸ್ತುವಾರಿ, ಆಳುಗಳ ಉಸ್ತುವಾರಿ, ಬಂದ ಅತಿಥಿಗಳ ಉಪಚಾರ ಇವೇ ಮೊದಲಾದ ಜವಾಬ್ದಾರಿಗಳು ಜಮೀನ್ದಾರ ಹೆಂಗಸರ ಪಾಲಾಗಿದ್ದವು.

ಇವರ ಜಮೀನಿನಲ್ಲಿ ಸಾಕಷ್ಟು ಒಕ್ಕಲುಗಳಿದ್ದರು. ಸ್ವಾತಂತ್ರ್ಯದ ನಂತರ ಬಂದ ಭೂಸುಧಾರಣೆ ಕಾಯಿದೆಯ ನಂತರ ಈ ಪದ್ಧತಿ ರದ್ದಾಯಿತು. ಕಾಯ್ದೆ ಬಂದ ಸಮಯದಲ್ಲಿ ಕೆಲ ಜಮೀನ್ದಾರರು ಒಕ್ಕಲುಗಳಿಂದ ಜಮೀನು ಮರಳಿ ಪಡೆದರು. ಒಕ್ಕಲುಗಳು ಗದ್ದೆಯನ್ನು ಹಿಂದಿರುಗಿಸಿದರೂ, ಅಡಕೆ ತೋಟವನ್ನು ಹಿಂದಿರುಗಿಸುತ್ತಿರಲಿಲ್ಲ.

ಜಮೀನ್ದಾರರು ಒಕ್ಕಲುಗಳ ಕಷ್ಟ ಸುಖದಲ್ಲಿ ಭಾಗಿಯಾಗುತ್ತಿದ್ದರು. ಒಕ್ಕಲುಗಳ ಮನೆ ಮದುವೆಗೆ ಒಡವೆಗಳನ್ನು ಹರಿವಾಣದಲ್ಲಿ ಹಾಕಿ ಅವರಿಗೆ ಧರಿಸಲು ಕೊಡುತ್ತಿದ್ದರು. ಮದುವೆಯಾದ ನಂತರ ಅವನ್ನು ಹಿಂದಿರುಗಿಸಬೇಕಿತ್ತು.

ಒಕ್ಕಲುಗಳಿಂದ ಕೆಲಸ ಮಾಡಿಸಿದರೆ ದುಡ್ಡು ಕೊಡುತ್ತಿದ್ದರು. ಒಡೆಯರ ಮನೆ ಮದುವೆ ಮುಂತಾದ ಸಮಾರಂಭಗಳಿಗೆ ಒಕ್ಕಲುಗಳು ತಾವಾಗಿಯೇ ಬಂದು ಕೆಲಸ ಮಾಡುತ್ತಿದ್ದರು. ಇದಕ್ಕೆ ಸಂಬಳ ಕೊಡುತ್ತಿರಲಿಲ್ಲ. ಒಕ್ಕಲುಗಳು ಕೊಡಬೇಕಾದ ಭತ್ತ, ಅಡಕೆಯನ್ನು ಕೊಯಿಲು ಆಗುತ್ತಿದ್ದಂತೆ ವಸೂಲಿ ಸಾಬರು ಹೋಗಿ ಅವರಿಂದ ವಸೂಲಿ ಮಾಡಿಕೊಂಡು ಬರುತ್ತಿದ್ದರು.

ಇವರ ಬಳಿ ಜೀತದಾಳುಗಳೊಡನೆ ಜಮೀನು ಕಳೆದುಕೊಂಡವರೂ ಕೆಲಸಕ್ಕೆ ಬರುತ್ತಿದ್ದರು. ಆಳುಗಳಿಗೆ ದಿನದ ಕೆಲಸಕ್ಕೆ ಒಂದು ಸೇರು ಅಕ್ಕಿ ಮತ್ತು ಎಂಟಾಣೆ ಸಂಬಳವಿತ್ತು. ಕೆಲಸಕ್ಕೆ ಜೀತದಾಳುಗಳನ್ನು ಪ್ರತಿದಿನ ಬೆಳಿಗ್ಗೆ ಹೋಗಿ ಕರೆಯಬೇಕಿತ್ತು. ಆಳುಗಳು ಮನೆಯ ಕೆಲಸವನ್ನು ಮಾಡಬೇಕಿತ್ತು. ಬಚ್ಚಲಿನ ಒಲಗೆ ಬೆಂಕಿ ಹಾಕಲು ಒಬ್ಬರು, ಗಂಡಸರ ಬಟ್ಟೆ ಒಗೆಯಲು ಒಬ್ಬ ಗಂಡಾಳು, ಹೆಂಗಸರ ಬಟ್ಟೆ ಒಗೆಯಲು ಒಬ್ಬ ಹೆಣ್ಣಾಳು, ಎಣ್ಣೆ ತಿಕ್ಕಲು, ಅಡುಗೆಗೆ ಸಹಾಯ ಮಾಡಲು, ಮುಸುರೆ ತೊಳೆಯಲು, ಮಕ್ಕಳಾಡಿಸಲು ಹೀಗು ಸುಮಾರು ಇಪ್ಪತ್ತಿಗಿಂತ ಹೆಚ್ಚು ಆಳುಗಳು ಜಮೀನ್ದಾರರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು.

ವಂಶಪಾರಂಪರ್ಯವಾಗಿ ಬಂದ ಆಸ್ತಿಯ ಹಿಸ್ಸೆಯಾಗುವಾಗ ಆಳುಗಳ ಹಿಸ್ಸೆಯೂ ಆಗುತ್ತಿತ್ತು. ಅಲ್ಲದೆ ಕೆಲವೊಮ್ಮೆ ಅವರಿಗೆ ಇಷ್ಟಪಟ್ಟವರ ಕಡೆ ಹೋಗುವ ಸ್ವಾತಂತ್ರ್ಯವೂ ಇತ್ತು. ಅವರು ತಮ್ಮ ಜಮೀನನ್ನು ಕಳೆದುಕೊಂಡಿದ್ದರಾದ್ದರಿಂದ ಜಮೀನ್ದಾರರ ಬಳಿ ಕೆಲಸಕ್ಕೆ ಬರಲೇಬೇಕಿತ್ತು ಮತ್ತು ಅವರ ಆಜ್ಞೆಯನ್ನು ಪಾಲಿಸಬೇಕಿತ್ತು.

ದೇವಂಗಿ ಜಮೀನ್ದಾರರು ತಮ್ಮ ಊರಿನ ಜನತೆಗೆ ಉಪಯೋಗವಾಗುವಂತಹ ಕಾರ್ಯಗಳನ್ನು ಮಾಡಿದ್ದಾರೆ. ದೇವಂಗಿಯಲ್ಲಿ ಪೋಸ್ಟ್ ಆಫೀಸ್ ಹಾಗು ಆಸ್ಪತ್ರೆಯನ್ನು ಕಟ್ಟಿಸಿದ್ದಾರೆ. ಬಸವಾನಿ, ಮೇಳಿಗೆ, ತೀರ್ಥಹಳ್ಳಿಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ.

❐

# ಅನುಬಂಧ - 2

**ಹೆಸರು** : ಶ್ರೀ ಹಾಲಪ್ಪ

**ವಯಸ್ಸು** : 70 ವರ್ಷ

**ಊರು** : ಕುಪ್ಪಳಿ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ

**ವೃತ್ತಿ** : ಅರಣ್ಯ ಇಲಾಖೆಯಲ್ಲಿ ವಾಚ್‌ಮನ್

(ಇವರ ಇನ್ನೊಂದು ಹೆಸರು ಪುಟ್ಟಪ್ಪ. ಇವರು ಕುಪ್ಪಳಿಯವರು. ಕುವೆಂಪು ಅವರ ಪೂರ್ವಿಕರ ಕುಪ್ಪಳಿ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತಿದ್ದರು. ಕಾಲ ಕ್ರಮೇಣ ಜೀತ ಪದ್ಧತಿ ಅಳಿದ ನಂತರ ಅರಣ್ಯ ಇಲಾಖೆಯಲ್ಲಿ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದಾರೆ.)

ಕುಪ್ಪಳಿ ಮನೆಯಲ್ಲಿ ಸುಮಾರು ನಲವತ್ತು ಜೀತದಾಳುಗಳಿದ್ದರು. ಇವರ ಬಿಡಾರ ಒಡೆಯರ ಮನೆಗಿಂತ ದೂರದಲ್ಲಿರುತ್ತಿತ್ತು. ಪ್ರತಿದಿನ ಒಡೆಯರ ಕಡೆಯವರು ಬಿಡಾರಕ್ಕೆ ಬಂದು ಅವರನ್ನೆಲ್ಲ ಕೆಲಸಕ್ಕೆ ಕರೆಯುತ್ತಿದ್ದರು. ಆದರೆ ಬಿಡಾರದ ಒಳಗೆ ಬರುತ್ತಿರಲಿಲ್ಲ. ಅವರ ಸಂಬಳ ಮೊದಲು ಐವತ್ತು ಪೈಸೆಯಾಗಿತ್ತು. ಅನಂತರ ಕ್ರಮೇಣ ಎರಡು ರೂಪಾಯಿಗೇರಿತು.

ದೀನ ದಲಿತ ಜನರಿಗೆ ಜೀತದಾಳು ಸ್ಥಾನ ಪ್ರಾಪ್ತವಾಗುತ್ತಿದ್ದುದು ಮದುವೆಯಿಂದ. ಹೆಣ್ಣಿಗೆ ತೆರ ಕೊಟ್ಟು ಗಂಡಿನ ಕಡೆಯವರು ಮದುವೆ ಮಾಡಿಕೊಳ್ಳಬೇಕಿತ್ತು. ಏನಿಲ್ಲವೆಂದರೂ ಒಂದು ಮದುವೆಗೆ ಆಗ ಸುಮಾರು 200 ರೂಪಾಯಿಗಳು ಬೇಕಾಗುತ್ತಿತ್ತು. ಮದುವೆಯಲ್ಲಿ ಕನಿಷ್ಠ 12 ಸೇರು ಅಕ್ಕಿ, 50 ರಿಂದ 100 ರೂಪಾಯಿಗಳ ವರೆಗೆ ಹೆಣ್ಣಿಗೆ ಕೊಡಬೇಕು. ನೂರರಿಂದ ನೂರೈವತ್ತು ಜನ ಮದುವೆಗೆ ಬರುತ್ತಿದ್ದರು. ಅವರಿಗೆಲ್ಲ ಸರಿಯಾದ ಊಟೋಪಚಾರ ಆಗಬೇಕಿತ್ತು.

ಹಾಲಪ್ಪ ತಮ್ಮ ಮದುವೆಗೆ ಆಲೆಮನೆ ಶಿದ್ದಪ್ಪನಾಯ್ಕರ ತಂದೆಯ ಹತ್ತಿರ ಆರು ನೂರು ರೂಪಾಯಿ ಸಾಲ ಮಾಡಿ ಅಲ್ಲೇ ಮದುವೆಯಾಗಿದ್ದರು. ಹೆಣ್ಣಿಗೆ 50 ಸೇರು ಅಕ್ಕಿ ಕೊಟ್ಟಿದ್ದರು. ಅಲ್ಲದೆ ಒಡೆಯರು ಒಂದು ತಾಳಿ, ನಾಲ್ಕು ಬಂಗಾರದ ಗುಂಡುಗಳನ್ನು ಮಾಡಿಸಿಕೊಟ್ಟಿದ್ದರು. ಇದೂ ಸಾಲದ ಲೆಕ್ಕದಲ್ಲಿರುತ್ತಿತ್ತು.

ಈ ಸಾಲ ತೀರುವುದು ಕಷ್ಟವಾಯಿತು. ಏಕೆಂದರೆ ಮೊದಲು ಹಾಲಪ್ಪನವರ ಸಂಬಳ ಕೇವಲ ಐವತ್ತು ಪೈಸೆ. ಸಂಬಳ ಎರಡು ರೂಪಾಯಿಗೆ ಏರಿದಾಗ ತಮ್ಮ ಮದುವೆಯ ಸಾಲವನ್ನು ತೀರಿಸಿದರು.

ಜೀತದಾಳುಗಳು ತಾವು ಮಾಡಿದ ಸಾಲ ತೀರಿಸುವವರೆಗೆ ಬೇರೆಡೆಗೆ ಕೆಲಸಕ್ಕೆ ಹೋಗುವಂತಿರಲಿಲ್ಲ. ಸಾಲ ತೀರಿಸುವುದು ಇವರಿಗೆ ಕಷ್ಟವೂ ಹೌದು. ಜೀತದಾಳುಗಳ ಸಂಬಳ ಒಂದು ಸೇರು ಅಕ್ಕಿ ಮತ್ತು ಐವತ್ತು ಪೈಸೆ. ಐವತ್ತು ಪೈಸೆ ಸಂಸಾರದ ಖರ್ಚಿಗೆ ಸಾಕಾಗುತ್ತಿರಲಿಲ್ಲ.

ಯುಗಾದಿ ಹಬ್ಬದಂದು ಗೌಡರು ಜೀತದಾಳುಗಳು, ಅವರ ಹೆಂಡಿರು, ಮಕ್ಕಳಿಗೆಲ್ಲ ಬಟ್ಟೆ, ಹಾಸಲು ಹೊದೆಯಲು ಕಂಬಳಿ ಕೊಡುತ್ತಿದ್ದರು. ಯುಗಾದಿ, ದೀಪಾವಳಿ, ಗೌರಿ ಹಬ್ಬದಂದು ಒಂದು ಕುಟುಂಬಕ್ಕೆ ಎರಡು ಸೇರು ಅಕ್ಕಿ, ಅರ್ಧ ಕೆ.ಜಿ. ಮೆಣಸು, ಒಂದು ತೆಂಗಿನಕಾಯಿ, ಕಾಲು ಕೆ.ಜಿ ಹುಣಸೆ, ಅರ್ಧ ಕೆ.ಜಿ. ಬೆಲ್ಲವನ್ನು ಕೊಡುತ್ತಿದ್ದರು. ಈ ಹಬ್ಬಗಳನ್ನು ಬಿಟ್ಟರೆ ಬೇರೆ ಯಾವಾಗಲೂ ಹೀಗೆ ಕೊಡುತ್ತಿರಲಿಲ್ಲ.

ಒಡೆಯರ ಬಳಿ ಮಾಡಿದ ಸಾಲ ತೀರಿಸದೆ ಆಳುಗಳು ಬೇರೆ ಕಡೆಗೆ ಕೆಲಸಕ್ಕೆ ಹೋಗುವಂತಿರಲಿಲ್ಲ. ಜಮೀನ್ದಾರರ ಉಪಟಳದಿಂದ ತಪ್ಪಿಸಿಕೊಳ್ಳಬೇಕೆಂದರೆ ಓಡಿ ಹೋಗುವುದೊಂದೇ ಮಾರ್ಗವಾಗಿತ್ತು.

ಜೀತದಾಳುಗಳು ಬೇರೆ ಊರಿಗೆ ಹೋದಾಗ ಒಡೆಯರ ಕಾರ್ಯನಿಮಿತ್ತ ಹೋದರೆ 'ಕುಪ್ಪಳಿ ಮನೆಯಿಂದ ಬಂದಿದ್ದೀವಿ' ಎಂದು ಹೇಳಿಕೊಳ್ಳುತ್ತಿದ್ದರು. ಸ್ವಂತ ಕೆಲಸದ ಮೇಲೆ ಹೋದರೆ ಕುಪ್ಪಳಿ ಬಿಡಾರದಿಂದ ಬಂದಿರುವುದಾಗಿ ಹೇಳಿಕೊಳ್ಳುತ್ತಿದ್ದರು. ಜೀತದಾಳುಗಳ ನಿವಾಸಗಳಿಗೆ 'ಬಿಡಾರ' ಒಡೆಯರ ನಿವಾಸಕ್ಕೆ 'ಮನೆ' ಎಂದು ಕರೆಯುತ್ತಿದ್ದರು.

ಜೀತದಾಳುಗಳಿಗೆ ಬಾಳೇ ಹೊನ್ನೂರಿನ ಲಿಂಗಾಯತ ಮಠವಿತ್ತು. ಮನೆಯಲ್ಲಿ ನಡೆಯುವ ಮದುವೆ ಮುಂತಾದ ಶುಭಕಾರ್ಯಕ್ಕೆ ಮಠದ ಪೂರ್ವಾನುಮತಿ ಪಡೆಯಬೇಕಿತ್ತು. ಇಲ್ಲವೆ ಮಠ ಅಂಥವರಿಗೆ ದಂಡ ವಿಧಿಸುತ್ತಿತ್ತು. ಆಗ ಮಠದ ಕಡೆಯವರು ಬಂದು ಆ ಶುಲ್ಕವನ್ನು ಪಡೆದುಕೊಂಡು ಹೋಗುತ್ತಿದ್ದರು.

ಒಡೆಯರ ಮನೆಗೆ ಮಂಜುನಾಥ, ಸುಬ್ಬಯ್ಯನಾಯ್ಕರು ಇತ್ಯಾದಿಯಾಗಿ ಒಕ್ಕಲುಗಳಿದ್ದರು. ಅವರ ಗೇಣಿ ಒಂದು ಎಕರೆಗೆ ಆರು ಖಂಡುಗ ಬತ್ತ ಎಂದು ನಿಗದಿ ಪಡಿಸಲಾಗಿತ್ತು. ಅದರ ಅಳತೆ ಹೀಗಿದೆ:

| | | |
|---|---|---|
| 20 ಕೊಳಗ | : | 1 ಖಂಡುಗ |
| 20 ಗುಂಟೆ | : | 1 ಎಕರೆ |
| 1 ಗುಂಟೆ | : | 1 ಕೊಳಗ |

ಭೂ ಸುಧಾರಣೆ ಕಾಯಿದೆ ಬಂದ ನಂತರ ಒಕ್ಕಲುಗಳು ಇಲ್ಲವಾದರು.

ಹಿಂದಿನ ಕಾಲದಲ್ಲಿ ಮನೆಯ ಪಾತ್ರೆಗಳನ್ನು ಅಡುವಿಟ್ಟು ಸಾಲ ಪಡೆದುಕೊಳ್ಳುತ್ತಿದ್ದರು. ಲೇವಾದೇವಿಗಾರ ಮೋಸ ಮಾಡುತ್ತಿದ್ದರು. ಇಪ್ಪತ್ತು ರೂಪಾಯಿ ಬೆಲೆಯ ಸಾಮಾನನ್ನು ಅಡವಿಟ್ಟುಕೊಂಡು ಹತ್ತೇ ರೂಪಾಯಿ ಕೊಡುತ್ತಿದ್ದ. ಬಂಗಾರಕ್ಕೂ ಕೂಡ ಹೀಗೆ ಮಾಡುತ್ತಿದ್ದರು. ನೂರು ರೂಪಾಯಿಗೆ ಕೂಡ ಜಮೀನನ್ನು ಆಗ ಅಡವಿಡುತ್ತಿದ್ದರು. ಇಂದಿರಾಗಾಂಧಿ ಆಡಳಿತದ ಕಾಲದಲ್ಲಿ ಅಡವಿಡಬಾರದು ಎಂಬ ಕಾನೂನು ಜಾರಿಗೆ ಬಂದ ಮೇಲೆ ವಸ್ತುಗಳನ್ನು ಅಡವಿಟ್ಟುಕೊಂಡು ಸಾಲ ಕೊಡುವ ಪದ್ಧತಿ ನಿಂತು ಹೋಯಿತು.

ಇವರ ಕೆಲಸದ ವೇಳೆ ಬೆಳಿಗ್ಗೆ ಏಳರಿಂದ ಸಂಜೆ ಆರರವರೆಗೆ ಇರುತ್ತಿತ್ತು. ಪ್ರತಿದಿನ ಒಡೆಯರ ಕಡೆಯವರು ಬಂದು ಎಲ್ಲರನ್ನು ಕೆಲಸಕ್ಕೆ ಕರೆಯುತ್ತಿದ್ದರು.

ಇವರು ಸ್ವತಃ ಶಾಲೆಗೆ ಹೋಗಲಿಲ್ಲ. ಆದರೆ ಮಕ್ಕಳನ್ನು ಗಡಿಕಲ್‌ನಲ್ಲಿದ್ದ ಶಾಲೆಗೆ ಕಳುಹಿಸುತ್ತಿದ್ದರು. ಶಾಲೆಯಲ್ಲಿ ಅಧ್ಯಾಪಕರು ಜೀತದಾಳುಗಳಿಗೆ, ನಿಮ್ನ ವರ್ಗದವರಿಗೆ ನೇರವಾಗಿ ಕೋಲಿನಲ್ಲಿ ಹೊಡೆಯುತ್ತಿರಲಿಲ್ಲ. ಅವರತ್ತ ಕೋಲನ್ನು ಅಡ್ಡ ಅಡ್ಡವಾಗಿ ಬೀಸುತ್ತಿದ್ದರು. ಇದನ್ನು 'ಅಡ್ಡ ಬಡಿಗೆ' ಎಂದು ಕರೆಯುತ್ತಿದ್ದರು. ಶಾಲೆಯಲ್ಲಿ ಕೂರಲು ಇವರಿಗೆ ಬೇರೆ ಸ್ಥಳವಿತ್ತು. ಹೀಗೆ ಶಾಲೆಯಲ್ಲಿ ಮೇಷ್ಟ್ರ ಕಾಟವಿತ್ತು.

ಇಂಥ ಶಾಲೆಗೆ ಹೋಗುವ ಹುಡುಗರನ್ನು ಒಡೆಯರು ಅಪ್ಪಣೆ ಕೊಟ್ಟರೆ, ಶಾಲೆಗೆ ಕಳಿಸುವುದು ಬಿಟ್ಟು ಒಡೆಯರ ಮನೆಯಲ್ಲಿ ಮಕ್ಕಳನ್ನಾಡಿಸುವುದು, ದನ ಕಾಯುವುದು ಮುಂತಾದ ಕೆಲಸಗಳಿಗೆ ಸಂಬಳವಿಲ್ಲದೆ ಕಳುಹಿಸಬೇಕಿತ್ತು. ಹೀಗಾಗಿ ಜೀತದಾಳಗಳ ಮಕ್ಕಳು ಓದಲಾಗುತ್ತಿರಲಿಲ್ಲ.

ಒಡೆಯರ ಆಸ್ತಿ ಭಾಗವಾಗುತ್ತಿದ್ದ ಸಂದರ್ಭದಲ್ಲಿ ಜೀತದಾಳುಗಳ ಹಿಸ್ಸೆಯಾಗುತ್ತಿತ್ತು. ಜೀತದಾಳುಗಳು ಅಡಕೆ ಕೊನೆ ತೆಗೆಯುವ ಕೆಲಸ ಕಲಿಯಲಿಲ್ಲ. ಸೇರೆಗಾರರ ಕಡೆಯವರು ಅಂದರೆ ಮರಾಠಿಗಾರರು, ಶೆಟ್ಟರು, ಪೂಜಾರ್‍ರು- ಇವರು ಅಡಕೆ ಕೊನೆ ತೆಗೆಯುತ್ತಿದ್ದರು.

ಇವರು ಆಣೆ, ಒಂದು ಬಿಲ್ಲೆಯನ್ನು ಮುಸ್ಲಿಂ ವ್ಯಾಪಾರಿಗಳಿಗೆ ಕೊಟ್ಟು ಸಾಮಾನುಗಳನ್ನು ಕೊಳ್ಳುತ್ತಿದ್ದರು. ಮನೆಗೆ ಬೇಕಾಗುವ ಕಡಲೆಕಾಯಿ, ತೊಗರಿ ಬೇಳೆ, ಕೊಬ್ರಿ ಮುಂತಾದ ವಸ್ತುಗಳನ್ನು ಕೊಳ್ಳುತ್ತಿದ್ದರು. ಅನಂತರ ಬಯಲು ಸೀಮೆಯ ಜನರು ವ್ಯಾಪಾರಕ್ಕೆ ಬಂದರು. ಮುಸ್ಲಿಂ ವ್ಯಾಪಾರಿಗಳು ಮೀನು ವ್ಯಾಪಾರ ಮಾಡುತ್ತಿದ್ದರು.

❐

## ಅನುಬಂಧ - 3

ಹೆಸರು : ಶ್ರೀ ಶೇಷಪ್ಪಗೌಡರು

ವಯಸ್ಸು : 78 ವರ್ಷ

ಊರು : ಕುಪ್ಪಳಿ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ

ವೃತ್ತಿ : ಕೃಷಿಕರು

(ಇವರ ಕುವೆಂಪು ಅವರ ಚಿಕ್ಕಪ್ಪನ ಮಗ. ಆ ಭಾಗಕ್ಕೆ ಇವರ ಮನೆತನ ದೊಡ್ಡ ಜಮೀನ್ದಾರರೆನಿಸಿ ಕೊಂಡಿದ್ದರೂ ಸಾಕಷ್ಟು ಪ್ರಭಾವಿಯಾಗಿತ್ತು.)

ಜಮೀನ್ದಾರರು ಭೂ ಕಂದಾಯವನ್ನು ಕಟ್ಟಿ ಖಾತೇದಾರರಾಗುತ್ತಿದ್ದರು. ಇವರಿಗೆ ಮತದಾನದ ಹಕ್ಕು ಇರುತ್ತಿತ್ತು. ಇಲ್ಲಿ ಜಾತಿ ತಾರತಮ್ಯ ಇರುತ್ತಿರಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಹಾಗು ಸ್ವಾತಂತ್ರ್ಯ ದೊರೆತ ಆರಂಭದ ವರ್ಷಗಳಲ್ಲಿ ಕುಪ್ಪಳಿಯಲ್ಲಿ ಇವರದೊಂದೆ ಮನೆ ಇತ್ತು. ಅದರ ಸುತ್ತ ಮುತ್ತ ಸುಮಾರು 50-100 ಜನ ಆಳುಗಳು-ಒಕ್ಕಲು, ಹಾಗು ಜೀತದಾಳುಗಳು ಇದ್ದರು.

ಜಮೀನ್ದಾರರು ಒಕ್ಕಲುಗಳಿಂದ ಗೇಣಿಯನ್ನು ಪಡೆಯುತ್ತಿದ್ದರು. ಜಮೀನ್ದಾರರು ಒಕ್ಕಲುಗಳು ತಮಗೆ ಎಷ್ಟು ಪಾಲನ್ನು ಕೊಡಬೇಕು ಎಂದು ನಿಗದಿ ಪಡಿಸುವರು. ಇದಕ್ಕೆ 'ಪಡಿ' ಎನ್ನುವರು. ಒಕ್ಕಲುಗಳು ತಪ್ಪದೆ ಆ 'ಪಡಿ'ಯನ್ನು ಒಡೆಯರಿಗೆ ಕೊಡಬೇಕು.

ಒಕ್ಕಲುಗಳ ಯೋಗಕ್ಷೇಮ ಜಮೀನ್ದಾರರು ನೋಡಿಕೊಳ್ಳುತ್ತಿದ್ದರು. ಜಮೀನ್ದಾರರಿಗೆ ಕಷ್ಟವಾದಾಗ ಅಥವ ಕೆಲಸವಿದ್ದಾಗ ಒಕ್ಕಲುಗಳು ಬಂದು ಕೆಲಸ ಮಾಡಿಕೊಡಬೇಕು. ಒಡೆಯರ ಮನೆಯಲ್ಲಿ ಒಕ್ಕಲು ಗಳು ಕೆಲಸ ಮಾಡಿದಾಗ ಅದಕ್ಕೆ ಸಂಬಳ ಕೊಡುತ್ತಿರಲಿಲ್ಲ. ಬಿಟ್ಟಿ ಕೆಲಸ ಮಾಡಬೇಕಿತ್ತು. ಗೌಡರು ಬರೀ ಊಟ ಕೊಡುತ್ತಿದ್ದರು. ಆದರೂ ಈ ಕೆಲಸ ಕಡ್ಡಾಯವಾಗಿತ್ತು.

ಜೀತದಾಳುಗಳಿಗೆ ಹಬ್ಬ ಹರಿದಿನಕ್ಕೆ ಒಡೆಯರು ದುಡ್ಡು ಕೊಡುತ್ತಿದ್ದರು. ಹಾಗು ವರ್ಷಕ್ಕೊಮ್ಮೆ ಬಟ್ಟೆ ಕೊಡುತ್ತಿದ್ದರು. ದಿನದ ಕೆಲಸಕ್ಕೆ ಒಬ್ಬನಿಗೆ ಎರಡು ಸೇರು ಭತ್ತ ಕೊಡುತ್ತಿದ್ದರು. ಜೀತದಾಳುಗಳ ಖಾಯಿಲೆಗೆ ಗೌಡರು ಹಣಕಾಸು ಸಹಾಯ ಮಾಡುತ್ತಿದ್ದರು. ಜೀತದಾಳಿಗೆ ಜಮೀನ್ದಾರರು ತಂದೆಯಿದ್ದಂತೆ. ಅವರ ಆಗು ಹೋಗುಗಳಿಗೆ ಗೌಡರೇ ಜವಾಬ್ದಾರಿ ತೆಗೆದುಕೊಳ್ಳಬೇಕಿತ್ತು.

ಹೆಣ್ಣು ಮಕ್ಕಳಿಗೆ ಮದುವೆ ಸಮಯದಲ್ಲಿ ತೆರ ಕೊಡುವ ಪದ್ಧತಿ ಕೇವಲ ಜೀತದಾಳುಗಳಲ್ಲಿ ಮಾತ್ರವಲ್ಲದೆ ಒಕ್ಕಲಿಗರಲ್ಲೂ ಇತ್ತು. ಕಾರಣ ಹೆಣ್ಣು ಮಕ್ಕಳು ಆಗಿನ ಕಾಲದಲ್ಲಿ ಹೆಚ್ಚು ಬದುಕುತ್ತಿರಲಿಲ್ಲ.

ಆಸ್ಪತ್ರೆಗಳ ಕೊರತೆ ಇದ್ದುದರಿಂದ ಅವರು ಗರ್ಭಿಣಿಯಾದಾಗ ಬದುಕುಳಿಯುವ ಸಂದರ್ಭ ಕಡಿಮೆಯಿತ್ತು. ಹಾಗಾಗಿ ಹೆಂಗಸರ ಸಂಖ್ಯೆ ಕಡಿಮೆ ಇತ್ತು. ಇದರಿಂದಾಗಿ ಹೆಣ್ಣಿಗೆ ಮದುವೆಯಲ್ಲಿ 'ತೆರ' ಕೊಡುವ ಪದ್ಧತಿ ಜಾರಿಗೆ ಬಂತು. ಮಲೇರಿಯಾ ಕೂಡ ಹೆಂಗಸರ ಸಾವಿಗೆ ಕಾರಣವಾಗಿತ್ತು.

ಸ್ವಾತಂತ್ರ್ಯಪೂರ್ವದಲ್ಲಿ ಹಳೇಪೈಕದವರು ಮದುವೆಯಲ್ಲಿ ದಂಡಿಗೆ ಏರುವಂತಿರಲಿಲ್ಲ ಹಾಗು ಮದುಮಕ್ಕಳ ಮೆರವಣಿಗೆ ಮಾಡಬಾರದು ಎಂಬ ನಿರ್ಬಂಧವಿತ್ತು. ಜಮೀನ್ದಾರರಿಗೆ ಬ್ರಿಟಿಷ್ ಸರ್ಕಾರದಿಂದ ಇದಕ್ಕೆ ಬೆಂಬಲ ಇತ್ತು. ಸರ್ಕಾರಕ್ಕೆ ಭೂ ಕಂದಾಯವನ್ನು ಜಮೀನ್ದಾರರೇ ಕಟ್ಟುತ್ತಿದ್ದರಿಂದ ಅಂದಿನ ಸರ್ಕಾರವು ಜಮೀನ್ದಾರರಿಗೆ ಅನುಕೂಲಕರವಾಗಿತ್ತು.

ದಂಡಿಗೆ ಮತ್ತು ಮೆರವಣಿಗೆಯನ್ನು ಹಳೆಪೈಕದವರು ತಾವೂ ಮಾಡುವುದಾಗಿ ಜಮೀನ್ದಾರರ ನಿರ್ಬಂಧವನ್ನು ಕಡೆಗಣಿಸಿ ಮುಂದುವರಿದಾಗ, ಜಮೀನ್ದಾರರಿಗೂ ಹಳೆಪೈಕದವರಿಗೂ ಸಾಕಷ್ಟು ಹೊಡೆದಾಟ ಆಗಿ ಖೂನಿ ಸಹ ಆಗಿದೆ. ಈ ಘಟನೆ 1936ಗಿಂತ ಮುಂಚೆ ನಡೆದಿದೆ. ಇದು ಎನ್.ಆರ್. ಪುರ ಮಲಂದೂರು ಕೇಸ್ ಎಂದು ಹೆಸರುವಾಸಿಯಾಗಿದೆ. ಸ್ವಾತಂತ್ರ್ಯದ ಬಂದ ಮೇಲೆ ಈ ಕಟ್ಟಲೆಯನ್ನು ಯಾರೂ ಅನುಸರಿಸಲಿಲ್ಲ.

ಇವರ ಕಾಲದಲ್ಲಿ ಕುಪ್ಪಳಿಯಲ್ಲಿ ಐಗಳ ಶಾಲೆ ಇರಲಿಲ್ಲ. ಗಡಿಕಲ್‌ನಲ್ಲಿ ಒಂದು ಶಾಲೆಯಿತ್ತು. ಅದು ಪ್ರಾಥಮಿಕ ಶಾಲೆಯಾಗಿದ್ದು ಅದರಲ್ಲಿ ನಾಲ್ಕನೇ ತರಗತಿಯವರೆಗೆ ಬೋಧನೆ ನಡೆಯುತ್ತಿತ್ತು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೀರ್ಥಹಳ್ಳಿಗೆ ಹೋಗಬೇಕಿತ್ತು.

ಸ್ವಾತಂತ್ರ್ಯದ ನಂತರ ಭೂ ಸುಧಾರಣೆ ಕಾನೂನು ಜಾರಿಗೆ ಬಂತು. ಉಳುವವನೇ ಭೂಮಿಯ ಒಡೆಯನಾದ, ಗೇಣಿ ಪದ್ಧತಿ ರದ್ದಾಯಿತು. ಜಮೀನ್ದಾರರು ಗೇಣಿಗೆ ಕೊಟ್ಟ ಜಮೀನು ಅವರ ಕೈಬಿಟ್ಟು ಹೋಯಿತು. ಇದರಿಂದ ಅವರಿಗೆ ಹೊಡೆತ ಬಿತ್ತು. ತಮ್ಮ ಎಲ್ಲ ಜಮೀನನ್ನು ಒಕ್ಕಲುಗಳಿಗೆ ಕೊಟ್ಟವರು ಭಾರಿ ನಷ್ಟಕ್ಕೆ ಒಳಗಾಗಿ ಊರು ಬಿಟ್ಟು ಹೋದರು. ಸುಮಾರು ಒಕ್ಕಲುಗಳು ಶ್ರೀಮಂತರಾದರು. ಗೇಣಿದಾರರಾಗಿದ್ದವರಲ್ಲಿ ಹಳೆಪೈಕದವರೇ ಹೆಚ್ಚಿದ್ದರು. ಅನಂತರ ಬೇಲರು ಮತ್ತು ಚಲುವಾದಿಯವರು ಇತ್ಯಾದಿ. ಭೂಸುಧಾರಣೆ ಕಾನೂನಿನಿಂದ ಇವರೆಲ್ಲರಿಗೂ ತಾವು ಸಾಗುವಳಿ ಮಾಡುತ್ತಿದ್ದ ಭೂಮಿಯ ಒಡೆತನ ದೊರಕಿತು.

ಜಾತಿಯಾಧಾರಿತ ಬೇಧಭಾವ ಅಂದಿನ ಸಮಾಜದಲ್ಲಿ ಇತ್ತು. ಹೊಟೇಲುಗಳಲ್ಲಿ ನಿಮ್ನ ವರ್ಗದವರಿಗೆ ಬೇರೆ ಸ್ಥಳವಿತ್ತು. ಅವರಿಗೆ ಕಾಫಿ ಕುಡಿಯಲು ತೆಂಗಿನ ಗರಟ ಇಡುತ್ತಿದ್ದರು. ಶಾಲೆಗಳಲ್ಲಿ ಹೊಲೆಯರಿಗೇ ಪ್ರತ್ಯೇಕ ಬೆಂಚುಗಳಿರುತ್ತಿದ್ದವು.

ಜಮೀನ್ದಾರರು ಬ್ರಾಹ್ಮಣರ ಮನೆಗೆ ಹೋದರೆ ಗೋಣಿ ಚೀಲದ ಮೇಲೆ ಕೂರಬೇಕಿತ್ತು. ಎಷ್ಟೇ ದೊಡ್ಡ ಜಮೀನ್ದಾರನೂ ಚೀಲದ ಮೇಲೆಯೇ ಕೂರಬೇಕಿತ್ತು. ಹಾಗಾಗಿ ಸಾಮಾನ್ಯವಾಗಿ ಬ್ರಾಹ್ಮಣರ ಮನೆಗೆ ಜಮೀನ್ದಾರರು ಹೋಗುತ್ತಿರಲಿಲ್ಲ. ಒಂದು ವೇಳೆ ಅವರು ಊಟಕ್ಕೆ ಇರಿಸಿಕೊಂಡರೆ, ಬ್ರಾಹ್ಮಣರ

ಊಟವಾದ ನಂತರ ಇವರು ಹೊರಗಡೆ ಚೌಕಿ ಮೇಲೆ ಕೂತು ಊಟ ಮಾಡಿ, ಸೆಗಣಿ ಸಾರಿಸಿ ಬರಬೇಕಿತ್ತು.

ಜನರ ಮೂಢನಂಬಿಕೆಯಿಂದ ಬ್ರಾಹ್ಮಣ ಸಾಹುಕಾರನಾದ. ಖಾಯಿಲೆ ಬಂದಾಗ ವಿಭೂತಿ, ಚೀಟು, ಪೂಜೆ ಇತ್ಯಾದಿಯಿಂದ ದುಡ್ಡು ಮಾಡಿ ಜಮೀನ್ದಾರರಿಗೇ ಸಾಲ ಕೊಡುವಂತಾದ.

ಈಗಲೂ ಕೆಲ ಮೂಢನಂಬಿಕೆಗಳಿವೆ. ಜಮೀನಿನಲ್ಲಿ ಭೂತ, ದಯ್ಯ ಇದೆ ಎಂದು ಜನ ಈಗಲೂ ನಂಬುತ್ತಾರೆ. ಭೂತಕ್ಕೆ ಕೊಡುವ ಹರಕೆಯ ಆಚರಣೆ ಇನ್ನೂ ಚಾಲ್ತಿಯಲ್ಲಿದೆ.

**ವ್ಯಾಪಾರ :**

ಸ್ವಾತಂತ್ರ್ಯಪೂರ್ವದಲ್ಲಿ ಸಂತೆ ಕಡಿಮೆಯಿತ್ತು. ತರೀಕೆರೆಯಲ್ಲಿ ಸಂತೆ ನಡೆಯುತ್ತಿತ್ತು. ಸಂತೆಯಲ್ಲಿ ಸಿಗುವ ಗೃಹೋಪಯೋಗಿ ಸಾಮಾನುಗಳನ್ನು ಮುಸ್ಲಿಂ ಮತ್ತು ಶೆಟ್ಟರು ಗಾಡಿ ಮೇಲೆ ತಂದು ಮನೆಯ ಬಾಗಿಲಲ್ಲೆ ಮಾರುತ್ತಿದ್ದರು. ಉಪ್ಪು, ಸೀಮೆಎಣ್ಣೆಯನ್ನು ದಕ್ಷಿಣ ಕನ್ನಡದಿಂದ ಶೆಟ್ಟರು ತಂದು ಮಾರುತ್ತಿದ್ದರು. ಬ್ಯಾರಿಗಳು ಅಡಕೆಯನ್ನು ಪಡೆದು ಸಾಮಾನುಗಳನ್ನು ಕೊಡುತ್ತಿದ್ದರು. ವಿನಿಮಯಕ್ಕೆ ಮುಖ್ಯವಾಗಿ ಬತ್ತ ಮತ್ತು ಅಡಕೆ ಮಾಧ್ಯಮವಾಗಿದ್ದವು.

**ಜೀತ ಪದ್ಧತಿ :**

ಮದುವೆ, ಖಾಯಿಲೆ ಎಂದು ಮುಂತಾದ ಕಾರಣಗಳಿಗೆ ಜಮೀನ್ದಾರರಿಂದ ಸಾಲ ಪಡೆದು ಅದನ್ನು ತೀರಿಸುತ್ತಿರಲಿಲ್ಲ. ಆದ್ದರಿಂದ ಬಡ್ಡಿ ಬೆಳೆದು ಅದನ್ನು ತೀರಿಸಲು ಇಡೀ ಕುಟುಂಬವೇ ದುಡಿಯಬೇಕಿತ್ತು.

ಜೀತದಾಳುಗಳು ಕೆಲಸಕ್ಕೆ ಬರಲು ನೆಪ ಹೇಳುತ್ತಿದ್ದರು. ಹಾಗಾಗಿ ಪ್ರತಿದಿನ ಅವರ ಬಿಡಾರದ ಬಳಿ ಹೋಗಿ ಕೆಲಸಕ್ಕೆ ಕರಿಯಬೇಕಾಗಿತ್ತು.

ಇವರ ಸಾಲಕ್ಕೆ ಬಡ್ಡಿ ಹಾಕುತ್ತಿದ್ದರಾದ್ದರಿಂದ ಇವರ ಸಾಲ ತೀರುತ್ತಲೇ ಇರಲಿಲ್ಲ. ಆದ್ದರಿಂದ ಜೀತದಾಳುಗಳು ಕೆಲಸ ಬಿಡುತ್ತಿರಲಿಲ್ಲ. ಒಂದು ವೇಳೆ ತಮ್ಮ ಒಡೆಯರ ಬಳಿ ಕೆಲಸ ಬಿಟ್ಟು ಬೇರೆ ಜಮೀನ್ದಾರರ ಬಳಿ ಹೋದರೆ, ಆ ಜಮೀನ್ದಾರ ಇವನ ಸಾಲ ತೀರಿಸಬೇಕಿತ್ತು. ಆದ್ದರಿಂದ ಜೀತದಾಳು ಗಳು ಒಡೆಯರನ್ನು ಬದಲಾಯಿಸುತ್ತಿರಲಿಲ್ಲ.

**ಲೇವಾದೇವಿ :**

ಲೇವಾದೇವಿಗಾರರು ತಮ್ಮ ಸಾಲ, ಬಡ್ಡಿಯ ಲೆಕ್ಕ ಹಾಕುತ್ತಿದ್ದುದು ಮಾಘ ಬಹುಳ ಅಮವಾಸ್ಯೆ ಯಂದು. ಒಂದು ಮಾಘ ಬಹುಳ ಅಮಾವಾಸ್ಯೆಯಿಂದ ಮುಂದಿನ ಮಾಘ ಬಹುಳ ಅಮವಾಸ್ಯೆ ತನಕ ಒಂದು ವರ್ಷವೆಂದು ಇವರಿಗೆ ಲೆಕ್ಕ. ಯಾವುದೇ ತಿಂಗಳಲ್ಲಿ ಸಾಲ ತೆಗದುಕೊಂಡರೂ ಒಂದು ವರ್ಷದ ಲೆಕ್ಕ ಹಾಕಿಯೇ ಬಡ್ಡಿ ಕೊಡಬೇಕಿತ್ತು, ಆದ್ದರಿಂದ ಲೇವಾದೇವಿಗಾರರು ಸಾಕಷ್ಟು ಸಾಹುಕಾರರಾಗಿದ್ದರು.

ಜಮೀನು, ಬಂಗಾರ, ತಾಮ್ರ, ಹಿತ್ತಾಳೆ ಮುಂತಾದ ಸಾಮಾನುಗಳನ್ನು ಅಡವಿಡುವುದಕ್ಕೂ ಮಾಘ ಬಹುಳ ಅಮಾವಾಸ್ಯೆಯ ಲೆಕ್ಕ ಹಾಕುತ್ತಿದ್ದರು. ಈ ಸಾಮಾನುಗಳನ್ನು ವಾಯಿದೆಗೆ ಸರಿಯಾಗಿ ಬಿಡಿಸಿ ಕೊಂಡು ಬರಬೇಕಿತ್ತು. ಪುರೋಹಿತರು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು.

ಸಾಲ ಕೊಟ್ಟವರು ಸಾಲ ವಸೂಲಿ ಮಾಡಲು ಅಡಕೆ ಬತ್ತದ ಕೊಯಿಲಿನ ಸಮಯದಲ್ಲಿ ಬಂದು ವಸೂಲಿ ಮಾಡಿಕೊಳ್ಳುತ್ತಿದ್ದರು. ಇವರ ಕಾಲದಲ್ಲಿ ವಸೂಲಿ ಸಾಬರ ಕಾಟ ಹೆಚ್ಚಾಗಿ ಈ ಭಾಗದಲ್ಲಿ ಇರಲಿಲ್ಲ.

ಗದ್ದೆ ತೋಟದ ಕೆಲಸಕ್ಕೆ ದಕ್ಷಿಣ ಕನ್ನಡ ಜಿಲ್ಲೆಗಳಾದ ಮಂಗಳೂರು, ಉಡುಪಿ, ಕುಂದಾಪುರದಿಂದ ಶೆಟ್ಟರು, ಬಂಟರು ಜನರನ್ನು ಕರೆದುಕೊಂಡು ಗುಂಪಾಗಿ ಬರುತ್ತಿದ್ದರು. ಇವರಲ್ಲಿ ಹಸಲರು, ಮರಾಠಿಗರು, ಶೆಟ್ಟರು ಇರುತ್ತಿದ್ದರು. ಇವರು ಗದ್ದೆ, ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಎತ್ತರದ ಅಡಕೆ ಮರ ಹತ್ತಿ ಅಡಕೆಗೆ ಕೊಟ್ಟೆ ಕಟ್ಟುವ ಕೆಲಸದಲ್ಲಿ ಮರಾಠಿಗರು, ಶೆಟ್ಟರು ನಿಪುಣರಾಗಿದ್ದರು. ಜಮೀನುದಾರರಿಗೆ ದೊಡ್ಡ ಜಮೀನು ಇರುತ್ತಿದ್ದರಿಂದ ಅವರಿಗೆ ಸೇರೆಗಾರರ ಅವಶ್ಯಕತೆ ಇತ್ತು.

ಬಯಲು ಸೀಮೆಯ ಜನರು ಸುಮಾರು 1930ರಿಂದ ಈಚೆಗೆ ಮಲೆನಾಡಿಗೆ ಕೆಲಸಕ್ಕೆ ಬರುತ್ತಿದ್ದಾರೆ. ಬಯಲು ಸೀಮೆಯಲ್ಲಿ ಮಳೆ ಕಡಿಮೆಯಾಗಿ ದುಡಿಮೆಗೆ ಜನ ಮಲೆನಾಡಿಗೆ ಬರುತ್ತಿದ್ದರು. ಕಳೆದ ಎರಡು ವರ್ಷಗಳಿಂದ ಇದು ಕಡಿಮೆಯಾಗಿದೆ. ಏಕೆಂದರೆ ಬಯಲು ಸೀಮೆಯಲ್ಲಿ ಮಳೆಯಿಲ್ಲದಿದ್ದರೂ ಬೋರ್‌ವೆಲ್ ವ್ಯವಸ್ಥೆಯಿಂದ ಅಲ್ಲಿ ಕೆಲಸದ ಅವಕಾಶಗಳು ಹೆಚ್ಚಿವೆ.

❐

25-1-1923


**T.J. Mudligiri Rao & Co.,**
**ಅಕ್ಕಿ ಮಂಡಿ ಶಿವಮೊಗ್ಗ**

ಮಹಾಶೀ ಶ್ರೀ ಕಡಿದಾಳು ಸುಬ್ಬಣ್ಣಗೌಡರು ಹುಳವಳ್ಳಿ ದಾಸಪ್ಪ ಗೌಡರು ಇವರ ಸ.ಕ್ಕೆ ನಮಸ್ಕಾರಗಳು. ಕ್ಷೇಮ ಸಂಪ್ರಾತ.

ತಮ್ಮ ಕಡೆಯಿಂದ ಕ್ಷೇಮ ಸಮಾಚಾರ ಪತ್ರಗಳು ಇಲ್ಲ. ಭರ್ತಿಯಾದ ಸರಕು ಸಹ ರವಾನಿಸಲಿಲ್ಲ. ಭರ್ತಿಯಾದ ಸರಕು ಸಹ ಒಡನೆ ಅಭಿಮಾನ ಬಿಟ್ಟು ಭಾರಿಯಾಗಿ ಖಂಡಿತ ರವಾನಿಸಬೇಕಾಗಿ ಅಪೇಕ್ಷಿಸುತ್ತೇವೆ.

ಹಾಲಿ ಪ್ಯಾಟೆಧಾರಣೆ ತೀರ್ಥಹಳ್ಳಿ ದೇಶಾವರ 13ರ ಲಾಗಾಯ್ತು (1 ಮಣಕ್ಕೆ 13 ರೂ.- 14ರೂ.ವರೆಗೆ) ಕೊಪ್ಪ ಶೃಂಗೇರಿ ದರ ಲಾಗಾಯ್ತು 10-13ರ ವರೆಗೆ. ಚೆಟ್ಟೆ ದರ 7.50 ಲಾಗಾಯ್ತು 8-50ವರೆಗೆ. ಈ ರೀತಿ ಈವತ್ತಿನವರೆಗೆ ಮಾಲು ಇದ್ದಂತೆ ಧಾರಣೆ ಇರುತ್ತದೆ. ಮುಂದಾಗುವ ವ್ಯಾಪಾರದ ಮಾತು ಕಂಡವರಿಲ್ಲ. ಅಭಿಮಾನವಿರಲಿ.

(ಶ್ರೀ ಕಡಿದಾಳು ಪ್ರಕಾಶ್, ಕಡಿದಾಳು, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ. ಅವರ ಮನೆಯಲ್ಲಿ ಏಪ್ರಿಲ್ 2007ರಂದು ದೊರೆತದ್ದು ಅಡಕೆಯ ಪೇಟೆ ಧಾರಣೆಯಲ್ಲಿ ಏರಿಳಿತ ಉಂಟಾಗುತ್ತಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.)



**T. J. Mudligiri Rao, & Co.,**
M. V. G. S. Adike Mandy, Commission Agents,
ಟಿ. ಜೆ. ಮುಡ್ಲಿಗಿರಿರಾವ್, ಎಂಡ್ ಕೊ., ಅಡ್ಕೆ ಮಂಡಿ ಶಿವಮೊಗ್ಗಾ.

Shimoga, 25/1/1923.


## ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು II ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ

| | |
|---|---|
| **ಫಿರ್ಯಾದಿ** | **ಅಪರಾಧಿ** |
| **ಕೊಪ್ಪ ಹೊರಬೈಲ್ ಆಲೆಮನೆ** | **ಚಲುವಾದಿ ಜಾತಿ ತಿಮ್ಮಯ್ಯನ ಮಗ** |
| **ಸುಬ್ಬಯ್ಯನಾಯ್ಕ** | **ಮಂಜ** |

***ಫಿರ್ಯಾದಿ ಪ್ರಾರ್ಥನೆ. ತಾರೀಖು 16-3-1911***

ಮೇಲ್ಕಂಡ ಅಪರಾಧಿಯು ನನ್ನ ತೋಟದಲ್ಲಿ ಕೂಲಿ ಕೆಲಸ ಮಾಡಿ ತೀರಿಸುವುದಾಗಿ ಖಂಡಿತ ಮಾಡಿಕೊಂಡು ಮಾಹೆಯಾನ ನಾಲ್ಕು ರೂಪಾಯಿ ತಲಬು ನಿಷ್ಕರ್ಷ ಮಾಡಿಕೊಂಡಿರುವ ಪ್ರಕಾರ ಹೊಟ್ಟೆ ಖರ್ಚಿಗೆ ಮೂರು ರೂಪಾಯಿ ಅಡ್ವಾನ್ಸ್ ತೆಗೆದುಕೊಳ್ಳಲು ಜಾತಾ ಒಂದು ರೂಪಾಯಿ ತೀರ್ಗಡೆ ಮಾಡುವುದಾಗಿ ಬರ್ಸಿ ನನ್ನಿಂದ ಸನ್ 1910ನೇ ಇಸವಿ ದಶಂಬರ ತಿಂಗಳು ತಾರೀಖು ಮೂರರಲ್ಲೂ ನಗದಿ ಇಪ್ಪತ್ತೈದು ರೂಪಾಯಿ ತೆಗೆದುಕೊಂಡವನು ನನ್ನಲ್ಲಿ ಬರೆದು ಕೊಟ್ಟಿರುವ ನೌಕರಿ ಕರಾರು ಪ್ರಕಾರ ಕೆಲಸ ಮಾಡದೆ ಪರಾರಿಯಾಗಿದ್ದಾನೆ. ಸದರಿ ಅಪರಾಧಿಗೆ ಬ್ರಿಚ್ ಆಫ್ ಕಾಂಟ್ರಾಕ್ಟ್ ಆ್ಯಕ್ಟ್ ಪ್ರಕಾರ ವಾರಂಟು ಮೂಲಕ ಹಿಡಿದು ತರಿಸಿ ಸದರಿ ಅವನಿಂದ ನನ್ನ ಹಣ ಕೊಡಿಸುವುದೇ ಆಗಲಿ, ಕೆಲ್ಸ ಮಾಡಿಸಿ ತೀರಿಸುವುದೇ ಆಗಲಿ ಈ ಬಗ್ಗೆ ಫೈಸಲು ಕೊಡಿಸಬೇಕಾಗಿ ಬೇಡಿಕೊಂಡಿದ್ದೇನೆ.


**ಸುಬ್ಬಯ್ಯನಾಯ್ಕನ ರುಜು**



(ಆಲೆಮನೆ ಸುರೇಶ್, ಆಲೆಮನೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರಲ್ಲಿ ದೊರೆತ ದಾಖಲೆ ಒಪ್ಪಂದವನ್ನು ಮುರಿದು ಸಾಲವನ್ನು ತೀರಿಸದ ಆಳುಗಳ ವಿರುದ್ಧ ಜಮೀನ್ದಾರರು ಕೋರ್ಟಿನಲ್ಲಿ ದಾವಾ ಹಾಕುತ್ತಿದ್ದರು.)

# ಒಕ್ಕಲು ಕರಾರು ಪತ್ರ







ಸನ್ ಸಾವಿರದ ಒಂಬೈನೂರ ಇಪತ್ತೇಳನೇ ಇಸವಿ ನವೆಂಬರ್ ತಾರೀಕು ಒಂಭತ್ತರಲ್ಲು ಕೊಪ್ಪ ತಾಲೂಕು ಕಸಬಾ ಹೋಬಳಿ ಹಿರೇಕೊಡಿಗೆ ಗ್ರಾಮದಲ್ಲಿರುವ ಹೊರಬೈಲು ಆಲೆಮನೆ ಶಿದ್ದಪ್ಪ ನಾಯಕರು ಮತ್ತು ತಿಮ್ಮಯ್ಯ ನಾಯಕರು ಇವರಿಗೆ ತಾಲೂಕು ಮಾಗಣೆ ಮಜಕೂರು ಕುಂಬಾರಕೊಪ್ಪ ಗ್ರಾಮದಲ್ಲಿರುವ ಸುರೇಕೊಪ್ಪದ ವಾಸಿ ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಬಳಿ ಸಾವಿರ ಮಾಗಣೆ ಕಟ್ಟಂಗೇರಿ ಗ್ರಾಮದಲ್ಲಿರುವ ಎಡಮೇರು ದೊಡ್ಡಮನೆ ದಾಸಸೆಟ್ರ ಜಾಗದಲ್ಲಿರುವ ಕರಾದಿ ಜಾತಿ ಕೆಂಚನ ಅಳಿಯಂದಿರು ಮೆಣಪ ಒಂದು ಮೊಡಂಕಿಲ ಒಂದು ಕೂಡ ಎರಡು ಜನರು ಬರಿಸಿಕೊಟ್ಟ ನೌಕರಿ ಕರಾರು ಏನೆಂದರೆ ನಿಮ್ಮ ಬಾಬ್ತು ಸದರಿ ಸೂರೆಕೊಪ್ಪ ಮತ್ತು ದೋರಗಲ್ಲು ಹೊರಬೈಲು ಆಲೆಮನೆ ಈ ಸ್ಥಳಗಳಲ್ಲಿರುವ ತರಿ ಬಾಗಾಯ್ತು ಜಮೀನುಗಳಿಗೆ ಆಗಬೇಕಾದ ಈ ಕೆಳಗೆ ಕಾಣುವ ಕಾಂಗಾರಿಗಳನ್ನು ಮಾಡುವುದಕ್ಕೆ ಒಪ್ಪಿಕೊಂಡು ಈ ದಿವ್ಸ ನಾವು ನಿಮ್ಮ ಕೈಯ ಅಡ್ವಾನ್ಸು ಒಂದು ನೂರು

ರೂಪಾಯಿಗಳನ್ನು ತೆಗೆದುಕೊಂಡಿರುತ್ತೇವೆ. ಆದ್ದರಿಂದ ನಾಳೆ ತಾರೀಕು ಲಾಗಾಯ್ತು ನಾವು ಮತ್ತು ನಮ್ಮ ಕಡೆ ಹೆಣ್ಣಾಳು ಗಂಡಾಳಿನಿಂದ ಇನ್ನೂ ನಾಲ್ಕು ಜನ ಕೂಡ ಆರು ಜನರು ಕೆಲಸದ ಮೇಲೆ ಹಾಜರಾಗಿ ತರಿ ಜಮೀನಿಗೆ ಗೊಬ್ಬರ ಹಾಕುವುದು ಸಸಿ ನಟ್ಟಿ ಹೂಟೆ ಮಾಡುವುದು ಕಳೆ ತಗೆಯುವುದು ಗದ್ದೆ ಕೊಯ್ಲು ಮಾಡುವುದು ವಗ್ಯೆರೆ ಮತ್ತು ಬಾಗಾಯ್ತು ಜಮೀನುಗಳಿಗೆ ಅಗತೆ ಗೊಬ್ಬರ ಮಣ್ಣು ಸೊಪ್ಪು ಉದಿ ಕಪ್ಪು ಸಹ ಮುಂತಾದ ಕಾಂಗಾರಿಯನ್ನು ನೀವು ಯಾ ನಿಮ್ಮ ಕಡೆಯವರು ಹೇಳಿದಂತೆ ಮಾಡಿಕೊಂಡು ಕೆಲಸಕ್ಕೆ ಬಂದ ಆಳು ಒಂದಕ್ಕೆ ಕೇಸಕ್ಕಿ ಒಂದು ಸೇರಿನಂತೆಯೂ ಮತ್ತು ರೋಜು ಮೂವತ್ತು ಆಳಿಗೆ ಒಂದೊಂದು ಸೇರು ಉಪ್ಪು ಮೆಣಸು ಸಹ ನಮ್ಮ ಹೊಟ್ಟೆ ಖರ್ಚಿಗೆ ನಿಮ್ಮಿಂದ ತೆಗೆದುಕೊಂಡು ಬರುವುದಲ್ಲದೆ ನಿಷ್ಕರ್ಷೆ ಮಾಡಿಕೊಂಡಿರುವ ಪ್ರಕಾರ ಕೆಲಸದ ಹಾಜರು ಮೂವತ್ತು ಆಳಿಗೆ ಅಂದ್ರೆ ಗಂಡಾಳಿಗೆ ಐದು ರೂಪಾಯಿನಂತೆಯೂ ಹೆಣ್ಣಾಳು ಮೂವತ್ತಕ್ಕೆ ನಾಲ್ಕು ರೂಪಾಯಿನಂತೆಯೂ ಆಗುವ ಸಂಬಳದ ಮೊಬಲಗು ಪೈಕಿ ನಮ್ಮ ಖರ್ಚಿಗೋಸ್ಕರ ಬೇಕಾದಲ್ಲಿ ರೋಜು ಮೂವತ್ತು ಆಳಿಗೆ ಒಂದೂವರೆ ರೂಪಾಯಿನಂತೆ ನಿಮ್ಮಿಂದ ತೆಗೆದುಕೊಂಡು ಜಾತಾ ಉಳಿಕಿ ಮೊಬಲಗನ್ನು ಮೇಲ್ಕಂಡ ಅಡ್ವಾನ್ಸು ಮೊಬಲಗಿಗೆ ವಸೂಲು ಕೊಡುತ್ತೇವೆ. ಈ ಪ್ರಕಾರ ಪೂರಾ ಅಡ್ವಾನ್ಸು ಮೊಬಲಗನ್ನು ಈ ಲಾಗಾಯ್ತು ಒಂದು ವರುಷದೊಳಗೆ ತೀರ್ಮಾನಿಸುತ್ತೇವೆ. ಈ ಅಡ್ವಾನ್ಸು ಮೊಬಲಗು ತೀರ್ಮಾನ ಆದ ವಿನಹ ಬೇರೆ ಯಾರಿಂದ್ಲೂ ಯಾವ ವಿಧದ ಅಡ್ವಾನ್ಸು ತೆಗೆದುಕೊಳ್ಳುವುದಿಲ್ಲ. ಇದಕ್ಕೆ ವಿರೋಧವಾಗಿ ನಡೆದರೆ ಬ್ರಿಚ್ ಆಫ್ ಕಾಂಟ್ರ್ಯಾಕ್ಟ್ ಆಕ್ಟಿನ ಶಿಕ್ಷೆಗೆ ಗುರಿಯಾಗಲು ಬದ್ಧರಾಗಿರುತ್ತೇವೆ ಎಂಬುದಾಗಿ ನಮ್ಮ ಖುದ್ದು ರಾಜಿಯಿಂದ ಆಲೆಮನೆಯಲ್ಲೂ ಬರ್ಸಿ ಕೊಟ್ಟ ನೌಕರಿ ಕರಾರು.

(ಎರಡು ಹೆಬ್ಬೆಟ್ಟುಗಳ ಗುರುತಿವೆ)

(ಆಲೆಮನೆ ಸುರೇಶ್, ಆಲೆಮನೆ, ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ ಇವರಲ್ಲಿ ದೊರೆತ ದಾಖಲೆ. ಜಮೀನ್ದಾರರು ಸೇರೆಗಾರರ ಮಧ್ಯೆ ನಡೆಯುತ್ತಿದ್ದ ಒಪ್ಪಂದದ ಕರಾರು ಪತ್ರ. ಕೆಲಸಗಾರರಿಗೆ ಕೊಡಬೇಕಾದ ಪಡಿ, ಸಂಬಳ ಅಷ್ಟೇ ಅಲ್ಲದೆ, ಗಟ್ಟದ ಕೆಳಗಿನ ಆಳುಗಳು ಗದ್ದೆ, ಅಡಕೆ ತೋಟಗಳಲ್ಲಿ ಏನೇನು ಕೆಲಸಗಳನ್ನು ಮಾಡುತ್ತಿದ್ದರು ಎಂಬುದು ತಿಳಿಯಬಹುದು. ಕೆಲಸದ ಒಪ್ಪಂದದ ಪ್ರಕಾರ ಜಮೀನ್ದಾರರ ಸಾಲ ತೀರುವವರೆಗೆ ಬೇರೆಲ್ಲೂ ಕೆಲಸವನ್ನು ಅರಿಸಿಕೊಂಡು ಹೋಗುತ್ತಿರಲಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಅವರ ವಿರುದ್ಧ ಕೋರ್ಟಿನಲ್ಲಿ ದಾವಾ ಹಾಕಬಹುದಿತ್ತು.)



(ಆಲೆಮನೆ ಸುರೇಶ್, ಆಲೆಮನೆ, ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ ಇವರಲ್ಲಿ ದೊರೆತ ದಾಖಲೆ.)

## ಆಕರ ಗ್ರಂಥಗಳು


1. **ಕಡಿದಾಳು ರಾಮಪ್ಪಗೌಡ ಎಸ್.** 1995 : *ಮಲೆನಾಡಿನ ಅಂದಿನ ನೆನಪುಗಳು*
ಸಹ್ಯಾದ್ರಿ ಪ್ರಕಾಶನ,
ಕಡಿದಾಳ್

2. **ಕಡಿದಾಳು ರಾಮಪ್ಪಗೌಡ ಎಸ್.** 1998 : *ಮಲೆನಾಡು ಶ್ರೀವೈಷ್ಣವ ನಾಮಧಾರಿ ಗೌಡ ಸಂಸ್ಕೃತಿ*
ತೀರ್ಥಹಳ್ಳಿ ತಾಲೂಕು,
ಒಕ್ಕಲಿಗರ ಸಂಘ (ರಿ.),
ತೀರ್ಥಹಳ್ಳಿ

3. **ಕರೀಗೌಡ ಬೀಚನಹಳ್ಳಿ** 2004 : *ಸಂವೇದನೆ*
ಸಿವಿಜಿ ಪಬ್ಲಿಕೇಷನ್ಸ್
ಬೆಂಗಳೂರು

4. **ಕುವೆಂಪು (ಕೆ.ವಿ. ಪುಟ್ಟಪ್ಪ)** 1998 (7ನೇ ಮುದ್ರಣ) : *ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ*
ಉದಯರವಿ ಪ್ರಕಾಶನ, ಮೈಸೂರು
ಮೊದಲ ಮುದ್ರಣ - 1944

5. **ಕುವೆಂಪು (ಪುಟ್ಟಪ್ಪ ಕೆ.ವಿ.)** **2006ಅ (14ನೇ ಮುದ್ರಣ)** : **ಕಾನೂರು ಹೆಗ್ಗಡಿತಿ**
ಉದಯರವಿ ಪ್ರಕಾಶನ, ಮೈಸೂರು
ಮೊದಲ ಮುದ್ರಣ - 1936

6. **ಕುವೆಂಪು (ಪುಟ್ಟಪ್ಪ ಕೆ.ವಿ.)** 2006ಬ (11ನೇಮುದ್ರಣ) : *ಮಲೆಗಳಲ್ಲಿ ಮದುಮಗಳು*
ಉದಯರವಿ ಪ್ರಕಾಶನ, ಮೈಸೂರು
ಮೊದಲ ಮುದ್ರಣ - 1967

7. **ಕುವೆಂಪು (ಪುಟ್ಟಪ್ಪ ಕೆ.ವಿ.)** 2005ಅ (5ನೇ ಮುದ್ರಣ) : *ನೆನಪಿನ ದೋಣಿಯಲ್ಲಿ (ಭಾಗ-1)*
ಉದಯರವಿ ಪ್ರಕಾಶನ, ಮೈಸೂರು
ಮೊದಲ ಮುದ್ರಣ - 1980

8. **ಕುವೆಂಪು (ಪುಟ್ಟಪ್ಪ ಕೆ.ವಿ.)** 2005ಬ (5ನೇ ಮುದ್ರಣ) : *ನೆನಪಿನ ದೋಣಿಯಲ್ಲಿ (ಭಾಗ-2)*
ಉದಯರವಿ ಪ್ರಕಾಶನ, ಮೈಸೂರು
ಮೊದಲ ಮುದ್ರಣ - 1980

| | | |
|---|---|---|
| 9. ಕೂಡ್ಲಿಗೆರೆ ಮಲ್ಲಿಕಾರ್ಜುನ | 2005 | : *ಕಾಗೋಡು ಚಳವಳಿ*<br>ಕರ್ನಾಟಕ ವಿಧಾನ ಮಂಡಲ<br>ಗ್ರಂಥಾಲಯ ಸಮಿತಿ,<br>ಬೆಂಗಳೂರು |
| 10. ಕೃಷ್ಣರಾವ್ ಪಿ.ಎಚ್. | 1942 | : *ನಮ್ಮ ಮೈಸೂರು*<br>ವಯಸ್ಕರ ಶಿಕ್ಷಣ ಪುಸ್ತಕಮಾಲೆ,<br>ಮೈಸೂರು |
| 11. ಗುರುಪಾದ ಮರಿಗುದ್ದಿ | 1989 | : *ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ*<br>ಸಹ್ಯಾದ್ರಿ ಪ್ರಕಾಶನ, ಮೈಸೂರು |
| 12. ಚಕ್ಕರೆ ಶಿವಶಂಕರ್ (ಸಂ.) | 2004 | : *ಸಹ್ಯಾದ್ರಿಯ ಸೂರ್ಯ*<br>ಕನ್ನಡ ಸಾಹಿತ್ಯ ಪರಿಷತ್ತು<br>ಬೆಂಗಳೂರು |
| 13. ಬಸವಾ ಕೆ.ಡಿ. | 1999 | : *ಭಾರತದ ಅರ್ಥವ್ಯವಸ್ಥೆಯ ಪರಿಚಯ*<br>ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ |
| 14. ಮನುದೇವ್ ದೇವಂಗಿ ಎಂ. | 2005 | : *ಸ್ವಾತಂತ್ರ್ಯ ಸೇನಾನಿ ದೇವಂಗಿ ಮಾನಪ್ಪ* (1909 - 1963)<br>ಕಾವ್ಯಾಲಯ ಪ್ರಕಾಶಕರು, ಮೈಸೂರು |
| 15. ಮಾನವಿಕ ಕರ್ನಾಟಕ | 1984 | : ಸಂಪುಟ - 14, ಸಂಚಿಕೆ 3<br>ಮೈಸೂರು ವಿಶ್ವವಿದ್ಯಾಲಯ,<br>ಮೈಸೂರು |
| 16. ಸೂರ್ಯನಾಥ ಕಾಮತ್ | 2006 | : *ಒಕ್ಕಲುತನ ಮತ್ತು ಒಕ್ಕಲಿಗರು : ಇತಿಹಾಸ ಅನ್ವೇಷಣೆ*<br>ಅರ್ಚನ ಪ್ರಕಾಶನ,<br>ಬೆಂಗಳೂರು |

## ಇಂಗ್ಲಿಷ್ ಗ್ರಂಥಗಳು


1. **DHARMA KUMAR** 1984 : *The Cambridge Economic History of India* Vol II, 1757-1970 Orient Longman in association with Cambridge Universsity Press, Hyderabad

2. **HAYARADANA RAO C.** (Ed.) 1929 : *Mysore Gazetteer* Vol. III Economic The Government Press, Bangalore

3. **HAYAVADANA RAO C.** (Ed.) 1929 : Mysore Gazetteer Vol IV-Administraive The Government Press Bangalore

4. **HAYAVADANA RAO C.** (Ed.) 1929 : *Mysore Gazetteer* Vol V, The Government Press Bangalore

5. **MYRDAL, GUNNAR** 1970 : *The Challenge of World Poverty* (A World Anti-Poverty Program in Outline) The Penguin Press, London

6. **SRINIVAS M.N.** 1991(3rd Impression) : *The Remembered Village* Oxford University Press, Delhi 1st Impression - 1976

# ಪರಾಮರ್ಶನ ಗ್ರಂಥಗಳು


1. **ಅಶೋಕ ಟಿ.ಪಿ.** 2004 : *ಕುವೆಂಪು ಕಾದಂಬರಿ ಎರಡು ಅಧ್ಯಯನಗಳು*
ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

2. **ಕಾಳೇಗೌಡ ನಾಗವಾರ, ಆನಂದಮೂರ್ತಿ ಜಿ.ವಿ.** 1997 : *ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ*
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

3. **ಚಂದ್ರಶೇಖರ್ ಟಿ.ಆರ್.** 1999 : *ಅಮರ್ತ್ಯ ಸೇನ್ ಅವರ ಅಭಿವೃದ್ಧಿ ಅಧ್ಯಯನಗಳು*
ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

4. **ನಾಗರಾಜ್ ಎಂ.ಜಿ.** 2006 : *ಕರ್ನಾಟಕ ರೈತ ಚಳುವಳಿ-ಸತ್ಯಾಗ್ರಹಗಳು*
(ಸಹಸ್ರಮಾನ ಸಂಪುಟ - 1)
ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ಬೆಂಗಳೂರು

5. **ನಾರಾಯಣ ಎಂ.** **1979** : **ಜನಸಂಖ್ಯಾ ಅಧ್ಯಯನ**
ಆರ್.ಎಂ. ಪ್ರಕಾಶನ, ಮೈಸೂರು

6. **ಪ್ರಭಾಕರ ಶಿಶಿಲ, ಕುಮಾರಸ್ವಾಮಿ** 1999 : *ಭಾರತೀಯ ಆರ್ಥಿಕತೆಯ ಅಧ್ಯಯನ*
ಕಲಾ ಪ್ರಕಾಶನ, ಬೆಂಗಳೂರು

7. **ಬಿ.ಎಂ.ಶ್ರೀ (ಪ್ರ.ಸಂ.) (ಸಾಲತ್ತೊರೆ ಬಿ.ಎ. ; ದೇಸಾಯಿ ಪಿ.ಬಿ)** 1969 5ನೇ ಮುದ್ರಣ : *ಕನ್ನಡ ನಾಡಿನ ಚರಿತ್ರೆ*
(ಮೊದಲನೆಯ ಭಾಗ)
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
ಮೊದಲ ಮುದ್ರಣ - ತಿಳಿದಿಲ್ಲ

8. ರಾಜಪ್ಪ ಡಿ.ಸಿ. 1995 : ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು ಅಕ್ಷರ ಪ್ರಕಾಶನ, ಹೆಗ್ಗೋಡು

9. ಶಿವರುದ್ರಪ್ಪ ಜಿ.ಎಸ್. (ಸಂ.) 1971 : ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು


## ಇಂಗ್ಲಿಷ್ ಪರಾಮರ್ಶನ ಗ್ರಂಥಗಳು


1. **AMARTYA SEN** 2006 (10th Impression) : *Inequality Re-examined* Oxford Universsity Press, New Delhi 1st Impression - 1995

2. **ANRUDH JAIN, K.; PRAVIN VISARIA** (Ed.) 1988 : *Infant Mortality in India* (Differentials & Determinants) Sage Publications India Pvt. Ltd., New Delhi

3. **COSER, LEWIS A.** (Ed.) 1963 : *Sociology Through Literature* Englewood Cliffs, N.J. Prentice - Hall, Inc.

4. **KOHLI K.L.** 1977 : *Mortality in India* (A Statewise Study) Sterling Publishers Pvt. Ltd., New Delhi

5. **MAHADEVAN K. & OTHERS** 1985 : *Infant and Childhood Mortality in India* (Bio-Social Determinants) Mittal Publications, New Delhi

6. **MISRA PURI** 1989 : *Structure & Problems of Indian Economy* Himalaya Publishing House New Delhi

7. **SHARMA K.L.** 1978 : *Caste, Feudalism & Peasantry* (The Social Formation of Shekhawati) Manohar Publishers & Distributors New Delhi

8. **SHARMA K.L.** (Ed.) 1999 : *Social Inequality in India* (Profiles of Caste, Class & Social Mobility) Rawat Publications New Delhi

9. **SRINIVAS M.N.** 1970 (Reprinted) : *Caste in Modern India and Other Essays* Asia Publishing House Bombay 1st Impression - 1962

10. **THIMMAIAH G.** 1983 : *Inequality and Poverty* (A Case Study of Karnataka) Himalaya Publishing House Bombay

11. **TRIPATHY S.N.** 1989 : *Bonded Labour in India* Discovery Publishing House New Delhi

12. **GEORGE T.J.S.** (Gen. Ed.) 1997 : *INDIA AT 50* Facts, Figurers & Analysis 1947-1997 A Comprechensive reference Volume Expresses Publications (Madurai) Ltd., Chennai




ಹದಿನಾಲ್ಕನೆಯ ಮುದ್ರಣ - ೨೦೦೬

ಉದಯರವಿ ಪ್ರಕಾಶನ

ವಾಣಿವಿಲಾಸಪುರಂ

ಮೈಸೂರು - ೫೭೦ ೦೦೯






ಹನ್ನೊಂದನೆಯ ಮುದ್ರಣ - ೨೦೦೬


ಉದಯರವಿ ಪ್ರಕಾಶನ

ವಾಣಿವಿಲಾಸಪುರಂ

ಮೈಸೂರು - ೫೭೦ ೦೦೯



## ಕುವೆಂಪು ಕಾದಂಬರಿಗಳ ಕಥನ ನಡೆಯುವ ಭೌಗೋಳಿಕ ಸೀಮೆ




ಕೃಪೆ : ಡಾ. ಕೆ.ಪುಟ್ಟಸ್ವಾಮಿ ಅವರ
'ಕುವೆಂಪು ಸಾಹಿತ್ಯ - ಒಂದು ಜೀವಪರಿಸರ ಅಧ್ಯಯನ'
ಅಪ್ರಕಟಿತ ಡಿ.ಲಿಟ್ ಮಹಾಪ್ರಬಂಧ